गुरूर्गुरूतमो धाम
NCTE

ಶಿಕ್ಷಣ ಸಚಿವಾಲಯ
MINISTRY OF EDUCATION
सत्यमेव जयते

NATIONAL MISSION FOR MENTORING

# ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ

## ನೀಲಿ ಪುಸ್ತಕ

**Kannada-ಕನ್ನಡ**

**ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ**

**ಜಿ-7, ಸೆಕ್ಟರ್-10, ದ್ವಾರಕ, ನವ ದೆಹಲಿ- 110075**

NMM

NATIONAL MISSION FOR MENTORING

*ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯ (ಎನ್.ಎಮ್.ಎಮ್) ಲಾಂಛನವು ಮಾರ್ಗದರ್ಶಕ ಹಾಗೂ ಕಲಿಕಾರ್ಥಿಗಳ ಸಹಯೋಗದ ಏಜೆನ್ಸಿ ಎಂಬುದನ್ನು ಸೂಚಿಸುತ್ತಿದ್ದು, ಅಲ್ಲಿ ಪರಸ್ಪರ ವೃತ್ತಿಪರ ಅಭಿವೃದ್ಧಿಗಾಗಿ ಕಲಿಕೆ, ಪ್ರತಿಫಲನ ಮತ್ತು ಸಾಮರ್ಥ್ಯ ವರ್ಧನೆಯ ನಿಟ್ಟಿನಲ್ಲಿ ಹಂಚಿಕೊಳ್ಳುವ ಮನೋಭಾವವನ್ನು ಬೆಳೆಸಲಾಗುತ್ತದೆ. ಈ ಲಾಂಛನದಲ್ಲಿ, ಕಿತ್ತಳೆ ಬಣ್ಣವು ಸಕಾರಾತ್ಮಕತೆ, ಆಶಾವಾದ, ಕ್ರಿಯಾಶೀಲತೆ, ಉತ್ಸಾಹ ಮತ್ತು ಸಹಿಷ್ಣತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಕಡು ನೀಲಿ ಬಣ್ಣವು ಬುದ್ಧಿವಂತಿಕೆ, ವಿಶ್ವಾಸಾರ್ಹತೆ, ನಂಬಲಾರ್ಹತೆ ಮತ್ತು ಜವಾಬ್ದಾರಿಯನ್ನು ಸೂಚಿಸುತ್ತದೆ. ಈ ಎಲ್ಲಾ ಗುಣಲಕ್ಷಣಗಳು ಮಾರ್ಗದರ್ಶನ ನೀಡಲು ಅವಶ್ಯಕವಾಗಿವೆ.*

**Dharmendra Pradhan**
Hon'ble Minister for
Education; Skill Development
and Entrepreneurship
Government of India
Shastri Bhawan
New Delhi-110001

सत्यमेव जयते

**ಧರ್ಮೇಂದ್ರ ಪ್ರಧಾನ್**
ಮಾನ್ಯ ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಹಾಗೂ
ಉದ್ಯಮಶೀಲತೆ ಮಂತ್ರಿ
ಭಾರತ ಸರ್ಕಾರ,
ಶಾಸ್ತ್ರಿ ಭವನ,
ನವ ದೆಹಲಿ -110001



## ಸಂದೇಶ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ಪರಿವರ್ತಕ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸುತ್ತದೆ, ಇದು ಪ್ರತಿ ವಿದ್ಯಾರ್ಥಿಗೆ ಅಂತರ್ಗತ ಮತ್ತು ಸಮಾನವಾದ ಕಲಿಕೆಯ ವಾತಾವರಣವನ್ನು ನಿರ್ಮಿಸುವ ನಿಟ್ಟಿನಲ್ಲಿ ಶಿಕ್ಷಕರನ್ನು ಸಬಲೀಕರಣಗೊಳಿಸುತ್ತದೆ. ಆದರೆ ಈ ದೃಷ್ಟಿಕೋನವು ಒಂದು ಪ್ರಮುಖವಾದ ಅಂಶದ ಮೇಲೆ ಅವಲಂಬಿತವಾಗಿದೆ, ಅದೆಂದರೆ- ಸಬಲೀಕೃತ ಶಿಕ್ಷಕರು.

ನಮ್ಮ ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರು ವಹಿಸುವ ನಿರ್ಣಾಯಕ ಪಾತ್ರವನ್ನು ಈ ನೀತಿಯು ಗುರುತಿಸುತ್ತದೆ. ಈ ದೃಷ್ಟಿಕೋನಕ್ಕೆ ಹೊಂದಿಕೊಂಡು ಎನ್.ಎಮ್.ಎಮ್ ಭಾರತದ ಎಲ್ಲಾ ಶಾಲಾ ಶಿಕ್ಷಕರಿಗೆ ಮಾರ್ಗದರ್ಶಕ ಬೆಂಬಲವನ್ನು ಒದಗಿಸುವ ಗುರಿಯನ್ನು ಹೊಂದಿದೆ ಮತ್ತು ಅವರ ಬೋಧನಾ ಅಭ್ಯಾಸಗಳನ್ನು ಸುಧಾರಿಸಲು ಮತ್ತು ಅವರ ಒಟ್ಟಾರೆ ವೃತ್ತಿಪರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಹೆಚ್ಚಿಸಲು ಶಿಕ್ಷಕರನ್ನು ಬೆಂಬಲಿಸುವ ಮತ್ತು ಸಬಲೀಕರಣಗೊಳಿಸುವ ಮಾರ್ಗದರ್ಶಕರ ಜಾಲವನ್ನು ರಚಿಸುತ್ತದೆ. ಈ ಯೋಜನೆಯು ಕೇವಲ ಬೆಂಬಲದ ಬಗ್ಗೆ ಅಲ್ಲ; ಇದು ಸಾಮರ್ಥ್ಯವನ್ನು ಪ್ರದರ್ಶಿಸುವ ಬಗ್ಗೆ. ಕಠಿಣ ಮತ್ತು ನಿರಂತರ ಮಾರ್ಗದರ್ಶನದ ಮೂಲಕ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ವೈವಿಧ್ಯಮಯ ಕಲಿಕೆಯ ಅಗತ್ಯಗಳನ್ನು ಪೂರೈಸಲು ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಪರಿಷ್ಕರಿಸಲು ಸಾಧ್ಯವಾಗುತ್ತದೆ ಮತ್ತು ಅವರ ಜೀವನದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಉಂಟುಮಾಡಬಹುದು.

ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ (ಎನ್.ಸಿ.ಟಿ.ಇ) ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ ಕುರಿತಂತೆ ನೀಲಿ ಪುಸ್ತಕವನ್ನು (ದಿ ಬ್ಲೂ ಬುಕ್) ಅಭಿವೃದ್ಧಿಪಡಿಸಿದೆ. ಈ ಸಮಗ್ರ ದಾಖಲಾತಿಯು ಒಂದು ಕೈಪಿಡಿ ಎಂಬುದಕ್ಕಿಂತ ಹೆಚ್ಚಾಗಿ ಇದೊಂದು ಉತ್ಕೃಷ್ಟತೆಯ ಮಾರ್ಗಸೂಚಿಯಾಗಿದ್ದು, ಸ್ಪಷ್ಟ ಉದ್ದೇಶಗಳು, ಪರಿಣಾಮಕಾರಿ ತಂತ್ರಗಳು ಮತ್ತು ಶಿಕ್ಷಕರು ಮತ್ತು ಮಾರ್ಗದರ್ಶಕರಿಗೆ ಪ್ರಾಯೋಗಿಕ ಮಾರ್ಗಸೂಚಿಗಳನ್ನು ವಿವರಿಸುತ್ತದೆ. ಇದು ನಮ್ಮ ಶಿಕ್ಷಕರನ್ನು ತಮ್ಮ ವಿದ್ಯಾರ್ಥಿಗಳಲ್ಲಿ ಪೋಷಿಸಲು ಅಗತ್ಯವಿರುವ 21ನೇ ಶತಮಾನದ ಕೌಶಲ್ಯಗಳೊಂದಿಗೆ ಸಜ್ಜುಗೊಳಿಸಲು ರಚನಾತ್ಮಕ ಚೌಕಟ್ಟನ್ನು ಒದಗಿಸುತ್ತದೆ, ಜೊತೆಗೆ ಮುಂಬರುವ ಕ್ರಿಯಾತ್ಮಕ ಜಗತ್ತಿನಲ್ಲಿ ಬದುಕಲು ಮಾತ್ರವಲ್ಲದೆ ಅಭಿವೃದ್ಧಿ ಹೊಂದಲು ಸಿದ್ಧವಾಗಿರುವ ಪೀಳಿಗೆಯನ್ನು ಸಜ್ಜುಗೊಳಿಸುತ್ತದೆ.

ಈ ಉಪಕ್ರಮವನ್ನು ಮುನ್ನಡೆಸಿದ್ದಕ್ಕಾಗಿ ನಾನು ಎನ್.ಸಿ.ಟಿ.ಇ ಗೆ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಲು ಬಯಸುತ್ತೇನೆ. ಈ ಪುಸ್ತಕವು ಶಿಕ್ಷಕರಿಗೆ ಮತ್ತು ಮಾರ್ಗದರ್ಶಕರಿಗೆ ಸಮಾನವಾಗಿ ಅಮೂಲ್ಯವಾದ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನನಗೆ ವಿಶ್ವಾಸವಿದ್ದು, ಬೋಧನೆ ಮತ್ತು ಕಲಿಕೆಗೆ ಉತ್ಕೃಷ್ಟವಾದ ಮಾರ್ಗದರ್ಶನ ನೀಡುತ್ತದೆ.

**(ಧರ್ಮೇಂದ್ರ ಪ್ರಧಾನ್)**

NMM

NATIONAL MISSION FOR MENTORING



**ಅನ್ನಪೂರ್ಣ ದೇವಿ**
ಮಾನ್ಯ ರಾಜ್ಯ ಖಾತೆ ಶಿಕ್ಷಣ
ಸಚಿವರು
ಶಿಕ್ಷಣ ಸಚಿವಾಲಯ
ಭಾರತ ಸರ್ಕಾರ

## ಸಂದೇಶ

ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ (ಎನ್.ಸಿ.ಟಿ.ಇ) ಯಿಂದ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ (ಎನ್.ಎಮ್.ಎಮ್) ಕುರಿತ ನೀಲಿ ಪುಸ್ತಕವನ್ನು ಸೂಕ್ಷ್ಮವಾಗಿ ವಿನ್ಯಾಸಗೊಳಿಸಿದ್ದು, ನವೀನ ಮೈಲಿಗಲ್ಲುಗಳನ್ನು ಸ್ಥಾಪಿಸುತ್ತದೆ. ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುವ ಶಾಲಾ ಶಿಕ್ಷಕರಿಗೆ ವಿವಿಧ ವೃತ್ತಿಪರರನ್ನು ಮಾರ್ಗದರ್ಶಕರಾಗಿ ಗುರುತಿಸುವ ಮೂಲಕ, ಎನ್.ಎಮ್.ಎಮ್ ಶಿಕ್ಷಣಕ್ಕೆ ಪರಿವರ್ತಕ ವಿಧಾನವನ್ನು ಪರಿಚಯಿಸುತ್ತದೆ. ಮಾರ್ಗದರ್ಶಕ-ಕಲಿಕಾರ್ಥಿ ನಡುವಿನ ಕ್ರಿಯಾತ್ಮಕ ಸಂವಾದಕ್ಕಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು, ಒಬ್ಬರ ವೃತ್ತಿಪರ ಬೆಳವಣಿಗೆಯನ್ನು ರೂಪಿಸುವಲ್ಲಿ ಶಿಕ್ಷಕರು ವಹಿಸುವ ಅಮೂಲ್ಯ ಪಾತ್ರವನ್ನು ಈ ಯೋಜನೆಯು ಒತ್ತಿಹೇಳುತ್ತದೆ. ಈ ಪುಸ್ತಕವು ಎನ್.ಸಿ.ಟಿ.ಇ ತಂಡದ ಸಮರ್ಪಣೆಯನ್ನು ಪ್ರತಿಬಿಂಬಿಸುವ ಈ ಅದ್ಭುತ ಶಿಕ್ಷಕ-ಕೇಂದ್ರಿತ ಕಾರ್ಯಕ್ರಮದ ಸಮಗ್ರ ಒಳನೋಟಗಳನ್ನು ಒದಗಿಸುತ್ತದೆ.

ನಾನು ಅವರ ಪ್ರಯತ್ನಗಳನ್ನು ಶ್ಲಾಘಿಸುತ್ತೇನೆ ಮತ್ತು ಎನ್.ಎಮ್.ಎಮ್ ಶಿಕ್ಷಣತಜ್ಞರನ್ನು ಸಬಲೀಕರಣಗೊಳಿಸಲು ಮತ್ತು ನಮ್ಮ ದೇಶದಲ್ಲಿ ಪ್ರಬುದ್ಧ ಶಿಕ್ಷಣದ ಭವಿಷ್ಯವನ್ನು ಉತ್ತೇಜಿಸಲು ಎದುರು ನೋಡುತ್ತಿದ್ದೇನೆ.

ನಿಮಗೆ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

**********************************************************************************************



**ಸಂಜಯ್ ಕುಮಾರ್**
**ಐಎಎಸ್**
ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ
ಇಲಾಖೆ
ಶಿಕ್ಷಣ ಸಚಿವಾಲಯ
ಭಾರತ ಸರ್ಕಾರ

## ಸಂದೇಶ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ), 2020 ಬೋಧನೆ-ಕಲಿಕೆಯಲ್ಲಿ ನಮ್ಯತೆ, ಸೃಜನಶೀಲತೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಮೂಲಕ ಗುಣಮಟ್ಟದ ಶಿಕ್ಷಣದ ಬಗ್ಗೆ ಒತ್ತಿಹೇಳುತ್ತದೆ. ಶಿಕ್ಷಕರಿಗೆ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ (ಎನ್.ಎಮ್.ಎಮ್) ಯು ವೃತ್ತಿಪರರು ಮತ್ತು ತಜ್ಞರಿಗೆ ವೇದಿಕೆಗಳನ್ನು ಒದಗಿಸುತ್ತದೆ, ಅಲ್ಲಿ ಅವರು ಜ್ಞಾನ, ಕೌಶಲ್ಯ ಮತ್ತು ಪರಿಣತಿಯನ್ನು ಕಲಿಕಾರ್ಥಿಗಳು ಶಿಕ್ಷಕರೊಂದಿಗೆ ಹಂಚಿಕೊಳ್ಳಬಹುದು ಮತ್ತು ಅವರು ಪರಿಣಾಮಕಾರಿ ಶಿಕ್ಷಕರಾಗುವ ಹಾದಿಯಲ್ಲಿ ಸಹಾಯ ಮಾಡಬಹುದು. ಎನ್.ಎಮ್.ಎಮ್ ನಲ್ಲಿನ ನೀಲಿ ಪುಸ್ತಕವು ಮಾರ್ಗದರ್ಶನದ ಪರಿಕಲ್ಪನೆಯಿಂದ ಮೊದಲ್ಗೊಂಡು ಮಾರ್ಗದರ್ಶನ ಕಾರ್ಯಕ್ರಮದ ಅನುಷ್ಠಾನದವರೆಗೆ ಮಾರ್ಗದರ್ಶನ ಕುರಿತು ಸಮಗ್ರ ತಿಳಿವಳಿಕೆಯನ್ನು ಒದಗಿಸುತ್ತದೆ.


ಎನ್.ಎಮ್.ಎಮ್ ಕುರಿತ ನೀಲಿ ಪುಸ್ತಕದೊಂದಿಗಿನ ಪರಿಕಲ್ಪನೆ ಮತ್ತು ಮುಂಬರುವ ಈ ಸಹಯೋಗದ ಅಭ್ಯಾಸ ಹೊತ್ತಿಗೆಗಾಗಿ ನಾನು ಎನ್.ಸಿ.ಟಿ.ಇ ಯನ್ನು ಅಭಿನಂದಿಸುತ್ತೇನೆ.

ಶುಭಾಷಯಗಳು.

NMM

NATIONAL MISSION FOR MENTORING

## ಸಂದೇಶ



ಪ್ರೊ. ಯೋಗೇಶ್ ಸಿಂಗ್
ಅಧ್ಯಕ್ಷರು
ಎನ್.ಸಿ.ಟಿ.ಇ, ನವದೆಹಲಿ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ಶೈಕ್ಷಣಿಕ ಆಕಾಂಕ್ಷೆಗಳನ್ನು ಪೂರೈಸುವಲ್ಲಿ ಸಮರ್ಥ ಶಿಕ್ಷಕರ ನಿರ್ಣಾಯಕ ಪಾತ್ರವನ್ನು ಒತ್ತಿಹೇಳುತ್ತದೆ. ಮಾರ್ಗದರ್ಶನ, ಸಂಬಂಧಗಳ ಶಕ್ತಿಯನ್ನು ಗುರುತಿಸುವುದು, 21ನೇ ಶತಮಾನದ ಬೇಡಿಕೆಗಳಿಗಾಗಿ ಶಿಕ್ಷಣತಜ್ಞರು ಮತ್ತು ನಾಯಕರನ್ನು ಬೆಂಬಲಿಸುತ್ತದೆ. ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ (ಎನ್.ಎಮ್.ಎಮ್) ರಚನಾತ್ಮಕ ಮಾರ್ಗದರ್ಶನ ಸಂಬಂಧಗಳ ಮೂಲಕ ಸಾಂಸ್ಥಿಕ ಬೆಂಬಲವನ್ನು ಒದಗಿಸಲು ಬದ್ಧವಾಗಿದೆ. ಎನ್.ಎಮ್.ಎಮ್ ನಲ್ಲಿನ ನೀಲಿ ಪುಸ್ತಕ ಶಿಕ್ಷಕರಿಗೆ ಭವಿಷ್ಯವನ್ನು ರೂಪಿಸಿಕೊಳ್ಳಲು ಸಬಲೀಕರಣಗೊಳಿಸುತ್ತದೆ, ವಿಮರ್ಶಾತ್ಮಕ ಚಿಂತನೆ ಮತ್ತು ಹೊಂದಾಣಿಕೆಯನ್ನು ಉತ್ತೇಜಿಸುತ್ತದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಎಲ್ಲಾ ಶಿಕ್ಷಕರು ಈ ಯೋಜನೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ನಾನು ಕೋರುತ್ತೇನೆ.

ಈ ಪುಸ್ತಕವನ್ನು ರಚಿಸುವಲ್ಲಿ ಅವರ ಅನುಕರಣೀಯ ಕೆಲಸಕ್ಕಾಗಿ ನಾನು ಎನ್.ಸಿ.ಟಿ.ಇ ತಂಡಕ್ಕೆ ನನ್ನ ಪ್ರಾಮಾಣಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಶಾಲೆಗಳು ಮತ್ತು ವಿಶಾಲವಾದ ಬೋಧನಾ ಸಮುದಾಯದಲ್ಲಿ ನಾವು ಸಹಕಾರದಿಂದ ಮಾರ್ಗದರ್ಶನ ಮತ್ತು ಬೆಂಬಲದ ಸಂಸ್ಕೃತಿಯನ್ನು ರಚಿಸೋಣ.

---

## ಸಂದೇಶ



ಕೆಸಾಂಗ್ ವೈ. ಶೆರ್ಪಾ
ಐ.ಆರ್.ಎಸ್
ಸದಸ್ಯ ಕಾರ್ಯದರ್ಶಿ
ಎನ್.ಸಿ.ಟಿ.ಇ, ನವದೆಹಲಿ

ರಾಷ್ಟ್ರೀಯ ಶಿಕ್ಷಣ ನೀತಿ, (ಎನ್.ಇ.ಪಿ) 2020 ರ ಮೂಲಾಧಾರವಾಗಿ ಶಿಕ್ಷಕರನ್ನು ಗುರುತಿಸುತ್ತಾ ಎನ್.ಸಿ.ಟಿ.ಇ ಯು ಎನ್.ಎಮ್.ಎಮ್ ಅನ್ನು ಶಿಕ್ಷಕರ ಬೆಂಬಲಕ್ಕಾಗಿ ಒಂದು ಮಾದರಿ ಬದಲಾವಣೆಯಾಗಿ ಪರಿಚಯಿಸುತ್ತದೆ. ಎನ್.ಎಮ್.ಎಮ್., ಲಭ್ಯ ತಂತ್ರಜ್ಞಾನವನ್ನು ಬಳಸಿಕೊಂಡು, ತಡೆರಹಿತ 'ಮಾರ್ಗದರ್ಶಕ-ಕಲಿಕಾರ್ಥಿ' ಸಂಪರ್ಕಗಳನ್ನು ಬೆಳೆಸುತ್ತದೆ, ಭೌಗೋಳಿಕ ಗಡಿಗಳನ್ನು ಮೀರಿಸುತ್ತದೆ ಮತ್ತು ಭೌತಿಕ ಅಡೆತಡೆಗಳನ್ನು ತೆಗೆದುಹಾಕುತ್ತದೆ. ಈ ಡಿಜಿಟಲ್ ಸೇತುವೆಯು ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ನಿಕಟ ಮತ್ತು ನಿರಂತರ ಮಾರ್ಗದರ್ಶನವನ್ನು ಶಕ್ತಗೊಳಿಸುತ್ತದೆ. ಮಾರ್ಗದರ್ಶಕರಾಗಿ ಅನುಭವಿ ವೃತ್ತಿಪರರು ವರ್ಚುವಲ್ ಸಮಾಲೋಚನೆಗಳು ಮತ್ತು ಸಹಯೋಗದ ವೇದಿಕೆಗಳ ಮೂಲಕ ಕಲಿಕಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾರೆ. ಎನ್.ಎಮ್.ಎಮ್ ನಲ್ಲಿನ ನೀಲಿ ಪುಸ್ತಕವು ಕಾರ್ಯಕ್ರಮದ ಬಗ್ಗೆ ಸಮಗ್ರ ಒಳನೋಟಗಳನ್ನು ನೀಡುತ್ತದೆ.

ಎನ್.ಎಮ್.ಎಮ್ ಶಿಕ್ಷಕರನ್ನು ಸಶಕ್ತಗೊಳಿಸಲು ಮತ್ತು ಭಾರತೀಯ ಶಿಕ್ಷಣಕ್ಕೆ ಉಜ್ವಲ ಭವಿಷ್ಯವನ್ನು ರೂಪಿಸಲು ಬೆಂಬಲ ನೀಡುವ ಹಿರಿಯರು, ಸಮರ್ಪಿತ ಎನ್.ಸಿ.ಟಿ.ಇ ತಂಡ ಮತ್ತು ಪಾಲುದಾರರಿಗೆ ನನ್ನ ಕೃತಜ್ಞತೆಗಳು.

NATIONAL MISSION FOR MENTORING

# ಪರಿವಿಡಿ


ಮುನ್ನುಡಿ I-V

ಪರಿವಿಡಿ VII

ಚಿತ್ರಗಳ ಪಟ್ಟಿ X

ಕೋಷ್ಟಕಗಳ ಪಟ್ಟಿ X

ಕಾರ್ಯನಿರ್ವಾಹಕ ಸಾರಾಂಶ XI

**ಅಧ್ಯಾಯ I: ಭಾರತದಲ್ಲಿ ಶಿಕ್ಷಣ**

1.1. ಭಾರತದಲ್ಲಿ ಶಿಕ್ಷಣ: ಪ್ರಸ್ತುತ ಸ್ಥಿತಿಗತಿಗಳು 2

1.2. ಶಿಕ್ಷಕರ ಪಾತ್ರ 3

1.3. ಸಂಕೀರ್ಣತೆ ಮತ್ತು ಉದಯೋನ್ಮುಖ ಸವಾಲುಗಳು 4

1.4 ಪ್ರಸ್ತುತತೆ ಮತ್ತು ಸಂದರ್ಭ 4

1.5 ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿ- 2020 ರ ನೋಟ 4

1.5.1. ವಿದ್ಯಾರ್ಥಿಗಳಿಗೆ 5

1.5.2. ಶಿಕ್ಷಕರಿಗೆ 5

1.5.3. ಶಾಲಾ ನಾಯಕರಿಗೆ 5

1.5.4. ಶೈಕ್ಷಣಿಕ ನಾಯಕರು ಮತ್ತು ಸಂಸ್ಥೆಗಳಿಗೆ 5

**ಅಧ್ಯಾಯ II: ಮಾರ್ಗದರ್ಶನದ ಪರಿಚಯ**

2.1. ಮಾರ್ಗದರ್ಶನದ ಪರಿಕಲ್ಪನೆ 8

2.2 ಮಾರ್ಗದರ್ಶನದ ತತ್ವಗಳು 9

2.3 ಮಾರ್ಗದರ್ಶನಕ್ಕೆ ಸಂಬಂಧಿಸಿದ ಸಾಮಾನ್ಯ ಅಪನಂಬಿಕೆಗಳು 10

**ಅಧ್ಯಾಯ III: ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ- ಪರಿಚಯ**

3.1. ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯ ಅವಶ್ಯಕತೆ 12

3.2. ಯೋಜನೆಯನ್ನು ಹೇಗೆ ಸಾಧಿಸಲಾಗುತ್ತದೆ? 12

3.3. ಯೋಜನೆಯ ನಿರೀಕ್ಷಿತ ಫಲಿತಾಂಶಗಳು ಯಾವುವು? 15

**ಅಧ್ಯಾಯ IV: ಮಾರ್ಗದರ್ಶನಕ್ಕಾಗಿ ಪರಿಹಾರಗಳು**

4.1. ಮಾರ್ಗದರ್ಶಕರ ಆಯ್ಕೆ 18

4.1.1. ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆ 18

4.2. ಮಾರ್ಗದರ್ಶಕರ ಗುಣಲಕ್ಷಣಗಳು 18

4.3. ಕಲಿಕಾರ್ಥಿಗಳ ಗುಣಲಕ್ಷಣಗಳು 21

4.4 ಮಾರ್ಗದರ್ಶಕರ ಅಭಿವೃದ್ಧಿ 22

4.4.1. ಮಾರ್ಗದರ್ಶಿ ತರಬೇತಿ ಕಾರ್ಯಕ್ರಮ 22

4.4.1.1. ಮಾರ್ಗದರ್ಶನದ ಅಡಿಪಾಯಗಳು (ಮೂಲ ಕೌಶಲ್ಯಗಳು) 22

4.4.1.2. ಮಾರ್ಗದರ್ಶನದ ವಿಧಗಳು 23

4.4.2. ಮಾರ್ಗದರ್ಶಕರಿಗೆ ನಿರಂತರ ವೃತ್ತಿಪರ ಅಭಿವೃದ್ಧಿ 26

4.5 ಮಾರ್ಗದರ್ಶನಕ್ಕಾಗಿ ಕ್ಷೇತ್ರಗಳು 27

4.6. ಮಾರ್ಗದರ್ಶನದ ಸಂವಾದ 30

**ಅಧ್ಯಾಯ V: ಮಾರ್ಗದರ್ಶನ ಕಾರ್ಯಕ್ರಮದ ಅಂಶಗಳು**

5.1. ಕಾರ್ಯಕ್ರಮ ವಿನ್ಯಾಸ ಮತ್ತು ಯೋಜನೆ 32

5.1.1. ಮಾರ್ಗದರ್ಶಕರ ಪ್ರಗತಿ 32

5.2 ಕಾರ್ಯಕ್ರಮ ನಿರ್ವಹಣೆ 33

5.3 ಕಾರ್ಯಕ್ರಮದ ಕಾರ್ಯಾಚರಣೆಗಳು 33

5.3.1. ಪಾತ್ರಗಳು ಮತ್ತು ಜವಾಬ್ದಾರಿಗಳು 34

5.3.2. ಮಾರ್ಗದರ್ಶನದ ವಿವಿಧ ಹಂತಗಳ ಕಾರ್ಯಾಚರಣೆಗಳ ಕಾರ್ಯಕ್ರಮಗಳಿಗೆ ಶಿಫಾರಸ್ಸುಗಳು 35

5.4 ಕಾರ್ಯಕ್ರಮದ ಮೌಲ್ಯಮಾಪನ 36

5.5 ಸಾಂಸ್ಥಿಕೀಕರಣ 39

5.6. ಪ್ರೋತ್ಸಾಹೀಕರಣ 39

5.7. ಮಾರ್ಗದರ್ಶನ ಕಾರ್ಯಕ್ರಮಗಳಿಗೆ ಸವಾಲುಗಳು 40

5.8 ಕುಂದುಕೊರತೆ ಪರಿಹಾರ ಕಾರ್ಯವಿಧಾನ 42

**ಅಧ್ಯಾಯ VI: ರಾಷ್ಟ್ರೀಯ ಮಾರ್ಗದರ್ಶನಕ್ಕೆ ಮೂಲಸೌಕರ್ಯ**

6.1. ಪರಿಚಯ 44

6.2 ವಿನ್ಯಾಸ ತತ್ವಗಳು 44

6.3. ಮಾರ್ಗದರ್ಶಕ-ಕಲಿಕಾರ್ಥಿ ಸಂವಾದವನ್ನು ಸಕ್ರಿಯಗೊಳಿಸುವುದು 46

6.4 ತಂತ್ರಜ್ಞಾನದ ಘಟಕಗಳು 47

6.5 ಏಕೀಕೃತ ಮಾರ್ಗದರ್ಶನದ ಇಂಟರ್ಫೇಸ್ 48

6.5.1. ಅನ್ವೇಷಣಾಶೀಲತೆ 48

6.5.2. ವಿಶ್ವಾಸಾರ್ಹತೆ 48

6.6. ಏಕೀಕೃತ ಮಾರ್ಗದರ್ಶಕ ಜಾಲ (ಯೂನಿಫೈಡ್ ಮೆಂಟರಿಂಗ್ ನೆಟ್ವರ್ಕ್-UMN) 49

6.7. ಪ್ಲಾಟ್‌ಫಾರ್ಮ್ ಆಡಳಿತ 49

## ಅಧ್ಯಾಯ VII: ಪಯಣ ಮತ್ತು ಮುಂದಿನ ಹಾದಿ

7.1. ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯ ಪಯಣ 52

7.2 ಮುಂದಿನ ಹಾದಿ 52

## ಗ್ರಂಥ ಸೂಚಿ 54

## ಅನುಬಂಧಗಳು 55

ಅನುಬಂಧ - I 56

ಅನುಬಂಧ - II 59

ಅನುಬಂಧ - III 61

ಅನುಬಂಧ - IV 62

# ಚಿತ್ರಗಳ ಪಟ್ಟಿ


| | |
|---|---|
| ಚಿತ್ರ1.1: ಭಾರತದಲ್ಲಿ ಶಿಕ್ಷಣ | 2 |
| ಚಿತ್ರ 1.2: ಶಿಕ್ಷಕರ ಪಾತ್ರ | 3 |
| ಚಿತ್ರ 3.1: ಸಂವಾದದಲ್ಲಿ ತೊಡಗಿರುವ ಕಾರ್ಯಕರ್ತರು ಒಂದು ಘಟಕವಾಗಿ ಗುರಿಯತ್ತ ಸಾಗುತ್ತಿದ್ದಾರೆ | 13 |
| ಚಿತ್ರ 3.2: ಮಾರ್ಗದರ್ಶನದ ಕಾರ್ಯಕರ್ತರು | 14 |
| ಚಿತ್ರ 3.3: ಪಾಲುದಾರರ ನಡುವಿನ ಪರಸ್ಪರ ಕ್ರಿಯೆಗಳ ತತ್ವಗಳು | 14 |
| ಚಿತ್ರ 3.4: ಯೋಜನೆಯ ಪ್ರಮುಖ ಹಂತಗಳು | 15 |
| ಚಿತ್ರ 5.1: ಮಾರ್ಗದರ್ಶಕ ಪ್ರಗತಿ | 33 |
| ಚಿತ್ರ 5.2: ಮಾರ್ಗದರ್ಶನಕ್ಕಾಗಿ ಮೌಲ್ಯಮಾಪನ ಮೆಟ್ರಿಕ್ಸ್ | 37 |
| ಚಿತ್ರ 6.1: ರಾಷ್ಟ್ರೀಯ ಮಾರ್ಗದರ್ಶನ ಮೂಲಸೌಕರ್ಯದ ವಿನ್ಯಾಸ ತತ್ವಗಳು | 45 |
| ಚಿತ್ರ 6.2: ತಂತ್ರಜ್ಞಾನ ಮೂಲಸೌಕರ್ಯದಲ್ಲಿ ಸಕ್ರಿಯಗೊಳಿಸಲಾದ ಪ್ರಮುಖ ಕ್ರಿಯೆಗಳು | 47 |
| ಚಿತ್ರ 6.3: ಏಕೀಕೃತ ಮಾರ್ಗದರ್ಶಕ ಜಾಲ- ಘಟಕ ಮಟ್ಟದ ನೋಟ | 47 |
| ಚಿತ್ರ 7.1: ಮುಂದಿನ ಹಾದಿ | 53 |


# ಕೋಷ್ಟಕಗಳ ಪಟ್ಟಿ


| | |
|---|---|
| ಕೋಷ್ಟಕ 4.1: ಕೌಶಲ್ಯಗಳು, ಘಟಕಗಳು ಮತ್ತು ವಿವರಣೆ | 22 |
| ಕೋಷ್ಟಕ 4.2: ಮಾರ್ಗದರ್ಶನದ ವಿಧಾನಗಳು | 25 |
| ಕೋಷ್ಟಕ 4.3: ಮಾರ್ಗದರ್ಶಕರ ತರಬೇತಿ ಮತ್ತು ಕೌಶಲ್ಯಗಳ ಮಟ್ಟ | 26 |
| ಕೋಷ್ಟಕ 4.4: ಮಾರ್ಗದರ್ಶನ ಮತ್ತು ವ್ಯಾಖ್ಯಾನದ ಕ್ಷೇತ್ರಗಳು | 27 |
| ಕೋಷ್ಟಕ 5.1: ಪಾಲುದಾರರು ಮತ್ತು ಜವಾಬ್ದಾರಿಗಳು | 34 |
| ಕೋಷ್ಟಕ 5.2: ಉದ್ದೇಶಗಳು ಹಾಗೂ ಪರಿಣಾಮದ ಸೂಚಕ | 38 |
| ಕೋಷ್ಟಕ 5.3: ಪ್ರೋತ್ಸಾಹಕಗಳ ವಿಧಗಳು | 40 |
| ಕೋಷ್ಟಕ 6.1: ಮಾನದಂಡಗಳು ಮತ್ತು ಪ್ರಶ್ನೆಗಳು | 49 |

# ಕಾರ್ಯನಿರ್ವಾಹಕ ಸಾರಾಂಶ

ವಿದ್ಯಾರ್ಥಿಗಳ ಕಲಿಕೆಯ ದೊಡ್ಡ ಧ್ಯೇಯೋದ್ದೇಶಕ್ಕೆ ಪರಿಣಾಮಕಾರಿಯಾಗಿ ಕೊಡುಗೆ ನೀಡಲು ಶಿಕ್ಷಕರಿಗೆ ನಿರಂತರ ಕಲಿಕೆ ಮತ್ತು ಅಭಿವೃದ್ಧಿ ಪಡಿಸುವುದು ಅಗತ್ಯವೆಂದು ಭಾರತದಲ್ಲಿನ ವಿವಿಧ ಹಂತದ ಶೈಕ್ಷಣಿಕ ಕಾರ್ಯಕರ್ತರು ಭಾವಿಸಿದ್ದಾರೆ. 'ಮಾರ್ಗದರ್ಶನ ಕುರಿತು ನೀಲಿ ಪುಸ್ತಕವು' (ದಿ ಬ್ಲೂ ಬುಕ್) ನಿರಂತರವಾಗಿ ಹೆಚ್ಚುತ್ತಿರುವ ಈ ಅಗತ್ಯವನ್ನು ಪೂರೈಸುವ ಪ್ರಯತ್ನಗಳ ಫಲಿತಾಂಶವಾಗಿದೆ. 'ಮಾರ್ಗದರ್ಶನ' ಎಂಬ ಪದವು, ಅನುಭವಿ ಮಾರ್ಗದರ್ಶಕರು ಏನು ಮಾಡುತ್ತಾರೆ ಮತ್ತು ಅವರ ಅನುಭವದಿಂದ ಕಲಿಕಾರ್ಥಿಗಳು ಏನನ್ನು ಕಲಿಯಲು ಬಯಸುತ್ತಾರೆ ಎಂಬುದರ ಕುರಿತು ಅವರುಗಳ ನಡುವಿನ ಪರಸ್ಪರ ರಚನಾತ್ಮಕ ಕ್ರಿಯೆಯನ್ನು ಉಲ್ಲೇಖಿಸಲು ಬಳಸುವುದು ಈ ನೀಲಿ ಪುಸ್ತಕದ ತಿರುಳಾಗಿದೆ. ಇದು ವ್ಯವಸ್ಥೆಯಲ್ಲಿ ಲಭ್ಯವಿರುವ ಪರಿಣತಿಯನ್ನು ಹತೋಟಿಗೆ ತರಲು ಪರಿಹಾರವಾಗಿ 'ಮಾರ್ಗದರ್ಶನ'ವನ್ನು ಅನ್ವೇಷಿಸುವ ಶಿಕ್ಷಣದ ವ್ಯಾಪ್ತಿಯಲ್ಲಿ ವಿವಿಧ ಪಾಲುದಾರರಿಗೆ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲು ಪ್ರಯತ್ನಿಸುತ್ತದೆ.

ಈ ನೀಲಿ ಪುಸ್ತಕವನ್ನು ಏಳು ವಿಭಿನ್ನ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ-

*ಅಧ್ಯಾಯ 1* ಭಾರತದಲ್ಲಿನ ಶಿಕ್ಷಣದ ಸ್ಥಿತಿಯ ಕುರಿತು ಸಂಕ್ಷಿಪ್ತವಾಗಿ ಒಂದು ಸನ್ನಿವೇಶವನ್ನು ಒದಗಿಸುತ್ತದೆ. ಇದುವರೆಗಿನ ಸರ್ಕಾರದ ಉಪಕ್ರಮಗಳ ಯಶಸ್ಸನ್ನು ಇದು ಒಳಗೊಳ್ಳುತ್ತದೆ ಹಾಗೂ ಕೆಲವು ಪ್ರಭಾವದ ಸೂಚಕಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ರಾಷ್ಟ್ರವ್ಯಾಪಿ ನೀತಿಗಳು ಮತ್ತು ಯೋಜನೆಗಳ ಗುರಿಗಳನ್ನು ಎತ್ತಿ ತೋರಿಸುತ್ತದೆ. ಇದು ಎನ್.ಇ.ಪಿ 2020 ರೊಂದಿಗೆ ಹೊಂದಾಣಿಕೆ ಮಾಡಿದಾಗ ಮಾರ್ಗದರ್ಶನದ ಅಗತ್ಯತೆಯೊಂದಿಗೆ ಶಿಕ್ಷಣ ವ್ಯವಸ್ಥೆಯಲ್ಲಿ ಉದಯೋನ್ಮುಖ ಸವಾಲುಗಳನ್ನು ಎತ್ತಿ ತೋರಿಸುತ್ತದೆ.

*ಅಧ್ಯಾಯ 2* ಮಾರ್ಗದರ್ಶನದ ಪರಿಕಲ್ಪನೆಯೆಡೆಗೆ ಗಮನವನ್ನು ಹರಿಸುತ್ತದೆ. ಮಾರ್ಗದರ್ಶದ ಕಾರ್ಯಕ್ರಮವನ್ನು ಯಾವ ತತ್ವಗಳ ಮೇಲೆ ಆಲೋಚಿಸಲಾಗಿದೆ ಎಂಬುದನ್ನು ಇದು ಎತ್ತಿ ತೋರಿಸುತ್ತದೆ. ಈ ಅಧ್ಯಾಯವು ಮಾರ್ಗದರ್ಶನದ ಬಗ್ಗೆ ಸಾಮಾನ್ಯ ನಂಬಿಕೆಗಳನ್ನು ಸಹ ಉಲ್ಲೇಖಿಸುತ್ತದೆ.

*ಅಧ್ಯಾಯ 3* 'ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ' (ನ್ಯಾಷನಲ್ ಮಿಷನ್ ಫಾರ್ ಮೆಂಟರಿಂಗ್-ಎನ್.ಎಮ್.ಎಮ್)ಯ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಇದು 'ಮಾರ್ಗದರ್ಶಿಗಳು', 'ಕಲಿಕಾರ್ಥಿಗಳು' ಮತ್ತು 'ಆಡಳಿತ'ವನ್ನು ಮಾರ್ಗದರ್ಶಿ ರಚನೆಯಲ್ಲಿ ಮೂರು ಪ್ರಮುಖ ಪಾತ್ರಧಾರಿಗಳು ಎಂದು ಗುರುತಿಸುತ್ತದೆ ಮತ್ತು ಅವರ ನಡುವಿನ ಪರಸ್ಪರ ಕ್ರಿಯೆಗಳ ಬಗ್ಗೆ ಹೇಳಲಾಗಿದೆ. ಇದಲ್ಲದೆ, ಈ ಯೋಜನೆಯು ತನ್ನ ಗುರಿಯನ್ನು ತಲುಪಲು ನಿರ್ಮಿಸಬಹುದಾದ ವಿವಿಧ ಹಂತಗಳನ್ನು ಸೂಚಿಸುತ್ತದೆ.

*ಅಧ್ಯಾಯ 4* ಮಾರ್ಗದರ್ಶಕರ ಆಯ್ಕೆ, ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ಗುಣಲಕ್ಷಣಗಳಂತಹ ವಿವಿಧ ಅಂಶಗಳನ್ನು ಕುರಿತು ಪರಿಶೀಲಿಸುತ್ತದೆ. ಇದು ಮಾರ್ಗದರ್ಶನ ಕೌಶಲ್ಯಗಳ ಅಡಿಪಾಯ, ಮಾರ್ಗದರ್ಶನದ ಬಗೆ ಮತ್ತು ಮಾರ್ಗದರ್ಶಕರ ನಿರಂತರ ವೃತ್ತಿಪರ ಸುಧಾರಣೆಯ ಮೇಲೆ ಕೇಂದ್ರೀಕರಿಸುತ್ತದೆ. ಈ ವಿಭಾಗವು ಮಾರ್ಗದರ್ಶನವನ್ನು ಮಾಡಬಹುದಾದ ಪ್ರಮುಖ ಕ್ಷೇತ್ರಗಳನ್ನು ಸಹ ಎತ್ತಿ ತೋರಿಸುತ್ತದೆ.

*ಅಧ್ಯಾಯ 5* ಕಾರ್ಯಕ್ರಮದ ವಿನ್ಯಾಸ ಮತ್ತು ಯೋಜನೆ, ಕಾರ್ಯಕ್ರಮ ನಿರ್ವಹಣೆ, ಪಾಲುದಾರರ ಪಾತ್ರಗಳು ಮತ್ತು ಜವಾಬ್ದಾರಿಗಳು, ಮಾರ್ಗದರ್ಶನ ಕಾರ್ಯಕ್ರಮದ ವಿವಿಧ ಹಂತಗಳ ಕಾರ್ಯಾಚರಣೆಗೆ ಶಿಫಾರಸು, ಕಾರ್ಯಕ್ರಮದ ಮೌಲ್ಯಮಾಪನ ಮತ್ತು ಶಾಲೆ/ಸಂಸ್ಥೆಗಳ ಮೇಲೆ ಕಾರ್ಯಕ್ರಮದ ಪ್ರಭಾವವನ್ನು ಎತ್ತಿ ತೋರಿಸುತ್ತದೆ. ಇದು ಕಾರ್ಯಕ್ರಮದ ಸಾಂಸ್ಥಿಕೀಕರಣ ಮತ್ತು ಪ್ರೋತ್ಸಾಹವನ್ನು ಎತ್ತಿ ತೋರಿಸುತ್ತದೆ.

*ಅಧ್ಯಾಯ 6* ರಾಷ್ಟ್ರೀಯ ಮಾರ್ಗದರ್ಶನ ಮೂಲಸೌಕರ್ಯ (ನ್ಯಾಷನಲ್ ಮೆಂಟರಿಂಗ್ ಇನ್ ಫ್ರಾಸ್ಟ್ರಕ್ಚರ್- ಎನ್.ಎಮ್.ಐ), ಅದರ ವಿನ್ಯಾಸ ತತ್ವಗಳು ಮತ್ತು ತಂತ್ರಜ್ಞಾನದ ಘಟಕಗಳ ಸ್ಥಾಪನೆಯನ್ನು ಎತ್ತಿ ತೋರಿಸುತ್ತದೆ; ಇದು ಏಕೀಕೃತ ಮಾರ್ಗದರ್ಶನ ಇಂಟರ್ಫೇಸ್ ಅನ್ನು ಸಹ ಉಲ್ಲೇಖಿಸುತ್ತದೆ.

*ಅಧ್ಯಾಯ 7* ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯ (ಎನ್.ಎಮ್.ಎಮ್) ಪಯಣ ಮತ್ತು ಮುಂದಿನ ಹಾದಿಯತ್ತ ಗಮನ ಸೆಳೆಯುತ್ತದೆ.

NMM

NATIONAL MISSION FOR MENTORING

ಅಧ್ಯಾಯ 1

# ಭಾರತದಲ್ಲಿ ಶಿಕ್ಷಣ



# ಅಧ್ಯಾಯ 1: ಭಾರತದಲ್ಲಿ ಶಿಕ್ಷಣ

## 1.1 ಭಾರತದಲ್ಲಿ ಶಿಕ್ಷಣ: ಪ್ರಸ್ತುತ ಸ್ಥಿತಿಗತಿಗಳು

ಭಾರತದಲ್ಲಿನ ಶಿಕ್ಷಣ ಉಪಕ್ರಮಗಳು ಪ್ರಗತಿಗೆ ನಿರ್ಣಾಯಕವಾದ ಫಲಿತಾಂಶಗಳನ್ನು ಸಾಧಿಸಲು ಹೆಚ್ಚು-ವಿಚಾರಣೆಯ ತತ್ವಗಳಿಂದ ಮಾರ್ಗದರ್ಶಿಸಲ್ಪಟ್ಟಿವೆ. ಈ ಹಿಂದೆ ಅನೇಕ ನವೀನ ಶಿಕ್ಷಣ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಅವುಗಳು ಅನುಷ್ಠಾನದ ಸಂಕೀರ್ಣತೆಯನ್ನು ಲೆಕ್ಕಿಸದೆ ಧನಾತ್ಮಕ ಬದಲಾವಣೆಗಳಿಗೆ ಕೊಡುಗೆ ನೀಡಿವೆ. ಪ್ರಾಥಮಿಕ ಹಂತದಲ್ಲಿ ಬಲವಾದ ಅಡಿಪಾಯವನ್ನು ಖಾತ್ರಿಪಡಿಸಿಕೊಳ್ಳುವಾಗ ಶಿಕ್ಷಣವನ್ನು ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಮಾಡುವತ್ತ ಗಮನಹರಿಸಲಾಗಿದೆ. ಮಕ್ಕಳು ಅಭಿವೃದ್ಧಿ ಹೊಂದಲು ಮತ್ತು ಉತ್ತಮವಾಗಿ ಹೊಂದಿಕೊಳ್ಳುವ, ಆತ್ಮವಿಶ್ವಾಸದ ವಯಸ್ಕರಾಗಿ ಬೆಳೆಯಲು ಅನುವು ಮಾಡಿಕೊಡುವ ಮಕ್ಕಳ ಸ್ನೇಹಿ ಸ್ಥಳಗಳನ್ನು ವಿನ್ಯಾಸಗೊಳಿಸುವುದು ಆಚರಣೆಯಲ್ಲಿದೆ. ಶಿಕ್ಷಕರನ್ನು ಅನುಕೂಲ ಮಾಡಿಕೊಡುವವರನ್ನಾಗಿ ಕಂಡು ಮತ್ತು ಸಹಯೋಗದ ವಾತಾವರಣವನ್ನು ರಚಿಸುವಾಗ ಕಲಿಯುವವರಿಗೆ ಅವರ ಪ್ರಗತಿಯನ್ನು ಅಳೆಯಲು ಸಹಾಯ ಮಾಡುವ ರಚನೆಗಳು ಪರಿಣಾಮಕಾರಿ ಎಂದು ಸಾಬೀತುಪಡಿಸುತ್ತವೆ.

ಶಿಕ್ಷಕರ ಪಾತ್ರವು ಶಿಕ್ಷಣ ವ್ಯವಸ್ಥೆಯ ಭೂದೃಶ್ಯವನ್ನು ಪರಿವರ್ತಿಸುವ ಮತ್ತು ಗುಣಮಟ್ಟ, ಪ್ರವೇಶ ಮತ್ತು ಸಮಾನತೆಯನ್ನು ಸಮತೋಲನಗೊಳಿಸುವ ಸವಾಲುಗಳನ್ನು ಎದುರಿಸಲು ವ್ಯವಸ್ಥೆಯನ್ನು ಶಕ್ತಿಯುತಗೊಳಿಸುವ ಅತ್ಯಗತ್ಯ ಅಂಶವಾಗಿ ಹೊರಹೊಮ್ಮಿದೆ ಎಂಬುದರಲ್ಲಿ ಸಂದೇಹವಿಲ್ಲ. ಯು.ಡಿ.ಐ.ಎಸ್.ಇ ಯ ತಾತ್ಕಾಲಿಕ ಮಾಹಿತಿಯ ಪ್ರಕಾರ, ಭಾರತದ ಶಾಲೆಗಳಲ್ಲಿ ಖಾಯಂ, ಗುತ್ತಿಗೆ ಮತ್ತು ಪ್ಯಾರಾ (ಅರೆಕಾಲಿಕ) ಶಿಕ್ಷಕರನ್ನು (ಶಿಕ್ಷಣ ಮಿತ್ರ ಮತ್ತು ನಿಯೋಜಿತ ಶಿಕ್ಷಕ) ಒಳಗೊಂಡಿರುವ ಸುಮಾರು 95 ಲಕ್ಷ ಶಿಕ್ಷಕರು ಇದ್ದಾರೆ. ಶಿಕ್ಷಣದ ಗುಣಮಟ್ಟ ಮತ್ತು ರಾಷ್ಟ್ರೀಯ ಅಭಿವೃದ್ಧಿಗೆ ಅದರ ಕೊಡುಗೆಯನ್ನು ನಿರ್ಧರಿಸುವಲ್ಲಿ ಶಿಕ್ಷಕರ ಸಾಮರ್ಥ್ಯ ಮತ್ತು ಪಾತ್ರವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ಯು ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿ ಮತ್ತು ತರಬೇತಿಗೆ ಒತ್ತು ನೀಡಿದೆ. ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳ ವಿವಿಧ ಅಂಶಗಳ ಕುರಿತು ಮಾರ್ಗದರ್ಶನ ನೀಡಲು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (ನ್ಯಾಷನಲ್ ಕರಿಕ್ಯೂಲಮ್ ಫ್ರೇಮ್ ವರ್ಕ್ ಫಾರ್ ಟೀಚರ್ ಎಜುಕೇಷನ್-ಎನ್.ಸಿ.ಎಫ್.ಟಿ.ಇ) ಕರಡು ರಚನೆಯನ್ನು ಇದು ಒಳಗೊಂಡಿದೆ. 'ಶಿಕ್ಷಕರ ಸಬಲೀಕರಣದ ಸಾಂಸ್ಕೃತೀಕರಣ'ಕ್ಕೂ ಸಹ ಅಗತ್ಯ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ, ಇದು ಮೂಲಭೂತವಾಗಿ ಶಿಕ್ಷಕರಿಗೆ ಶಾಲೆಯ ಗುರಿಗಳು ಮತ್ತು ನೀತಿಗಳನ್ನು ಒಗ್ಗೂಡಿಸುವ ಕಾರ್ಯದಲ್ಲಿ ಭಾಗವಹಿಸುವ ಹಕ್ಕನ್ನು ನೀಡುತ್ತದೆ ಮತ್ತು ಏನನ್ನು ಮತ್ತು ಹೇಗೆ ಕಲಿಸಬೇಕು ಎಂಬುದರ ಕುರಿತು ಅವರ ವೃತ್ತಿಪರ ನಿರ್ಣಯವನ್ನು ಬಳಸಿಕೊಳ್ಳುತ್ತದೆ.





ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ಮತ್ತು ವಿಶ್ವಸಂಸ್ಥೆಯ ಎಸ್.ಡಿ.ಜಿ 4, ಎರಡೂ ಸಹ ಸಾರ್ವತ್ರಿಕ ಗುಣಮಟ್ಟದ ಶಿಕ್ಷಣ ಮತ್ತು ಜೀವಮಾನದ ಕಲಿಕೆಯನ್ನು ಸಾಧಿಸುವ ಗುರಿಗಳನ್ನು ಒಳಗೊಂಡಿವೆ. ಇದಲ್ಲದೆ, ಎಸ್.ಡಿ.ಜಿ 4 ಕೈಗೆಟುಕುವ ಮತ್ತು ಗುಣಮಟ್ಟದ ಶಿಕ್ಷಣದ

ಪ್ರವೇಶಾತಿಯನ್ನು ಸುಧಾರಿಸುವುದು, ಶಿಕ್ಷಣದಲ್ಲಿನ ತಾರತಮ್ಯವನ್ನು ತೊಡೆದುಹಾಕುವುದು ಮತ್ತು ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆಯನ್ನು ಸಾಧಿಸುವುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಭಾರತ ಸರ್ಕಾರದ ಪ್ರಮುಖ ಯೋಜನೆಗಳಾದ 'ಸಮಗ್ರ ಶಿಕ್ಷಣ' ಮತ್ತು 'ನಿಪುಣ ಭಾರತ'ವು ಎಲ್ಲಾ ವಿದ್ಯಾರ್ಥಿಗಳಿಗೆ ಸಾರ್ವತ್ರಿಕ ಗುಣಮಟ್ಟದ ಶಿಕ್ಷಣವನ್ನು ನೀಡುವ ಗುರಿಯನ್ನು ಹೊಂದಿವೆ. ಪೋಷಕ ಬೆಂಬಲ, ಉನ್ನತ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣದ ಉದ್ದೇಶಿತ ಯೋಜನೆಗಳು ಈ ಪ್ರಯತ್ನಕ್ಕೆ ಪೂರಕವಾಗಿವೆ. ಮೂಲಸೌಕರ್ಯ ಮಟ್ಟದಲ್ಲಿನ ಅಡಚಣೆಗಳನ್ನು ನಿವಾರಿಸಲು ಡಿಜಿಟಲ್ ಕಲಿಕೆ, ಮೂಲಸೌಕರ್ಯ ಮತ್ತು ಸಾಮರ್ಥ್ಯ ನಿರ್ಮಾಣಕ್ಕಾಗಿ ಘಟಕಗಳನ್ನು ಸ್ಥಾಪಿಸಲು ಸಂಪನ್ಮೂಲಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸಾಗಿದೆ.

ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಶಾಲೆಗಳು ಮುಚ್ಚಿದ್ದ ಕಾರಣ ಆ ಸಮಯದಲ್ಲಿ ಡಿಜಿಟಲ್ ಸಂಪನ್ಮೂಲಗಳು ಶಿಕ್ಷಣದ ಜೀವಸೆಲೆಯಾಗಿದ್ದವು ಮತ್ತು ಕೋವಿಡ್ ಸಾಂಕ್ರಾಮಿಕವು ಆನ್‌ಲೈನ್ ಕಲಿಕೆಗೆ ತ್ವರಿತವಾಗಿ ಹೊಂದಿಕೊಳ್ಳಲು ಸಹಜವಾಗಿ ಅನಿವಾರ್ಯತೆಗಳನ್ನು ಒತ್ತಾಯಪೂರಕವಾಗಿ ಒಪ್ಪಿಕೊಳ್ಳುವಂತೆ ಮಾಡಿತು. ಡಿಜಿಟಲ್ ತಂತ್ರಜ್ಞಾನಗಳು ಒದಗಿಸಿದ ಸಾಮರ್ಥ್ಯವು ಕೋವಿಡ್ ಸಮಯದಲ್ಲಿ ತಾತ್ಕಾಲಿಕ ಪರಿಹಾರವಾಗಿ ಕಾರ್ಯನಿರ್ವಹಿಸುವುದನ್ನು ಮೀರಿ ಬೆಳೆಯಿತು. ಇದು ಶಿಕ್ಷಣತಜ್ಞರು, ನಾಯಕರು ಮತ್ತು ಒಟ್ಟಾರೆಯಾಗಿ ಸಮುದಾಯದ ಜನರು ಏನು, ಹೇಗೆ, ಯಾವಾಗ ಮತ್ತು ಎಲ್ಲಿ ಕಲಿಯುತ್ತಾರೆ ಎಂಬುದರ ಕುರಿತು ತಮ್ಮ ತಿಳುವಳಿಕೆಯನ್ನು ವಿಕಸನಗೊಳಿಸಲು ಸಾಧ್ಯವಾಗಿಸಿತು. ಜ್ಞಾನವನ್ನು ನೀಡುವುದರಿಂದ ಹಿಡಿದು ಜ್ಞಾನದ ಸಹ-ಸೃಷ್ಟಿಕರ್ತರು, ಮಾರ್ಗದರ್ಶಕರು ಮತ್ತು ಮೌಲ್ಯಮಾಪಕರ ಪಾತ್ರವು ಏನೆಂಬುದು ಹೊರಹೊಮ್ಮಿತು.

## 1.2 ಶಿಕ್ಷಕರ ಪಾತ್ರ

ವಿದ್ಯಾರ್ಥಿಗಳೇ ಕೇಂದ್ರೀಕರಣಗೊಂಡಿರುವ ಕಾರಣ, ಕಲಿಕೆಯ ಫಲಿತಾಂಶಗಳನ್ನು ಸಾಧಿಸುವ ಜವಾಬ್ದಾರಿ ಸಾಮಾನ್ಯವಾಗಿ ಶಿಕ್ಷಕರ ಮೇಲಿರುತ್ತದೆ. ಅವರು ತಮ್ಮ ಶಾಲೆ ಅಥವಾ ಶಾಲೆಗಳ ಸಾಂಸ್ಕೃತಿಕ ಸಾರವನ್ನು ತಮ್ಮ ಭೌಗೋಳಿಕ ವ್ಯಾಪ್ತಿಯಲ್ಲಿ ವ್ಯಾಖ್ಯಾನಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಅವರು ನಿರಂತರವಾಗಿ ತಮ್ಮ ಗಮನವನ್ನು ಪ್ರತಿಕ್ರಿಯಾತ್ಮಕತೆಯಿಂದ ಯಾವುದೇ ಸವಾಲುಗಳಿಗೆ ಹೆಚ್ಚು ಪೂರ್ವಭಾವಿ ಕಾರ್ಯತಂತ್ರದ ಪ್ರತಿಕ್ರಿಯೆಗೆ ಬದಲಾಯಿಸಬೇಕಾಗುತ್ತದೆ. ರಚನಾತ್ಮಕ ಬದಲಾವಣೆಯನ್ನು ಸುಗಮಗೊಳಿಸುವುದು ಮತ್ತು ಆ ಬದಲಾವಣೆಯನ್ನು ತರುವುದರಿಂದ ಉಂಟಾಗುವ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಮಾನ್ಯವಾಗಿ ವ್ಯಕ್ತವಾಗುವ ನಿರೀಕ್ಷೆಯಾಗಿದೆ. ಶಾಲೆಯಲ್ಲಿ ಅನುಸರಿಸುವ ರಚನೆಗಳು, ನಿಯಮಾವಳಿಗಳು, ಮಂಡಳಿಗಳು ಅಥವಾ ಅಭ್ಯಾಸಗಳನ್ನು ಒಳಗೊಂಡ ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ.




ಚಿತ್ರ 1.2: ಶಿಕ್ಷಕರ ಪಾತ್ರ

ಹಿಂದಿನ ಸವಾಲುಗಳ ಅನುಭವಗಳು ನಿರಂತರ ಕಲಿಕೆ ಮತ್ತು ಕೌಶಲ್ಯ-ನಿರ್ಮಾಣದ ಅಗತ್ಯವನ್ನು ಪುನರ್'ಸ್ಥಾಪಿಸುತ್ತವೆ. ಶಿಕ್ಷಕರ ಸಾಮರ್ಥ್ಯ ವರ್ಧನೆ ಮತ್ತು ನಿರಂತರ ವೃತ್ತಿಪರ ಅಭಿವೃದ್ಧಿಯ ಮೇಲೆ ಗಮನ ಕೇಂದ್ರೀಕರಿಸುವ ಹಲವಾರು ಉಪಕ್ರಮಗಳನ್ನು ಹಿಂದೆ ಪ್ರಾರಂಭಿಸಲಾಗಿದೆ. ನಿರಂತರ ಕಲಿಕೆ ಮತ್ತು ಅಭಿವೃದ್ಧಿಯ ವ್ಯಾಪ್ತಿಯನ್ನು ಸಕ್ರಿಯಗೊಳಿಸುವ ಈ ಬಹು ರಚನೆಗಳ ಹೊರತಾಗಿಯೂ ನಮ್ಮ ಶಿಕ್ಷಕರು ವಿಕೇಂದ್ರೀಕೃತ ಮತ್ತು ಸಾಂದರ್ಭಿಕ ಸಾಮರ್ಥ್ಯ ನಿರ್ಮಾಣಕ್ಕೆ ತಡೆಗೋಡೆಯಾಗಿ ಕಾರ್ಯನಿರ್ವಹಿಸುವ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ.

## 1.3 ಸಂಕೀರ್ಣತೆ ಹಾಗೂ ಉದಯೋನ್ಮುಖ ಸವಾಲುಗಳು

ಕಾಲಕ್ಕೆ ತಕ್ಕಂತೆ, ಅವಶ್ಯಕತೆಗಳಿಗೆ ಅನುಗುಣವಾಗಿ ಶಿಕ್ಷಕರಿಗೆ ಕಲಿಕೆಯ ಅವಕಾಶಗಳನ್ನು ವಿನ್ಯಾಸಗೊಳಿಸಿ ಸೂಚಿಸಲಾಗಿದೆ. ಆದಾಗ್ಯೂ, ಅವರು ಕೆಲವೇ ಕೆಲವು ಬಾರಿ ಮಾತ್ರ ತಮ್ಮ ವೃತ್ತಿಪರ ಅಭಿವೃದ್ಧಿಯ ಭಾಗವಾಗಿ ಚರ್ಚೆಗಳು, ಗೋಷ್ಠಿಗಳು ಅಥವಾ ಕಲಿಕೆಯ ವಲಯಗಳಲ್ಲಿ ಆಯ್ಕೆಯಾಗುವ ಅವಕಾಶವನ್ನು ಪಡೆದುಕೊಳ್ಳುತ್ತಾರೆ. ಸಮುದಾಯದೊಳಗೆ ಪರಿಣತಿ ಎಂಬುದು ಬೃಹತ್ ಪ್ರಮಾಣದಲ್ಲಿ ಇದ್ದರೂ, ಅದನ್ನು ಗರಿಷ್ಠ ಮಟ್ಟದಲ್ಲಿ ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವುದು ಕಷ್ಟಕರವಾಗಿದೆ.

ಕಲಿಕೆಯಲ್ಲಿ ಆಸಕ್ತಿ ಹೊಂದಿರುವ ಶಿಕ್ಷಕರು ವಿಭಿನ್ನ ಮತ್ತು ವೈವಿಧ್ಯಮಯ ಸಂದರ್ಭಗಳಿಗೆ ಸೇರಿದವರಾಗಿದ್ದಾರೆ. ಆದ್ದರಿಂದ, ಒಂದೇ ರೀತಿಯ ತೊಂದರೆಗಳನ್ನು ಎದುರಿಸುತ್ತಿರುವವರಿಗೂ ಸಹ, ಸಮಸ್ಯೆಯನ್ನು ಪರಿಹರಿಸಲು ಒಟ್ಟಾಗಿ ಕೆಲಸ ಮಾಡುವುದು, ಚರ್ಚಿಸುವುದು ಮತ್ತು ಅವರ ಪರಿಣತಿಯನ್ನು ಅಭಿವೃದ್ಧಿಪಡಿಸುವುದು ಕಷ್ಟಕರವಾಗಿದೆ. ಕಷ್ಟಕರವಾದ, ಅಪೂರ್ವವಾದ ಮತ್ತು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಸಮಸ್ಯೆಗಳನ್ನು ನಿಭಾಯಿಸಲು ಪ್ರಯತ್ನಿಸುವಾಗ ಕೆಲವೊಬ್ಬರು ಪ್ರತ್ಯೇಕತೆ ಮತ್ತು ದುರ್ಬಲತೆಯನ್ನು ಅನುಭವಿಸುತ್ತಿದ್ದು ಇದು ಅಂತಿಮವಾಗಿ ಪರಿಸ್ಥಿತಿಯನ್ನು ಹೆಚ್ಚು ಸಂಕೀರ್ಣಗೊಳಿಸುತ್ತದೆ. ಸಾಮಾನ್ಯ ಕಾಳಜಿಗಳನ್ನು ನಿಭಾಯಿಸಲು ಕಲಿಕೆಗಳು, ಅನುಭವಗಳು, ಸವಾಲುಗಳು ಮತ್ತು ಪರಿಹಾರಗಳನ್ನು ಸ್ಥಿರವಾಗಿ ಹಂಚಿಕೊಳ್ಳುವ ಸಮುದಾಯದ ವೈವಿಧ್ಯಮಯತೆಯ ಪ್ರಾಮುಖ್ಯತೆಯನ್ನು ಕೋವಿಡ್ ಸಾಂಕ್ರಾಮಿಕ ಕಾಲವು ಬಲಪಡಿಸಿದೆ. ಕೆಲವೊಮ್ಮೆ, ಶಿಕ್ಷಕರು ತಾವು ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರಗಳನ್ನು ಪಡೆಯುವಲ್ಲಿ ವಿಳಂಬಕಾರಿ ಮತ್ತು ಸೋಗಲಾಡಿತನವನ್ನು ಅನುಭವಿಸುತ್ತಾರೆ. ನಿರ್ದಿಷ್ಟ ಬೆಂಬಲವನ್ನು ನೀಡಲು ಸಾಧ್ಯವಾಗಿಸಬಹುದಾದ ತಂತ್ರಜ್ಞಾನ ಪ್ಲಾಟ್‌ಫಾರ್ಮ್‌ಗಳು ಅಥವಾ ಅವುಗಳನ್ನು ಒಳಗೊಂಡಿರುವ ತಾಂತ್ರಿಕತೆಯೊಂದಿಗೆ ಪ್ರವೇಶಾತಿ ಪಡೆಯುವುದು ಹೇಗೆ ಎಂದು ಶಿಕ್ಷಕರಿಗೆ ತಿಳಿಯದಿರುವುದೇ ಪರಿಹಾರವನ್ನು ಕಂಡುಕೊಳ್ಳಲು ಆಗುತ್ತಿರುವ ವಿಳಂಬ್ಬಕೆ ಕಾರಣ ಎನ್ನಬಹುದಾಗಿದೆ.

ಶಿಕ್ಷಕರು ತಾವುಗಳು ನಿರ್ವಹಿಸುವ ಪಾತ್ರಗಳ ಭಾಗವಾಗಿ ಅನೇಕ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಾರೆ. ಸಾಮರ್ಥ್ಯ ಮತ್ತು ವೃತ್ತಿಪರ ಸುಧಾರಣೆಗಾಗಿ ಸಮಯವನ್ನು ನಿರ್ವಹಿಸುವುದು, ಅವರ ಪಾತ್ರಗಳು ವಿಶೇಷವಾಗಿ ಅವರ ದೈಹಿಕ ಉಪಸ್ಥಿತಿಯು ಅಗತ್ಯವಿದ್ದಾಗ ಅವುಗಳು ಬೇಡುವ ಕಾರ್ಯಗಳನ್ನು ಸಮತೋಲನಗೊಳಿಸುವುದು ಅತ್ಯಂತ ಸವಾಲಿನದಾಗುತ್ತದೆ.

## 1.4 ಪ್ರಸ್ತುತತೆ ಮತ್ತು ಸಂದರ್ಭ

ಭೌಗೋಳಿಕ ಪ್ರದೇಶಗಳು, ಪಾತ್ರಗಳು ಮತ್ತು ವಲಯ(ಡೊಮೇನ್)ಗಳಾದ್ಯಂತ ಶಿಕ್ಷಕರ ವೃತ್ತಿಪರ ಅಭಿವೃದ್ಧಿಯ ಅಗತ್ಯವು ಅವರ ಸಂದರ್ಭಗಳು, ಸವಾಲುಗಳು ಮತ್ತು ಆಸಕ್ತಿಗಳ ಆಧಾರದ ಮೇಲೆ ಬದಲಾಗಬಹುದು. ಆದ್ದರಿಂದ, ಪ್ರತಿಯೊಬ್ಬ ಶಿಕ್ಷಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಲು ವಿಭಿನ್ನ ದೃಷ್ಟಿಕೋನ ಮತ್ತು ನೆಟ್‌ವರ್ಕಿಂಗ್ ವಿಧಾನವನ್ನು ಅನ್ವೇಷಿಸಬಹುದು. ಕೆಲವು ಶಿಕ್ಷಕರು ಗೆಳೆಯರಿಂದ ನೇರವಾಗಿ ಕಲಿಯಲು ಬಯಸುತ್ತಾರೆ. ಆದರೆ ಇದೇ ರೀತಿಯ ಸವಾಲುಗಳನ್ನು ಎದುರಿಸುತ್ತಿರುವ ಶಿಕ್ಷಕರು ಸಮುದಾಯದ ದೊಡ್ಡ ಸಮೂಹದೊಂದಿಗೆ ಸಂಪರ್ಕ ಸಾಧಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ, ತಜ್ಞರ ಅಭಿಪ್ರಾಯವು ಪರಿಹಾರವನ್ನು ಕಂಡುಹಿಡಿಯಲು ಅವರಿಗೆ ಅನುವು ಮಾಡಿಕೊಡುತ್ತದೆ. ಆದ್ದರಿಂದ, ಶಿಕ್ಷಕರು ವೃತ್ತಿಪರ ಬೆಂಬಲವನ್ನು ಪಡೆಯುವ ವೇದಿಕೆಯು ಸಹ ಅಗತ್ಯ.

## 1.5 ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿ (2020) ರ ನೋಟ

ಎನ್.ಇ.ಪಿ-2020 ಶಿಕ್ಷಣ ರಚನೆಯ ಎಲ್ಲಾ ಅಂಶಗಳನ್ನು ಗುಣಮಟ್ಟದ ಶಿಕ್ಷಣದ ಎಸ್.ಡಿ.ಜಿ 4 ರೊಂದಿಗೆ ಜೋಡಿಸಲು ಪ್ರಸ್ತಾಪಿಸುತ್ತದೆ[1]. ಇದು

[1] Ministry of Human Resource Development. (2020, July 29). National Education Policy 2020. Government of India.

ಫಲಿತಾಂಶಗಳ ಗುಣಮಟ್ಟವನ್ನು ಸುಧಾರಿಸಲು ವಿವಿಧ ಹಂತಗಳಲ್ಲಿ ಪರಿಹಾರವಾಗಿ ಮಾರ್ಗದರ್ಶನವನ್ನು ಪ್ರಸ್ತಾಪಿಸುತ್ತದೆ.

### 1.5.1 ವಿದ್ಯಾರ್ಥಿಗಳಿಗೆ

ಮಕ್ಕಳು ಶಾಲೆಯಿಂದ ಹೊರಗುಳಿಯುವ ದರಗಳನ್ನು ಕಡಿತಗೊಳಿಸುವ ಮತ್ತು ಎಲ್ಲರಿಗೂ ಶಿಕ್ಷಣದ ಪ್ರವೇಶಾತಿಯನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನದಲ್ಲಿ, ಶಾಲಾ ವಿದ್ಯಾರ್ಥಿಗಳಿಗೆ ಹಳೆಯ ವಿದ್ಯಾರ್ಥಿಗಳು ಮತ್ತು ಸಮುದಾಯದ ಸದಸ್ಯರು ಮಾರ್ಗದರ್ಶನ ನೀಡುತ್ತಾರೆ, ಇದು ವರ್ಧಿತ ಕಲಿಕೆಯ ಫಲಿತಾಂಶಗಳು ಮತ್ತು ನಿರಂತರ ಆಸಕ್ತಿಗೆ ಕಾರಣವಾಗುತ್ತದೆ.

### 1.5.2 ಶಿಕ್ಷಕರಿಗೆ

ಎನ್.ಇ.ಪಿ 2020 ಶಿಕ್ಷಕರ ತಯಾರಿಕೆಯ ಪ್ರಕ್ರಿಯೆಯನ್ನು "ಬಹುಶಿಸ್ತೀಯ ದೃಷ್ಟಿಕೋನಗಳು ಮತ್ತು ಜ್ಞಾನ, ಇತ್ಯರ್ಥಗಳು ಮತ್ತು ಮೌಲ್ಯಗಳ ರಚನೆ ಮತ್ತು ಅತ್ಯುತ್ತಮ ಮಾರ್ಗದರ್ಶಕರ ಅಡಿಯಲ್ಲಿ ಅಭ್ಯಾಸದ ಅಭಿವೃದ್ಧಿ"[2] ಎಂದು ಗುರುತಿಸಿದೆ. ಆದ್ದರಿಂದ, ಇದು ಮಂಡಳಿಯಾದ್ಯಂತ ಶಿಕ್ಷಕರ ಅಭಿವೃದ್ಧಿಗೆ ಸಹಾಯಕವಾಗಿ ಮಾರ್ಗದರ್ಶನವನ್ನು ಪ್ರಸ್ತಾಪಿಸುತ್ತದೆ.

ಎ. ನಿರಂತರ ಮೌಲ್ಯಮಾಪನಕ್ಕಾಗಿ ಮಾಸಿಕ ಸಭೆಗಳ ಜೊತೆಗೆ ಶಾಲಾ ಶಿಕ್ಷಣ ಇಲಾಖೆಯ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳಿಂದ ಅಂಗನವಾಡಿಗಳು/ಬಾಲವಾಡಿಗಳಲ್ಲಿ ಇ.ಸಿ.ಸಿ.ಇ ಶಿಕ್ಷಕರಿಗೆ ಮಾರ್ಗದರ್ಶನ ರಚನೆಯನ್ನು ಸ್ಥಾಪಿಸಲು ಇದು ಸೂಚಿಸುತ್ತದೆ. ವೃತ್ತಿಪರವಾಗಿ ಅರ್ಹವಾದ ಇ.ಸಿ.ಸಿ.ಇ ಶಿಕ್ಷಕರನ್ನು ಸಿದ್ಧಪಡಿಸುವ ದೀರ್ಘಾವಧಿಯ ಪ್ರಸ್ತಾಪದಲ್ಲಿ, ವೃತ್ತಿಪರ ತರಬೇತಿ, ಮಾರ್ಗದರ್ಶನ ಕಾರ್ಯವಿಧಾನಗಳು ಮತ್ತು ವೃತ್ತಿ ಮ್ಯಾಪಿಂಗ್ ಸಂಯೋಜನೆಯನ್ನು ಬಳಸಲಾಗುತ್ತದೆ.

ಬಿ. ಸೇವಾನಿರತ ತರಬೇತಿ ಶಿಕ್ಷಕರಿಗೆ, ಪ್ರಾಯೋಗಿಕ ತರಬೇತಿಯ ಜೊತೆಗೆ ಅವರ ವಿದ್ಯಾರ್ಹತೆಗಳನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿರುವ ಸೂಕ್ತ, ದೃಢವಾದ ಮಾರ್ಗದರ್ಶನ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು.

ಸಿ. ಶಿಕ್ಷಕರಿಗೆ ದೀರ್ಘಾವಧಿಯ ವೃತ್ತಿಪರ ಬೆಂಬಲವನ್ನು ಒದಗಿಸಲು ಅದ್ವಿತೀಯ ವೃತ್ತಿಪರರಿಂದ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯನ್ನು ಸ್ಥಾಪಿಸಲಾಗುವುದು.

### 1.5.3 ಶಾಲಾ ನಾಯಕರಿಗೆ

ಬೋಧನಾ-ಕಲಿಕೆಯ ಪ್ರಕ್ರಿಯೆಯನ್ನು ನಿರ್ವಹಿಸಲು, ನಿರಂತರ ಗುಣಮಟ್ಟದ ಸುಧಾರಣೆಗೆ ಮಾನದಂಡಗಳನ್ನು ಸ್ಥಾಪಿಸಲು, ಶಿಕ್ಷಕರ ಅಭಿವೃದ್ಧಿಗೆ ನಿರಂತರ ಬೆಂಬಲವನ್ನು ಒದಗಿಸಲು ಮತ್ತು ಸಹಯೋಗದ ಕಲಿಕಾ ಸಂಸ್ಥೆಯನ್ನು ರಚಿಸಲು ಶಿಕ್ಷಣದ ಮುಖ್ಯಸ್ಥರಾಗಿ ಶೈಕ್ಷಣಿಕ ನಾಯಕರ ಸಾಮರ್ಥ್ಯ ನಿರ್ಮಾಣಕ್ಕಾಗಿ ಮಾರ್ಗದರ್ಶನದ ರಚನೆಗಳನ್ನು ಇದು ಸೂಚಿಸುತ್ತದೆ.

### 1.5.4 ಶೈಕ್ಷಣಿಕ ನಾಯಕರು ಮತ್ತು ಸಂಸ್ಥೆಗಳಿಗೆ

ಎನ್.ಇ.ಪಿ 2020 ಶೈಕ್ಷಣಿಕ ನಾಯಕತ್ವವನ್ನು ಒಳಗೊಳ್ಳುವ ಮೂಲಕ ಶಿಕ್ಷಣ ಸಂಸ್ಥೆಗಳಾದ್ಯಂತ ಮಾರ್ಗದರ್ಶನದ ಅಗತ್ಯಗಳ ಕುರಿತು ಒತ್ತಿಹೇಳುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಎನ್.ಇ.ಪಿ 2020 ರ ಪ್ರಾಥಮಿಕ ಗಮನವು ಪರಿಣಾಮಕಾರಿ ಆಡಳಿತ ಮತ್ತು ಉತ್ತಮ ನಾಯಕತ್ವದ ಕಡೆಗೆ ಮಾರ್ಗದರ್ಶನ ನೀಡುವ ಮೂಲಕ ಅವುಗಳ ಪುನರ್‌ರಚನೆ ಮತ್ತು ಬಲವರ್ಧನೆಯಾಗಿದೆ.

ಎ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಬಲೀಕರಣ ಮತ್ತು ಸ್ವಾಯತ್ತ ಆವಿಷ್ಕಾರದ ಸಂಸ್ಕೃತಿಯನ್ನು ಉತ್ತೇಜಿಸಲು, ಶ್ರೇಣೀಕೃತ ಮಾನ್ಯತೆ ನೀಡುವ ಕಾರ್ಯವಿಧಾನವನ್ನು ಸ್ಥಾಪಿಸಲಾಗುವುದು, ಇದಕ್ಕಾಗಿ ಕಾಲೇಜುಗಳನ್ನು ಮಾನದಂಡದಲ್ಲಿ ಮೇಲ್ದರ್ಜೆಗೇರಿಸುವುದಕ್ಕೆ ಮಾರ್ಗದರ್ಶನ ನೀಡಲಾಗುತ್ತದೆ. ಪ್ರತಿ ವಿಶ್ವವಿದ್ಯಾನಿಲಯವು ಅದರ ಅಂಗಸಂಸ್ಥೆ ಕಾಲೇಜುಗಳಿಗೆ "ಶೈಕ್ಷಣಿಕ ಮತ್ತು ಪಠ್ಯ ವಿಷಯಗಳು, ಬೋಧನೆ ಮತ್ತು ಮೌಲ್ಯಮಾಪನದಲ್ಲಿ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ; ಆಡಳಿತ

[2] Ministry of Human Resource Development. (2020, July 29). National Education Policy 2020. Government of India.

ಸುಧಾರಣೆಗಳು; ಆರ್ಥಿಕ ಸದೃಢತೆ; ಮತ್ತು ಆಡಳಿತಾತ್ಮಕ ದಕ್ಷತೆ," ಹೆಚ್ಚಿಸಲು ಹಾಗೂ ಅಂತಿಮವಾಗಿ ಅವುಗಳು ಸ್ವಾಯತ್ತ ಪದವಿ ನೀಡುವ ಕಾಲೇಜುಗಳಿಗೆ ಪರಿವರ್ತಿಸಲು ಸಹಾಯ ಮಾಡುತ್ತವೆ.

ಬಿ. ಹೆಚ್ಚುವರಿಯಾಗಿ, ಎಲ್ಲಾ ಕ್ಷೇತ್ರಗಳಲ್ಲಿ ಗುಣಮಟ್ಟದ ಶೈಕ್ಷಣಿಕ ಸಂಶೋಧನೆಗೆ ವೇಗವರ್ಧಕ ಶೈಕ್ಷಣಿಕ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವುದು ಎನ್.ಅರ್.ಎಫ್ ನ ಪ್ರಾಥಮಿಕ ಪಾತ್ರಗಳಲ್ಲಿ ಒಂದಾಗಿದೆ.

ಎನ್.ಇ.ಪಿ 2020 ನೀಡುವ ಶಿಫಾರಸುಗಳ ಜೊತೆಗೆ, ಭಾರತದಲ್ಲಿ ಶೈಕ್ಷಣಿಕ ವಾತಾವರಣಾದ್ಯಂತ ವಿವಿಧ ಉದ್ದೇಶಗಳಿಗಾಗಿ ಮಾರ್ಗದರ್ಶನ ರಚನೆಗಳನ್ನು ಸ್ಥಾಪಿಸಲು ಅಪಾರ ಅವಕಾಶವಿದೆ. ವಿವಿಧ ಪಾಲುದಾರರು ಹೊಂದಿರುವ ಜ್ಞಾನ ಮತ್ತು ಪರಿಣತಿಯ ಸಂಪತ್ತನ್ನು ಶಿಕ್ಷಣ ಪರಿಸರ ವ್ಯವಸ್ಥೆಯ ವಿವಿಧ ವರ್ಗಗಳಾದ್ಯಂತ ಪರಿಣಾಮಕಾರಿಯಾಗಿ ಮಾಹಿತಿ ಮತ್ತು ಮಾರ್ಗದರ್ಶನವನ್ನು ಪ್ರಸಾರ ಮಾಡಲು ಬಳಸಿಕೊಳ್ಳಬಹುದು.

ಅಧ್ಯಾಯ
2

# ಮಾರ್ಗದರ್ಶನದ ಪರಿಚಯ



# ಅಧ್ಯಾಯ II: ಮಾರ್ಗದರ್ಶನದ ಪರಿಚಯ

## 2.1. ಮಾರ್ಗದರ್ಶನದ ಪರಿಕಲ್ಪನೆ

ಮಾರ್ಗದರ್ಶನ - ಅನುಭವಿಗಳು ಏನನ್ನು ಮಾಡುತ್ತಾರೆ ಹಾಗೂ ಅವರ ಅನುಭವದಿಂದ ಕಲಿಯಲು ಬಯಸುವವರ ನಡುವಿನ ಪರಸ್ಪರ ಪ್ರಕ್ರಿಯೆಯನ್ನು ವಿವರಿಸಲು ಈ ಪದವನ್ನು ದೀರ್ಘಕಾಲದಿಂದಲೂ ಬಳಸಲಾಗಿದೆ. ಮಾರ್ಗದರ್ಶಕ ಮತ್ತು ಕಲಿಕಾರ್ಥಿ[3] ಇಬ್ಬರಿಗೂ ವೈಯಕ್ತಿಕ ಮತ್ತು ವೃತ್ತಿಪರ ಬೆಳವಣಿಗೆಯನ್ನು ಸಾಧಿಸಲು ಇದು ಉತ್ತಮ ಮಾರ್ಗವಾಗಿದೆ ಎಂದು ನಂಬಲಾಗಿದೆ. ಈ ಸಂವಾದಗಳು ಮಾರ್ಗದರ್ಶಕರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವುದು, ಬೆಂಬಲವನ್ನು ಒದಗಿಸುವುದು, ಆಳವಾದ ಸಮಾಲೋಚನೆ, ಸಂಕೀರ್ಣ ಮತ್ತು ಸವಾಲಿನ ಸಮಸ್ಯೆಗಳನ್ನು ಪರಿಹರಿಸುವುದು ಇತ್ಯಾದಿಗಳನ್ನು ಒಳಗೊಂಡಿರಬಹುದು. ಮಾರ್ಗದರ್ಶನ ಸಂಬಂಧವು ಸುದೀರ್ಘ, ರಚನಾತ್ಮಕವಾದ ಪರಸ್ಪರ ಸಹಕಾರಕ್ಕೆ ಸಂಬಂಧಿಸಿದ್ದು ಇದೇ ಕ್ಷೇತ್ರಗಳ ವೃತ್ತಿಪರರ ನಡುವೆ ನಡೆಯುವ ಅಗತ್ಯಕ್ಕೆ ತಕ್ಕ ಸಂವಹನಗಳು ಪ್ರಾಥಮಿಕವಾಗಿ ಮಾರ್ಗದರ್ಶಕರು ಉದ್ದೇಶಿತ ಗುರಿಯತ್ತ ಸಾಗಲು ನೆರವಾಗುವ ವೃತ್ತಿಪರ ಅಭಿವೃದ್ಧಿಗೆ ಕಾರಣವಾಗುತ್ತದೆ.

**<u>ಮಾರ್ಗದರ್ಶಕ-ಕಲಿಕಾರ್ಥಿಗಳ ಸಂಬಂಧ ಕುರಿತ ಕಥೆಗಳು</u>**

ಮಾರ್ಗದರ್ಶನ ಎಂಬುದು ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ತನ್ನ ಬೇರುಗಳನ್ನು ಹೊಂದಿದೆ. "ಮಾರ್ಗದರ್ಶಕ (ಮೆಂಟರ್)" ಎಂಬ ಇಂಗ್ಲಿಷ್ ಪದದ ಮೊದಲ ದಾಖಲಿತ ಸಾಕ್ಷ್ಯವು ಗ್ರೀಕ್ ಪಠ್ಯದಲ್ಲಿ ಕಾಣಿಸಿಕೊಂಡಿದೆ. ಮಹಾಭಾರತದಲ್ಲಿ, ಶ್ರೀ ಕೃಷ್ಣನು ಅರ್ಜುನನಿಗೆ ಧರ್ಮದ ಮಾರ್ಗವನ್ನು ಅನುಸರಿಸಲು ಮತ್ತು ಯುದ್ಧಭೂಮಿಯಲ್ಲಿ ತನ್ನ ಕರ್ತವ್ಯಗಳನ್ನು ನ್ಯಾಯಯುತವಾಗಿ ನಿರ್ವಹಿಸಲು ಮಾರ್ಗದರ್ಶನ ನೀಡಿದನು. ಬೌದ್ಧಧರ್ಮದಲ್ಲಿನ ಕಮಲ ಸೂತ್ರ ಹೇಳುವಂತೆ "ಜನರ ಸಂತೋಷಕ್ಕಾಗಿ ಮತ್ತು ಅವರನ್ನು ದುಃಖದಿಂದ ಮುಕ್ತಗೊಳಿಸಲು ಒಟ್ಟಾಗಿ ಕೆಲಸ ಮಾಡುವ ನಿಟ್ಟಿನಲ್ಲಿ ಒಗ್ಗೂಡಿ ಪ್ರತಿಜ್ಞೆ ಮಾಡುವುದು",[4] ಇದನ್ನು ಮಾರ್ಗದರ್ಶಕ-ಕಲಿಕಾರ್ಥಿ ಸಂಬಂಧವನ್ನು ಅಡಿಪಾಯವೆಂದು ಪರಿಗಣಿಸಲಾಗುತ್ತದೆ.

ಮಾರ್ಗದರ್ಶನವನ್ನು ವ್ಯಕ್ತಿಗಳು ತಮ್ಮ ನಡುವೆ ವಿನಿಯೋಗ ಪಡಿಸಿದ ಸಂವಾದವೆಂದು ಪ್ರಸ್ತುತಪಡಿಸಲಾಗಿದೆ, ಅವರಲ್ಲಿ ಒಬ್ಬರು ಚಿಂತನೆ-ಪ್ರಚೋದಕ ಪ್ರಶ್ನೆಗಳನ್ನು ಮುಂದಿಡುತ್ತಾರೆ ಮತ್ತು ಇತರರು ತಮ್ಮದೇ ಆದ ಪ್ರಶ್ನೆಗಳನ್ನು ಕೇಳುವ ಮೂಲಕ ತೊಡಗಿಸಿಕೊಳ್ಳುತ್ತಾರೆ, ಕೆಲವರು ಸಾಕ್ರಟೀಸ್ ವಿಧಾನದಂತೆ ಚರ್ಚೆಯ ಮೂಲಕ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುತ್ತಾರೆ. ಗುರುಕುಲ ಪದ್ಧತಿಯ ಮೂಲಕ ಭಾರತೀಯ ಇತಿಹಾಸದಲ್ಲಿ ಶಿಕ್ಷಣದಲ್ಲಿ ಮಾರ್ಗದರ್ಶನವು ಪ್ರಮುಖ ಪಾತ್ರವನ್ನು ವಹಿಸಿದೆ ಎಂದು ಅದು ಅನುಸರಿಸುತ್ತದೆ. ಮಾರ್ಗದರ್ಶಕರು ಗುರುಗಳಾಗಿದ್ದರು ಮತ್ತು ಕಲಿಕಾರ್ಥಿಗಳು ಶಿಷ್ಯರಾಗಿದ್ದರು. ಈ ವ್ಯವಸ್ಥೆಯು ಸ್ಫೂರ್ತಿ ಮತ್ತು ಪ್ರೇರಣೆಯ ಮೂಲಕ ಅವರ ಸಾಮರ್ಥ್ಯವನ್ನು ಅರಿತುಕೊಳ್ಳಲು ಸಹಾಯ ಮಾಡಲು ಮಾರ್ಗದರ್ಶನ ನೀಡಿತು.[5] ಚಂದ್ರಗುಪ್ತ ಮೌರ್ಯನು ಪಾಟಲಿ ಪುತ್ರದ ರಾಜನಾಗಲು ಚಾಣಕ್ಯನಿಂದ ಪಡೆದ ಮಾರ್ಗದರ್ಶನದ ಕುರಿತು ವಿವಿಧ ಸಾಹಿತ್ಯಕ ರಚನೆಗಳಲ್ಲಿ ಉಲ್ಲೇಖಿಸಲಾಗಿದೆ.

ಪ್ರಾಚೀನ ಇತಿಹಾಸದಿಂದ ಮುಂದುವರಿಯುತ್ತಾ, ಆಧುನಿಕ ಇತಿಹಾಸದಲ್ಲಿ ಎಲ್ಲಾ ಯಶಸ್ವಿ ಸಾರ್ವಜನಿಕ ವ್ಯಕ್ತಿಗಳ ಜೀವನದಲ್ಲಿ ಮಾರ್ಗದರ್ಶಕರು ಪ್ರಮುಖ ಪಾತ್ರವನ್ನು ಹೊಂದಿದ್ದಾರೆ- ಅರಿಸ್ಟಾಟಲ್, ಅಲೆಕ್ಸಾಂಡರ್ ದಿ ಗ್ರೇಟ್ ಗೆ, ಡಾ. ಬೆಂಜಮಿನ್ ಎಲಿಜಾ ಮೇಸ್ ಅವರು ಮಾರ್ಟಿನ್ ಲೂಥರ್ ಕಿಂಗ್‌ಗೆ ಮಾರ್ಗದರ್ಶನ ನೀಡಿರುತ್ತಾರೆ. ಮಾರ್ಗದರ್ಶನವು ಈಗ ಕಲಿಕೆ ಮತ್ತು ಕೌಶಲ್ಯ-ನಿರ್ಮಾಣವನ್ನು ವರ್ಧಿಸಲು ಪ್ರಮುಖ ಮತ್ತು ಪರಿಣಾಮಕಾರಿ ವಿಧಾನವಾಗಿ ಪುನಃ ಹೊರಹೊಮ್ಮಲು ಪ್ರಾರಂಭಿಸಿದೆ.[6]

---

[3] Together Platform. “Mentor Handbook, “Together Platform”.
[4] Soka Gakkai. (2020). The Oneness of Mentor and Disciple. Soka Gakkai (Global).
[5] Kukreja, S., Arora, R., & Singh, T. (2020). Mentorship Program: A Modern Outlook of Traditional Knowledge. International Journal of Applied & Basic Medical Research.
[6] Hansman, C. A. (2002). Critical Perspectives on Mentoring. Center on Education and Training for Employment College of Education, The Ohio State University

ಮಾರ್ಗದರ್ಶನವು ಸಡಿಲವಾದ ರೂಪಾಂತರಗಳನ್ನು ಹೊಂದಿರಬಹುದಾಗಿದ್ದರು ಸಹ ಇದನ್ನು ವೈಯಕ್ತಿಕ ಮತ್ತು ವೃತ್ತಿಪರ ಅಗತ್ಯಗಳಿಗೆ ಸರಿಹೊಂದುವಂತೆ ಬಳಸಲಾಗುತ್ತದೆ, ಹೀಗಾಗಿ ಇದನ್ನು "ಕಲಿಕಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದಾದ, ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬಹುದಾದ, ಕಾರ್ಯಕ್ಷಮತೆಯನ್ನು ಸುಧಾರಿಸಿಕೊಳ್ಳಬಹುದಾದ ಮತ್ತು ಅವರು ಬಯಸಿದ ವ್ಯಕ್ತಿಯಾಗಬಹುದಾದಂತೆ ಆಗುವುದನ್ನು ನಿರ್ವಹಿಸಲು, ಬೆಂಬಲಿಸಲು ಮತ್ತು ಪ್ರೋತ್ಸಾಹಿಸಲು ಬೇಕಾದ ರಚನೆ" ಎಂದು ವ್ಯಾಖ್ಯಾನಿಸಲಾಗಿದೆ.[7]

## 2.2 ಮಾರ್ಗದರ್ಶನದ ತತ್ವಗಳು

ಸಂವಾದದ ಸಮಯದಲ್ಲಿ ಭಾಗವಹಿಸುವವರ ಅಗತ್ಯಗಳಿಗೆ ಅನುಗುಣವಾಗಿ ಮಾರ್ಗದರ್ಶನದ ರೀತಿಯು ವಿಭಿನ್ನ ಪ್ರಕಾರಗಳಾಗಿರಬಹುದು, ಕೆಲವು ಮಾರ್ಗದರ್ಶಿ ತತ್ವಗಳು ರಚನೆಯ ಸಾರವನ್ನು ಕಾಪಾಡಿಕೊಳ್ಳಲು ಸಹಾಯ ಮಾಡಬಹುದು. ಮಾರ್ಗದರ್ಶಕ ಮತ್ತು ಕಲಿಕಾರ್ಥಿ ಇಬ್ಬರೂ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಾಗ ಮಾರ್ಗದರ್ಶನ ರಚನೆಯು ಅತ್ಯಂತ ಯಶಸ್ವಿಯಾಗುತ್ತದೆ. ಕೆಳಗಿನ ತತ್ವಗಳ ಪಟ್ಟಿಯನ್ನು ನೋಲ್ಸ್‌ನಿಂದ[8] ಉತ್ತೇಜಿತ ವಯಸ್ಕರ-ಕಲಿಕೆಯ ತತ್ವಗಳಿಗೆ ಅನುಗುಣವಾಗಿರುವಂತೆ ಸಿದ್ಧಪಡಿಸಿಕೊಳ್ಳಲಾಗಿದ್ದು, ಇವು ಮಾರ್ಗದರ್ಶನ ರಚನೆಯಲ್ಲಿ ಭಾಗವಹಿಸುವವರಿಗೆ ಅಗತ್ಯವಿರುವ ಆಸಕ್ತಿಯನ್ನು ಕೆರಳಿಸುಲು ಉತ್ತೇಜನ ನೀಡುತ್ತವೆ ಎಂಬುದನ್ನು ನೆನಪಿನಲ್ಲಿಡಿ.

ಎ. ಕಲಿಕಾರ್ಥಿ-ನಿರ್ದೇಶಿತ: ಕಲಿಕಾರ್ಥಿಗಳು ತಮ್ಮ ಕಲಿಕೆಯನ್ನು ಯೋಜಿಸುವ, ಅನುಷ್ಠಾನಗೊಳಿಸುವ ಮತ್ತು ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಕಲಿಕಾರ್ಥಿಗಳು ಸಂಬಂಧವನ್ನು ಬೆಳೆಸುವತ್ತ ಮುಂದಾಗಬೇಕು ಮತ್ತು ಅವರ ಅಭಿವೃದ್ಧಿಗೆ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸಬೇಕು. ಮಾರ್ಗದರ್ಶಕರ ಕಾರ್ಯಸೂಚಿ ಅಥವಾ ದಬ್ಬಾಳಿಕೆಯು ಮಾರ್ಗದರ್ಶನ ಸಂವಾದಗಳ ಪ್ರೇರಕ ಶಕ್ತಿಯಾಗಿರಬಾರದು. ಮಾರ್ಗದರ್ಶಕರು ಅವರ ಕಲಿಕಾರ್ಥಿಗಳು ತಮ್ಮ ಸ್ವಂತ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಬೇಕು, ಸವಾಲುಗಳನ್ನು ಗುರುತಿಸಬೇಕು ಮತ್ತು ಕಲಿಕಾರ್ಥಿಗಳಿಗೆ ಅನುಗುಣವಾದ ಅಗತ್ಯಗಳಿಗೆ ಆದ್ಯತೆ ನೀಡಬೇಕು.

ಬಿ. ವ್ಯುತ್ಪನ್ನ: ಕಲಿಕಾರ್ಥಿಗಳ ಜೀವನದ ಅನುಭವಗಳನ್ನು ಮಾರ್ಗದರ್ಶನ ಪ್ರಕ್ರಿಯೆಯಲ್ಲಿ ಪರಿಗಣಿಸಬೇಕು. ಇದು ಕಲಿಕಾರ್ಥಿಗಳು ತಮ್ಮ ಅನುಭವಗಳನ್ನು ಪ್ರತಿಬಿಂಬಿಸಲು ಅನುವು ಮಾಡಿಕೊಡುತ್ತದೆ.

ಸಿ. ಅನ್ವಯ-ಆಧಾರಿತ: ಮಾರ್ಗದರ್ಶನವು ನಿಜ ಜೀವನದ ಸಮಸ್ಯೆಗಳು ಮತ್ತು/ಅಥವಾ ಪ್ರಕ್ರಿಯೆಗಳಿಗೆ ಪ್ರಕ್ರಿಯಾ ಒಳನೋಟಗಳನ್ನು ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ. ಅನ್ವಯ-ಆಧಾರಿತ: ಮಾರ್ಗದರ್ಶನವು ನಿಜ ಜೀವನದ ಸಮಸ್ಯೆಗಳು ಮತ್ತು/ಅಥವಾ ಪ್ರಕ್ರಿಯೆಗಳಿಗೆ ಪ್ರಕ್ರಿಯಾ ಒಳನೋಟಗಳನ್ನು ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ.

ಡಿ. ಸುಲಭೀಕರಣ: ಸ್ವಯಂ-ನಿರ್ದೇಶನ, ವ್ಯುತ್ಪನ್ನ ಮತ್ತು ಅನ್ವಯ-ಆಧಾರಿತ ಮಾರ್ಗದರ್ಶನದ ಅನುಭವಕ್ಕೆ ಅಗತ್ಯವಾದ ಪರಿಸ್ಥಿತಿಗಳನ್ನು ಉತ್ತೇಜಿಸುವ ಮತ್ತು ಬೆಂಬಲಿಸುವ ಸ್ಥಳಗಳನ್ನು ಸುಗಮಗೊಳಿಸುವುದರ ಕಡೆಗೆ ಮಾರ್ಗದರ್ಶಕರು ಗಮನಹರಿಸಬೇಕು.

ಇ. ಸುರಕ್ಷತೆ: ಮಾರ್ಗದರ್ಶನದ ಅನುಭವವು ಎಲ್ಲಾ ಭಾಗವಹಿಸುವವರಿಗೆ ಸ್ವಯಂಪ್ರೇರಿತವಾಗಿದ್ದು, ಸ್ಥಳಗಳನ್ನು ಸುರಕ್ಷಿತವಾಗಿಸಲು ನಿರಂತರ ಪ್ರಯತ್ನವನ್ನು ಮಾಡಬೇಕು. ರಚನೆಯು ನಂಬಿಕೆ, ಗೌಪ್ಯತೆ, ಪರಸ್ಪರ ಗೌರವ ಮತ್ತು ಸೂಕ್ಷ್ಮತೆಯನ್ನು ಸ್ಥಾಪಿಸಲು ಅವಕಾಶ ನೀಡಬೇಕು. ಮಾರ್ಗದರ್ಶಕರು ತಮ್ಮ ನಡುವಿನ ಯಾವುದೇ ಮೇಲುಕೀಳು ವ್ಯತ್ಯಾಸಗಳನ್ನು ಸರಿದೂಗಿಸಲು ಕಲಿಕಾರ್ಥಿಗಳೊಂದಿಗೆ ಎಲ್ಲೆಗಳು ಮತ್ತು ಮೂಲ ನಿಯಮಗಳನ್ನು ಒಪ್ಪಿಕೊಳ್ಳುವ ಮೂಲಕ ಪ್ರಾರಂಭಿಸಬೇಕು.

---

[7] Parsloe, E., & Leedham, M. (2009). Coaching and mentoring: Practical conversations to improve learning. Kogan Page Publishers.

[8] Knowles, M. S. (1980). The modern practice of adult education: From pedagogy to andragogy. Englewood Cliffs, NJ: Cambridge Adult Education

ಎಫ್. ಪರಸ್ಪರ ಸಹಕಾರ: ಮಾರ್ಗದರ್ಶನದ ಪ್ರಕ್ರಿಯೆಯು ಕಲಿಕಾರ್ಥಿ ಮತ್ತು ಮಾರ್ಗದರ್ಶಕ ಇಬ್ಬರ ಮೇಲೂ ನಿರಂತರ ಅಭಿವೃದ್ಧಿಯ ಮೇಲೆ ಕೇಂದ್ರೀಕರಣಗೊಂಡಿರಬೇಕು. ಅಗತ್ಯವಿದ್ದಾಗ ಅವರ ಮಾರ್ಗದರ್ಶನ ಸಂವಾದಗಳನ್ನು ಮುಂದುವರಿಸಲು ಅವರು ಸಲಹೆ ಮತ್ತು/ಅಥವಾ ಸಹಕಾರವನ್ನು ಪಡೆಯಬಹುದು. ಮಾರ್ಗದರ್ಶಕರು ಪ್ರಕ್ರಿಯೆಯಿಂದ ಲಾಭ ಪಡೆಯುತ್ತಾರೆ ಎಂದು ಒಪ್ಪಿಕೊಳ್ಳುವ ಮೂಲಕ ಸಂವಾದದಿಂದ ಉತ್ತಮ ಪ್ರಯೋಜನವನ್ನು ಪಡೆಯುತ್ತಾರೆ.

## 2.3 ಮಾರ್ಗದರ್ಶನಕ್ಕೆ ಸಂಬಂಧಿಸಿದ ಸಾಮಾನ್ಯ ಅಪನಂಬಿಕೆಗಳು

ಮಾರ್ಗದರ್ಶನಕ್ಕೆ ಸಂಬಂಧಿಸಿದ ಸಾಮಾನ್ಯ ಅಪನಂಬಿಕೆಗಳು ಈ ಕೆಳಗಿನಂತಿವೆ:

ಎ. **ಕಲಿಕಾರ್ಥಿಗಳು ಮಾತ್ರ ಮಾರ್ಗದರ್ಶನ ಸಂಬಂಧದಿಂದ ಪ್ರಯೋಜನ ಪಡೆಯುತ್ತಾರೆ.** ಮಾರ್ಗದರ್ಶನವು ಪರಸ್ಪರ ಸಹಕಾರಕ್ಕೆ ಸಂಬಂಧಿಸಿದ ಒಪ್ಪಂದವಾಗಿದ್ದು, ಇದರಲ್ಲಿ ಮೇಲ್ನೋಟಕ್ಕೆ ಕಲಿಕಾರ್ಥಿಗಳಿಗೆ ಸ್ಪಷ್ಟವಾಗಿ ಹೆಚ್ಚು ಪ್ರಯೋಜನವಾಗಿದೆ ಎಂದು ಕಂಡರೂ ಮಾರ್ಗದರ್ಶಕ ಮತ್ತು ಕಲಿಕಾರ್ಥಿ ಇಬ್ಬರೂ ಪರಸ್ಪರ ಕಲಿಯುತ್ತಾರೆ.

ಬಿ. **ಮಾರ್ಗದರ್ಶನ ಸಂಬಂಧವು ವ್ಯಕ್ತಿಗತವಾಗಿರಬೇಕು.** ಮಾರ್ಗದರ್ಶನಕ್ಕಾಗಿ ಮುಖಾಮುಖಿ ಸಂವಾದವು ತನ್ನದೇ ಆದ ಪ್ರಯೋಜನಗಳನ್ನು ಹೊಂದಿದೆ, ಆದಾಗ್ಯೂ ಮಾರ್ಗದರ್ಶನ ಸಂಬಂಧವನ್ನು ಸ್ಥಾಪಿಸಲು, ಅಸಮಕಾಲಿಕ ಮತ್ತು ಆನ್‌ಲೈನ್ ವಿಧಾನಗಳನ್ನು ಸಹ ಬಳಸಬಹುದು.

ಸಿ. **ಒಬ್ಬ ಕಲಿಕಾರ್ಥಿಯು ಒಮ್ಮೆಗೆ (ಒಂದು ಸಮಯಕ್ಕೆ) ಒಬ್ಬರೇ ಮಾರ್ಗದರ್ಶಕರನ್ನು ಮಾತ್ರ ಹೊಂದಿರಬೇಕು.** ವಿಭಿನ್ನ ಮಾರ್ಗದರ್ಶಕರು ತಮ್ಮ ವಿಶೇಷ ಜ್ಞಾನ ಮತ್ತು ಕೌಶಲ್ಯಗಳನ್ನು ಮಾರ್ಗದರ್ಶನ ಸಂಬಂಧಕ್ಕೆ ಸೇರಿಸುತ್ತಾರೆ ಮತ್ತು ಇದು ವ್ಯಕ್ತಿಯ ವೃತ್ತಿಪರ ಅನುಭವವನ್ನು ಗಣನೀಯವಾಗಿ ಸುಧಾರಿಸಬಹುದು.


ಡಿ. **ಅಗತ್ಯವಿದ್ದಾಗ ಮಾರ್ಗದರ್ಶನ ಸಂಬಂಧಕ್ಕೆ ಪ್ರವೇಶ ಪಡೆಯಲು ಸಾಧ್ಯವಾಗುವುದಿಲ್ಲ.** ಮಾರ್ಗದರ್ಶನ ಸಂಬಂಧವು ಸ್ವಾಭಾವಿಕವಾಗಿ ಬೆಳೆಯುತ್ತದೆ ಮತ್ತು ಇದಕ್ಕೆ ಅಗತ್ಯವಿದ್ದಾಗ ಪ್ರವೇಶಿಸಬಹುದು. ಪೂರ್ವನಿರ್ಧರಿತ ಆವರ್ತನ ಮತ್ತು ಉದ್ದೇಶಗಳ ಪಟ್ಟಿಯನ್ನು ಒಳಗೊಂಡಿರುವ ರಚನಾತ್ಮಕ ಮಾರ್ಗದರ್ಶನ ಸಂಬಂಧವನ್ನು ಕೊನೆಯಲ್ಲಿ ಪೂರ್ಣಗೊಳಿಸಬೇಕು.

ಇ. **ಮಾರ್ಗದರ್ಶಕರು ಕಲಿಕಾರ್ಥಿಗಳಿಗಿಂತ ಹಿರಿಯರಾಗಿರಬೇಕು.** ಮಾರ್ಗದರ್ಶಕರನ್ನು ಆಯ್ಕೆ ಮಾಡಲು ಸೂಕ್ತವಾದ ಮಾರ್ಗವೆಂದರೆ ಅವರ ಪರಿಣತಿ, ಸಾಮರ್ಥ್ಯಗಳು, ಸಾಧನೆಗಳು ಮತ್ತು ಒಟ್ಟಿಗೆ ಕಲಿಯುವ ಮನಸ್ಥಿತಿಗಳ ಆಧಾರದ ಮೇಲೆ ಅವರನ್ನು ಮೌಲ್ಯಮಾಪನ ಮಾಡುವುದು.

ಎಫ್. **ಒಬ್ಬರು ಮಾರ್ಗದರ್ಶಕರಾಗಬಹುದು ಅಥವಾ ಕಲಿಕಾರ್ಥಿಯಾಗಬಹುದು.** ತಮ್ಮದೇ ಆದ ರೀತಿಯಲ್ಲಿ ಫಲಪ್ರದ ಮಾರ್ಗದರ್ಶನ ಸಂಬಂಧಗಳನ್ನು ನಿರ್ಮಿಸಲು ಅಗತ್ಯವಾದ ಕೌಶಲ್ಯಗಳನ್ನು ಪಡೆಯಲು, ಮಾರ್ಗದರ್ಶಕರಿಗೆ ತಮ್ಮದೇ ಆದ ಮಾರ್ಗದರ್ಶಕರ ಅಗತ್ಯವಿರುತ್ತದೆ. ಮಾರ್ಗದರ್ಶಕರು ಸಾಮಾನ್ಯವಾಗಿ ತಮ್ಮದೇ ಆದ ಮಾರ್ಗದರ್ಶಕರನ್ನು ಹೊಂದಿದ್ದು, ಅವರು ತಮ್ಮ ವೃತ್ತಿಪರ ಅಭಿವೃದ್ಧಿಯಲ್ಲಿ ಅವರಿಗೆ ಸಹಾಯ ಮಾಡುತ್ತಾರೆ.

ಅಧ್ಯಾಯ
3

# ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ - ಪರಿಚಯ



# ಅಧ್ಯಾಯ III: ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ- ಪರಿಚಯ

ಪರಸ್ಪರ ವೃತ್ತಿಪರ ಅಭಿವೃದ್ಧಿಗಾಗಿ ಕಲ್ಪನೆಗಳ ರಚನಾತ್ಮಕ ಹಂಚಿಕೆಯನ್ನು ಉತ್ತೇಜಿಸಲು ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ (ಎನ್.ಎಮ್.ಎಮ್) ಅಸ್ತಿತ್ವದಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಭಾರತೀಯ ಶಿಕ್ಷಣ ವ್ಯವಸ್ಥೆಯ ತ್ವರಿತ ಅಭಿವೃದ್ಧಿಯನ್ನು ಸುಲಭಗೊಳಿಸುತ್ತದೆ. ಇದಕ್ಕೆ ಅನುಗುಣವಾಗಿ, ಶಾಲಾ ಶಿಕ್ಷಕರು ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ಪಡೆಯಲು ಮತ್ತು ಹಂಚಿಕೆಯನ್ನು ಸುಧಾರಿಸಲು ಮಾರ್ಗದರ್ಶನಕ್ಕಾಗಿ ರಾಷ್ಟ್ರವ್ಯಾಪಿ ಯೋಜನೆಯನ್ನು ಎನ್.ಸಿ.ಟಿ.ಇ ಪ್ರಸ್ತಾಪಿಸುತ್ತದೆ.

## 3.1. ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯ ಅಗತ್ಯ


ಇಂದು ಶಿಕ್ಷಕರು ಎದುರಿಸುತ್ತಿರುವ ಅನಿರೀಕ್ಷಿತ ಒತ್ತಡಗಳು ಮತ್ತು ಸವಾಲುಗಳುಗಳಿಗೆ ಹೊಸ ಬಗೆಯ ಪರಿಹಾರಗಳನ್ನು ಒದಗಿಸಬೇಕಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣತಜ್ಞರ ಸಮುದಾಯವು ತಜ್ಞರಿಂದ ಸಮೃದ್ಧವಾಗಿದ್ದು, ಅವರು ಸಮಸ್ಯೆ-ಪರಿಹರಿಸುವ ಮತ್ತು ಸಮಾನ ವಯಸ್ಕರ ಸಾಮರ್ಥ್ಯದ ನಿರ್ಮಾಣಕ್ಕೆ ಕೊಡುಗೆ ನೀಡುವ ಜ್ಞಾನ ಮತ್ತು ಕೌಶಲ್ಯಗಳನ್ನು ಹೊಂದಿದ್ದಾರೆ. ನಿರಂತರವಾಗಿ ಬದಲಾಗುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವ ವ್ಯವಸ್ಥೆಗಳು, ತಮ್ಮ ನಾಗರಿಕರಿಗೆ ವೈಯಕ್ತಿಕ ಮತ್ತು ವೃತ್ತಿಪರ ಜೀವನವನ್ನು ಪೂರೈಸಲು ಸಾಧ್ಯವಾಗುವಂತೆ ಕೌಶಲ್ಯಗಳ ಸರಿಯಾದ ಮಿಶ್ರಣವನ್ನು ಒದಗಿಸಬಹುದು. ಇದು ಅಂತರ್ಗತ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಆದ್ದರಿಂದ, ಒಂದು ಮಾರ್ಗದರ್ಶಕ ವ್ಯವಸ್ಥೆಯು ಅಸ್ತಿತ್ವದಲ್ಲಿರುವ ಅಂತರವನ್ನು ಹೆಚ್ಚು ವಿಕೇಂದ್ರೀಕೃತ ರೀತಿಯಲ್ಲಿ ಪರಿಹಾರಿಸುತ್ತದೆ. ಇವುಗಳು ಪರಿಣತಿಯನ್ನು ಪ್ರವೇಶಿಸುವಲ್ಲಿನ ಅಂತರಗಳು, ನಿರಂತರ ವೃತ್ತಿಪರ ಅಭಿವೃದ್ಧಿ, ಒಂದೇ ರೀತಿಯ ಸನ್ನಿವೇಶಗಳಿಂದ ಸಮಾನ ಮನಸ್ಕರೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಅಡ್ಡ-ಕಲಿಕೆಯನ್ನು ಹತೋಟಿಗೆ ತರದೇ ಇರಲು ಒಂದು ವೇದಿಕೆಯ ಅನುಪಸ್ಥಿತಿಯೇ ಕಾರಣವಾಗಿದೆ. ಮಾರ್ಗದರ್ಶನವು ಅನುಭವಿ ವೃತ್ತಿಪರರೊಂದಿಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ವ್ಯಕ್ತಿಗಳಿಗೆ ಅವಕಾಶವನ್ನು ನೀಡುತ್ತದೆ. ಮಾರ್ಗದರ್ಶಕ-ಕಲಿಕಾರ್ಥಿಗಳ ನಡುವಿನ ಸಂವಾದಗಳಲ್ಲಿ ತೊಡಗಿಸಿಕೊಳ್ಳುವ ವಿಭಿನ್ನ ವಿಧಾನಗಳು ಶಿಕ್ಷಕರಿಗೆ ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಯನ್ನು ಸಕ್ರಿಯಗೊಳಿಸಬಹುದು. ಇದು ತಜ್ಞರೊಂದಿಗೆ ಜಾಲ ರಚಿಸಲು, ಕಲಿಕೆ ಮತ್ತು ಉತ್ತಮ ಅಭ್ಯಾಸಗಳನ್ನು ವಿನಿಮಯ ಮಾಡಿಕೊಳ್ಳಲು ವೇದಿಕೆಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಶಾಲಾ ನಾಯಕತ್ವ ಮತ್ತು ನಿರ್ವಹಣೆ, ಪಠ್ಯಕ್ರಮ, ಶಿಕ್ಷಣಶಾಸ್ತ್ರ, ಶೈಕ್ಷಣಿಕ ನೀತಿಗಳು ಮತ್ತು ಮೌಲ್ಯಮಾಪನಗಳಂತಹ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಪ್ರಸಾರ ಮಾಡಲು ಅವಕಾಶಗಳನ್ನು ಒದಗಿಸುತ್ತದೆ.

ಮಾಹಿತಿ ಮತ್ತು ಕಲಿಕೆಯ ಕ್ರಮಾನುಗತ, ಏಕಮುಖ, ಮೇಲಿನಿಂದ ಕೆಳಕ್ಕೆ ಹರಿವು, ಸಾಮಾನ್ಯವಾಗಿ ತರಬೇತಿ ಘಟನೆಗಳಾಗಿ ವಿನ್ಯಾಸಗೊಳಿಸುವುದು ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಚಲಿತವಾಗಿದೆ. ಮಾರ್ಗದರ್ಶನವು ಶ್ರೇಣಿಗಳ ಗಡಿಗಳನ್ನು ತಿಳಿಗೊಳಿಸಲು ಮತ್ತು ಮೂಲಭೂತ ಮಾದರಿ ಬದಲಾವಣೆಯನ್ನು ತರುವ ಅವಕಾಶವನ್ನು ಹೊಂದಿದೆ. ಇದು ಕಲಿಕೆಯನ್ನು ಹೆಚ್ಚು ಸಹಪಾಠಿ ಮತ್ತು ಸಮುದಾಯ-ನೇತೃತ್ವದ್ದನ್ನಾಗಿ ಮಾಡುತ್ತದೆ. ಇದು ಕಲಿಕೆಯನ್ನು ಹೆಚ್ಚು ವೈಯಕ್ತಿಕ ಮತ್ತು ನಿರಂತರವಾಗಿಸುತ್ತದೆ.

***ಮಾರ್ಗದರ್ಶನವು ಪಾಲುದಾರರಿಗೆ ಸಹಕಾರಿ ಏಜೆನ್ಸಿಯನ್ನು ಹುಟ್ಟುಹಾಕುತ್ತದೆ, ಅಲ್ಲಿ ಸಮುದಾಯವು ಕಲಿಕೆ, ಪ್ರತಿಫಲನ ಮತ್ತು ಸಾಮರ್ಥ್ಯ ವರ್ಧನೆಯ ಕಡೆಗೆ ಹಂಚಿಕೊಳ್ಳುವ ಮನೋಭಾವವನ್ನು ಬೆಳೆಸುತ್ತದೆ.***

## 3.2 ಯೋಜನೆಯನ್ನು ಹೇಗೆ ಸಾಧಿಸಲಾಗುತ್ತದೆ?

ಒಂದು ಸಾಮಾನ್ಯ ಗುರಿ ಸಾಧಿಸಲು ಹಲವಾರು ಕಾರ್ಯಕರ್ತರು ಸಂವಾದ ನಡೆಸುವ ಯೋಜನೆ ಎಂದು ಇದನ್ನು ವಿವರಿಸಬಹುದು. ಶಿಕ್ಷಣ ಕ್ಷೇತ್ರದ ಎಲ್ಲ ಹಂತಗಳಲ್ಲಿಯೂ ಇದನ್ನು ಜಾರಿಗೊಳಿಸಬಹುದು.





ಚಿತ್ರ 3.1: ಸಂವಹನದಲ್ಲಿ ತೊಡಗಿಸಿಕೊಂಡಿರುವ ಹಾಗೂ ಒಂದು ಘಟಕವಾಗಿ ಗುರಿಯತ್ತ ಸಾಗುತ್ತಿರುವ ಕಾರ್ಯಕರ್ತರು

### ಕಾರ್ಯಕರ್ತರು

ಈ ಮಾರ್ಗದರ್ಶಕ ಯೋಜನೆಯಲ್ಲಿ ಭಾಗವಹಿಸುವ ಮುಖ್ಯ ಕಾರ್ಯಕರ್ತರು ಎಂದರೆ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳಾಗಿದ್ದಾರೆ. ಕಲಿಕಾರ್ಥಿಗಳು ಶಿಕ್ಷಣ ಕ್ಷೇತ್ರದ ಕೇಡರ್‌ನ ವ್ಯಕ್ತಿಗಳಾಗಿದ್ದು, ಅವರು ಕ್ಷೇತ್ರದಲ್ಲಿ ವೃತ್ತಿಪರ ಅಭಿವೃದ್ಧಿಯನ್ನು ಬಯಸುತ್ತಾರೆ. ಮಾರ್ಗದರ್ಶಕರು ಅದೇ ಕೇಡರ್ ಅಥವಾ ಅದಕ್ಕಿಂತ ಉನ್ನತ ದರ್ಜೆಯವರಾಗಿದ್ದು, ಸ್ವಲ್ಪ ಸಮಯದವರೆಗೆ ಅದೇ ಕ್ಷೇತ್ರದಲ್ಲಿ ವೃತ್ತಿಪರ ಅಭಿವೃದ್ಧಿಯನ್ನು ಬಯಸುತ್ತಿದ್ದಾರೆ ಮತ್ತು "ಕೋರಿಕೆ"ಗೆ ತಕ್ಕಂತಹ ಚರ್ಚೆಗಳು ಮತ್ತು ಸಂಭಾಷಣೆಗಳನ್ನು ಸುಗಮಗೊಳಿಸುವಲ್ಲಿ ಪ್ರವೀಣರಾಗಿದ್ದಾರೆ.


ಸಣ್ಣ-ಪ್ರಮಾಣದ ಮಾರ್ಗದರ್ಶನ ಚಟುವಟಿಕೆಗಳನ್ನು ನಡೆಸಲು ಮಾರ್ಗದರ್ಶಕ ಮತ್ತು ಕಲಿಕಾರ್ಥಿಗಳ ಪಾತ್ರಗಳು ಸಾಕಾಗಬಹುದಾದರೂ, ಹೆಚ್ಚಿನ ಪ್ರಮಾಣದಲ್ಲಿ ಮಾರ್ಗದರ್ಶನ ರಚನೆಗಳನ್ನು ಸುಲಭಗೊಳಿಸಲು ಮತ್ತು ಉಳಿಸಿಕೊಳ್ಳಲು ಯೋಜನೆಯು ಮೂರನೇ ಅಂಶವನ್ನು ಒಳಗೊಂಡಿರುತ್ತದೆ. ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವೆ ನಡೆಯುವ ಎಲ್ಲಾ ಸಂವಾದಗಳ ಗುಣಮಟ್ಟ ಮತ್ತು ಆವರ್ತನವನ್ನು ನಿರಂತರವಾಗಿ ಸುಧಾರಿಸಲು ನಿರ್ವಾಹಕರು (ವೈಯಕ್ತಿಕ ಅಥವಾ ಘಟಕ) ಜವಾಬ್ದಾರರಾಗಿರುತ್ತಾರೆ. ಹೆಚ್ಚುವರಿಯಾಗಿ, ಇವರು ಮಾರ್ಗದರ್ಶನ ರಚನೆಯ ಮುಂದುವರಿದ ಅಭಿವೃದ್ಧಿ ಮತ್ತು ಪರಿಸರ ವ್ಯವಸ್ಥೆಯಿಂದ ಅದರ ಸಾಂಸ್ಥಿಕೀಕರಣವನ್ನು ಖಚಿತಪಡಿಸುತ್ತಾರೆ. ಶಿಕ್ಷಣ ಪರಿಸರ ವ್ಯವಸ್ಥೆಯಲ್ಲಿನ ಯಾವುದೇ ಮಾರ್ಗದರ್ಶನ ಕಾರ್ಯಕ್ರಮದ ಪ್ರಮಾಣವು ವಿಶಾಲವಾಗಿರುವ ಸಾಧ್ಯತೆಯಿರುವುದರಿಂದ, ಇತರ ವ್ಯವಸ್ಥೆಯ ಪಾಲುದಾರರಿಗೆ ತಂತ್ರಜ್ಞಾನ ಮತ್ತು ಆನ್‌ಲೈನ್ ವೇದಿಕೆಗಳನ್ನು ಅಭಿವೃದ್ಧಿಪಡಿಸಲು ಅಗಾಧವಾದ ಅವಕಾಶವಿದೆ.




ಚಿತ್ರ 3.2: ಮಾರ್ಗದರ್ಶನದ ಕಾರ್ಯಕರ್ತರು

ಈ ಕಾರ್ಯಕರ್ತರ ನಡುವಿನ ಸಂವಾದವು ಪ್ರಾಥಮಿಕವಾಗಿ ಜ್ಞಾನ, ಕೌಶಲ್ಯಗಳು, ಮೌಲ್ಯಗಳು ಮತ್ತು ಉತ್ತಮ ಅಭ್ಯಾಸಗಳ ಹಂಚಿಕೊಳ್ಳುವುದರ ಸುತ್ತ ಕೇಂದ್ರೀಕೃತವಾಗಿರುತ್ತದೆ. ಉದಾಹರಣೆಗೆ, ಹೊಸ ಶಿಕ್ಷಕರ ದೃಷ್ಟಿಕೋನಕ್ಕಾಗಿ ಉತ್ತಮ ಅಭ್ಯಾಸಗಳ ಕುರಿತ ಚರ್ಚೆಯನ್ನು ಸುಗಮಗೊಳಿಸಲು ಕಲಿಕಾರ್ಥಿಗಳ ಗುಂಪಿನೊಳಗೆ ನಡೆಯುವ ಸಂವಾದದಲ್ಲಿ ಮಾರ್ಗದರ್ಶಕರು ತೊಡಗುತ್ತಾರೆ; ರಚನೆಯ ನಿರ್ವಾಹಕರು, ಪ್ರಕರಣ-ಆಧಾರಿತ ಚರ್ಚೆಯನ್ನು ಹೇಗೆ ವ್ಯವಸ್ಥೆಗೊಳಿಸುವುದು ಎಂಬುದರ ಕುರಿತು ಕೌಶಲ್ಯ-ನಿರ್ಮಾಣ ಅಧಿವೇಶನದಲ್ಲಿ ಮಾರ್ಗದರ್ಶಕರನ್ನು ತೊಡಗಿಸಿಕೊಳ್ಳುತ್ತಾರೆ.

ಪರಸ್ಪರ ಕ್ರಿಯೆಯ ಪರಿಣಾಮಕಾರಿತ್ವವು ನಾಲ್ಕು ಅಂಶಗಳಿಂದ ಮಾರ್ಗದರ್ಶಿಸಲ್ಪಡುತ್ತದೆ - ಅವುಗಳೆಂದರೆ ಭರವಸೆ, ಒಮ್ಮತ, ರಚನೆ ಮತ್ತು ಪರಿಕರಗಳು.





ಚಿತ್ರ 3.3: ಪಾಲುದಾರರ ನಡುವಿನ ಸಂವಾದದ ತತ್ವಗಳು

## 3.3 ಯೋಜನೆಯ ನಿರೀಕ್ಷಿತ ಫಲಿತಾಂಶಗಳು ಯಾವುವು?

ಭಾರತೀಯ ಶಿಕ್ಷಣ ವ್ಯವಸ್ಥೆಯಾದ್ಯಂತ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವಿಕೆ ಮತ್ತು ವರ್ಗಾವಣೆಯನ್ನು ಸುಧಾರಿಸುವ ಸಾಮಾನ್ಯ ಗುರಿಯನ್ನು ಸಾಧಿಸಲು ಕಾರ್ಯಕರ್ತರು ಪರಸ್ಪರ ಸಂವಾದ ನಡೆಸುತ್ತಾರೆ. ಶಿಕ್ಷಣ ಪರಿಸರ ವ್ಯವಸ್ಥೆಯ ಹಂತಗಳಲ್ಲಿ ದೊಡ್ಡ ಪ್ರಮಾಣದ, ವಿಕೇಂದ್ರೀಕೃತ, ತಂತ್ರಜ್ಞಾನ-ನೆರವಿನ ಮಾರ್ಗದರ್ಶನ ರಚನೆಗಳ ಸಂಯೋಜನೆಯ ಮೂಲಕ ಇದನ್ನು ಸಾಧಿಸಲಾಗುತ್ತದೆ.

ಶಿಕ್ಷಣದಲ್ಲಿ ವರ್ಧಿತ, ವಿಕೇಂದ್ರೀಕೃತ ನಾಯಕತ್ವದ ಮೂಲಕ ಶಾಲಾ ಶಿಕ್ಷಣವನ್ನು ಸುಧಾರಿಸುವುದು ಅಂತಿಮ ಗುರಿಯಾಗಿದೆ. ಉದಾಹರಣೆಗೆ, ಶಿಕ್ಷಕರಲ್ಲಿ ಅವರ ಜ್ಞಾನದ ನೆಲೆಯನ್ನು ವಿಸ್ತರಿಸಲು, ಅವರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ತರಗತಿಯಲ್ಲಿನ ಸವಾಲುಗಳನ್ನು ಎದುರಿಸಲು ಅವರನ್ನು ಉತ್ತಮವಾಗಿ ಸಿದ್ಧಪಡಿಸಲು ಶಿಕ್ಷಕರಲ್ಲಿ ಕೌಶಲ್ಯ ನಿರ್ಮಾಣವನ್ನು ವೇಗಗೊಳಿಸಲು ಮಾರ್ಗದರ್ಶನವನ್ನು ಬಳಸಬೇಕು, ಇದರಿಂದಾಗಿ ಒಂದು ಗುಂಪಿನ ವಿದ್ಯಾರ್ಥಿಗಳಿಗೆ ಶಿಕ್ಷಣದ ದೈನಂದಿನ ಪ್ರಸಾರ ಸುಧಾರಣೆಯಾಗಿ, ಶಾಲೆಗಳು ಉತ್ತಮ ಕಲಿಕಾ ಸಂಸ್ಥೆಗಳಾಗಿ ಬೆಳೆಯಲು ಇದು ವೇಗ ಮತ್ತು ಪರಿಣಾಮಕಾರಿ ಮಾರ್ಗವೆಂದು ಸಾಬೀತುಪಡಿಸಬಹುದು. ರಾಜ್ಯ ಅಥವಾ ಜಿಲ್ಲಾ ಮಟ್ಟದಲ್ಲಿ ಸಂಬಂಧಪಟ್ಟ ಪಾಲುದಾರರು/ಸಂಸ್ಥೆಗಳು ಮಾರ್ಗದರ್ಶನವನ್ನು ಉತ್ತೇಜಿಸುವಲ್ಲಿ ಪಾತ್ರವನ್ನು ವಹಿಸಲು ಅವಕಾಶ ನೀಡುವ ಮೂಲಕ ಸಾಮರ್ಥ್ಯ ನಿರ್ಮಾಣಕ್ಕೆ ಹೆಚ್ಚು ವಿಕೇಂದ್ರೀಕೃತ ವಿಧಾನವನ್ನು ಅನುಮತಿಸುವ ಅವಕಾಶವೂ ಈ ಯೋಜನೆಯ ಭಾಗವಾಗಿದೆ. ಮುಂದುವರೆದು, ಶಾಲಾ ನಾಯಕರು ಮತ್ತು ಶೈಕ್ಷಣಿಕ ನಿರ್ವಾಹಕರಿಗೆ ಮಾರ್ಗದರ್ಶನ ನೀಡಲು ಯೋಜನೆಯನ್ನು ವಿಸ್ತರಿಸಬಹುದು. ಈ ಗುರಿಗಳನ್ನು ಸಾಧಿಸುವುದು ನಿರಂತರ ಪ್ರಯಾಣವಾಗಿದ್ದರೂ, ಅದರ ಪ್ರಗತಿಯನ್ನು ಸೂಚಿಸುವ ಯೋಜನೆಯ ಕೆಲವು ಗಟ್ಟಿ ಹಂತಗಳಿವೆ.




ಚಿತ್ರ 3.4: ಯೋಜನೆಯ ಪ್ರಮುಖ ಹಂತಗಳು

### ಹಂತ 1: ತಯಾರಿ

ವ್ಯವಸ್ಥೆಯಲ್ಲಿನ ಪಾಲುದಾರರು ವೃತ್ತಿಪರ ಅಭಿವೃದ್ಧಿಗಾಗಿ ಅಗತ್ಯಗಳ ಮೌಲ್ಯಮಾಪನವನ್ನು ನಡೆಸಬಹುದು ಮತ್ತು ಅಗತ್ಯಗಳನ್ನು ಪೂರೈಸಲು ಮಾರ್ಗದರ್ಶನ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಸಾಕಷ್ಟು ಸಂಪನ್ಮೂಲಗಳಿಗಾಗಿ ಭೂದೃಶ್ಯದ ನಕ್ಷೆ ರಚಿಸಬಹುದು. ಈ ಸಮಯದಲ್ಲಿ, ವ್ಯವಸ್ಥಿತ ಕಾರ್ಯಕರ್ತರು ಈ ನೀಲಿ ಪುಸ್ತಕನಂತಹ ಸಂಪನ್ಮೂಲಗಳನ್ನು ದೊಡ್ಡ-ಪ್ರಮಾಣದ ಮಾರ್ಗದರ್ಶನ ವ್ಯವಸ್ಥೆಯ ಅನುಷ್ಠಾನಕ್ಕೆ ಉತ್ತೇಜನ ನೀಡಲು ಬಳಸಬಹುದು.

### ಹಂತ 2: ಸಾಮರ್ಥ್ಯ ನಿರ್ಮಾಣ

ಒಮ್ಮೆ ಮಾರ್ಗದರ್ಶಕರನ್ನು ನೇಮಿಸಿಕೊಂಡ ನಂತರ, ಈ ಹಂತವು ಅಗತ್ಯ ಮಾರ್ಗದರ್ಶನ ಕೌಶಲ್ಯಗಳು ಮತ್ತು ತಂತ್ರಗಳೊಂದಿಗೆ ಕ್ಷೇತ್ರಕ್ಕೆ ಸಂಬಂಧಿಸಿದ ಕೌಶಲ್ಯಗಳಲ್ಲಿ ಅವರ ಸಾಮರ್ಥ್ಯವನ್ನು ನಿರ್ಮಿಸಲು ಅನುವು ಮಾಡಿಕೊಡುತ್ತದೆ.

### ಹಂತ 3: ಪರಿಚಿತತೆ

ಈ ಹಂತದಲ್ಲಿ, ಮಾರ್ಗದರ್ಶಕರು ನಿಯಂತ್ರಿತ ಪರಿಸರದಲ್ಲಿ ಹಂತ- 2 ರ ಸಮಯದಲ್ಲಿ ಅವರು ಕಲಿತ ಕೌಶಲ್ಯಗಳನ್ನು ಅಭ್ಯಾಸ ಮಾಡಬಹುದು. ಪರಿಚಿತತೆಯ ಹಂತವನ್ನು ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ಪ್ರತಿಕ್ರಿಯೆಯ ಆಧಾರದ ಮೇಲೆ ಹಂತ- 2 ರಲ್ಲಿ ಸಾಮರ್ಥ್ಯ ನಿರ್ಮಾಣಕ್ಕಾಗಿ ಬಳಸುವ ವಿಧಾನವನ್ನು ಪರಿಷ್ಕರಿಸಲು ಸಹ ಬಳಸಬಹುದು.

### ಹಂತ 4: ಬಲಪಡಿಸುವುದು

ಒಮ್ಮೆ ಕಾರ್ಯಕರ್ತರು ನಿಯಂತ್ರಿತ ಪರಿಸರದಲ್ಲಿ ಮಾರ್ಗದರ್ಶನ ರಚನೆಗಳನ್ನು ವಿಶ್ವಾಸದಿಂದ ಕಾರ್ಯಗತಗೊಳಿಸಿದರೆ, ಮಾರ್ಗದರ್ಶಕರು ತಮ್ಮ ಪರಿಣತಿಯ ಕ್ಷೇತ್ರಗಳಲ್ಲಿ ಮಾರ್ಗದರ್ಶನ ನೀಡುವಲ್ಲಿ ಅನುಭವವನ್ನು ಪಡೆಯಲು ಪ್ರಾರಂಭಿಸುತ್ತಾರೆ. ಈ ಹಂತವು ನಡೆಯುತ್ತಿರುವ ಸಾಮರ್ಥ್ಯ-ವರ್ಧನೆಯ ಅವಧಿಗಳ ಮೂಲಕ ಮಾರ್ಗದರ್ಶಕರ ನಿರಂತರ ಅಭಿವೃದ್ಧಿಗೆ ಅವಕಾಶ ನೀಡುತ್ತದೆ. ಈ ಸಮಯದಲ್ಲಿ, ಮಾರ್ಗದರ್ಶಕ ಸಂಬಂಧದ ಅಂತಿಮ ಫಲಿತಾಂಶದ ಕಡೆಗೆ ಮೆಟ್ರಿಕ್ಸ್'ಗಳನ್ನು ಟ್ರ್ಯಾಕಿಂಗ್ ಮಾಡುವುದು ಮಾರ್ಗದರ್ಶನ ರಚನೆಯ ಪರಿಣಾಮಕಾರಿತ್ವವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ನಿಗದಿತ ಫಲಿತಾಂಶಗಳನ್ನು ಸಾಧಿಸಲು ಅದನ್ನು ಮರು-ಹೊಂದಿಸಲು ಸಹಾಯ ಮಾಡುತ್ತದೆ.

ಮಾರ್ಗದರ್ಶನ ಕಾರ್ಯಕ್ರಮಕ್ಕೆ ಉದ್ದೇಶಿತ ಆಶಯಗಳೊಂದಿಗೆ ಫಲಿತಾಂಶಗಳನ್ನು ಜೋಡಿಸಬೇಕು. ಉದಾಹರಣೆಗೆ, ಶಿಕ್ಷಕರ ಸಹಪಾಠಿ ಮಾರ್ಗದರ್ಶನ ವಲಯಗಳ ಮೂಲಕ ಪ್ರಾಥಮಿಕ ಸಾಕ್ಷರತೆ ಮತ್ತು ಗಣಿತಜ್ಞತೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸುವ ಕಾರ್ಯಕ್ರಮದಲ್ಲಿ, ಮೌಲ್ಯಮಾಪನ ಮಾಡುವ ಫಲಿತಾಂಶವು ಪ್ರಾಥಮಿಕ ಸಾಕ್ಷರತೆ ಮತ್ತು ಗಣಿತಜ್ಞತೆ ಮೌಲ್ಯಮಾಪನಗಳಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯು ಶೇಕಡಾ (%) ಹೆಚ್ಚಳವಾಗಿದೆ.

### ಹಂತ 5: ಬೆಳವಣಿಗೆ ಮತ್ತು ಸುಸ್ಥಿರತೆ

ಈ ಹಂತವು ಮಾರ್ಗದರ್ಶನ ರಚನೆಯನ್ನು ಪರೀಕ್ಷಿಸುವುದರಿಂದ ಮಾರ್ಗದರ್ಶನದಲ್ಲಿ ಅಭ್ಯಾಸದ ಸಮುದಾಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಗಮನವನ್ನು ಬದಲಾಯಿಸುತ್ತದೆ. ವ್ಯವಸ್ಥೆಯಲ್ಲಿನ ಎಲ್ಲಾ ಸಂಬಂಧಿತ ಪಾಲುದಾರರ ಭಾಗವಹಿಸುವಿಕೆ ಮತ್ತು ಅದರಲ್ಲಿ ಅವರ ನಿರಂತರ ಆಸಕ್ತಿಯನ್ನು ಖಚಿತಪಡಿಸಿಕೊಳ್ಳಲು ಮಾರ್ಗದರ್ಶನ ರಚನೆಯನ್ನು ಈಗ ಅಳೆಯಬಹುದು. ಕಾರ್ಯವಿಧಾನಗಳನ್ನು ಪರಿಚಯಿಸುವ ಮೂಲಕ ಕೆಳಗಿನವುಗಳನ್ನು ಸಾಧಿಸಬಹುದು:

ಎ. ಮೌಲ್ಯದ ಕೊಡುಗೆಗಳನ್ನು ಪ್ರದರ್ಶಿಸುವ ಮೂಲಕ ಭಾಗವಹಿಸುವಿಕೆಯ ಅಗತ್ಯವನ್ನು ಪ್ರಚೋದಿಸಿ,

ಬಿ. ಪ್ರತಿಯೊಬ್ಬರಿಂದ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸಲು ಸಾಂಸ್ಥಿಕೀಕರಣ ಮತ್ತು

ಸಿ. ಸಂಬಂಧಿತ ಪ್ರೋತ್ಸಾಹಗಳ ಮೂಲಕ ರಚನೆಗಳಲ್ಲಿ ನಿರಂತರ ಭಾಗವಹಿಸುವಿಕೆಗಾಗಿ ಕಾರ್ಯಕರ್ತರನ್ನು ಪ್ರೇರೇಪಿಸುತ್ತದೆ.

ಯೋಜನೆಯ ಈ ಕೆಳಗಿನ ವಿಭಾಗಗಳು ಮೇಲೆ ತಿಳಿಸಲಾದ ಹಂತ ಹಂತದ ಪ್ರಸರಣವನ್ನು ಕೈಗೊಳ್ಳಲು ಮಾರ್ಗದರ್ಶಿ ವ್ಯವಸ್ಥೆಯಲ್ಲಿನ ಎಲ್ಲಾ ಕಾರ್ಯಕರ್ತರ ನಡುವಿನ ಸಂವಾದದ ಮೌಲ್ಯವನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಕೆಲವು ರಚನೆಗಳನ್ನು ವಿವರಿಸುತ್ತದೆ.

ಅಧ್ಯಾಯ
4

# ಮಾರ್ಗದರ್ಶನಕ್ಕಾಗಿ ಪರಿಹಾರಗಳು



# ಅಧ್ಯಾಯ IV: ಮಾರ್ಗದರ್ಶನಕ್ಕಾಗಿ ಪರಿಹಾರಗಳು

## 4.1 ಮಾರ್ಗದರ್ಶಕರ ಆಯ್ಕೆ

ರಚನೆಗಳನ್ನು ಸುಗಮಗೊಳಿಸಲು ಮತ್ತು ದೀರ್ಘಕಾಲದವರೆಗೆ ಪ್ರಕ್ರಿಯೆಯನ್ನು ಉಳಿಸಿಕೊಳ್ಳಲು ನಿರ್ವಾಹಕರನ್ನು (ವ್ಯಕ್ತಿಗತ ಅಥವಾ ಘಟಕ) ಹೊರತುಪಡಿಸಿ, ಮಾರ್ಗದರ್ಶಿ ರಚನೆಗೆ ಗೊತ್ತುಪಡಿಸಿದ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ಅಗತ್ಯವಿದೆ. ಈ ವಿಭಾಗವು ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯು ಹೇಗಿರಬಹುದೆಂಬುದರ ಕುರಿತು ಆಲೋಚನೆಗಳನ್ನು  ಮತ್ತು ಮಾರ್ಗದರ್ಶಕರು ಹಾಗೂ ಕಲಿಕಾರ್ಥಿಗಳ ಗುಣಲಕ್ಷಣಗಳನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುವ ಹೊಳವುಗಳನ್ನು ಒಳಗೊಂಡಿದೆ.

### 4.1.1 ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆ

ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ, ಮಾರ್ಗದರ್ಶಕ, ರಚನೆಯಲ್ಲಿ ತೊಡಗಿರುವ ಇತರ ಪಾಲುದಾರರೊಂದಿಗೆ ವಿಶ್ವಾಸದಿಂದಿರಬೇಕು. ಮಾರ್ಗದರ್ಶಕರನ್ನು ಆಯ್ಕೆ ಮಾಡಲು ಅಳವಡಿಸಿಕೊಂಡ ಪ್ರಕ್ರಿಯೆಯು ಮಾರ್ಗದರ್ಶಕರಲ್ಲಿ ನಂಬಿಕೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಮತ್ತು ಅದರ ಪರಿಣಾಮವಾಗಿ ಮಾರ್ಗದರ್ಶಕ ಸಂವಾದಗಳನ್ನು ಪ್ರವೇಶಿಸುವ ರೀತಿಯಲ್ಲಿ, ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯು ಇದಕ್ಕೆ ಅನುಮತಿ ನೀಡುತ್ತದೆ:

ಎ. ಸಹಪಾಠಿಗಳಿಂದ ನಾಮನಿರ್ದೇಶನ ಮತ್ತು/ಅಥವಾ ಸಂಭಾವ್ಯ ಅಭ್ಯರ್ಥಿಗಳಿಂದ ಇಚ್ಛೆಯ ಅಭಿವ್ಯಕ್ತಿ.

ಬಿ. ಮಾರ್ಗದರ್ಶಕರ ಆಯ್ಕೆಯ ಮಾನದಂಡದ ಮೂಲಕ ಅಭ್ಯರ್ಥಿಯ ಅರ್ಜಿಯ ಮೌಲ್ಯಮಾಪನ

ಸಿ. ಮಾರ್ಗದರ್ಶಕರ ದೃಷ್ಟಿಕೋನ ಮತ್ತು ಸಾಮರ್ಥ್ಯ ನಿರ್ಮಾಣ

ಸೂಕ್ತವಾದ ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಲು ಸಹಾಯ ಮಾಡಲು ವಿವಿಧ ಕ್ಷೇತ್ರಗಳು/ಶಿಸ್ತುಗಳ ಸಮಾಜಶಾಸ್ತ್ರಜ್ಞರು, ಮನಶ್ಶಾಸ್ತ್ರಜ್ಞರು ಮತ್ತು ಶಿಕ್ಷಣತಜ್ಞರನ್ನು ಸಹ ಮಂಡಳಿಯಲ್ಲಿ ಸೇರಿಸಿಕೊಳ್ಳಬಹುದು. ವ್ಯವಸ್ಥೆಯ ಅಗತ್ಯಗಳಿಗೆ ಅನುಗುಣವಾಗಿ ಆಯ್ಕೆ ಪ್ರಕ್ರಿಯೆಯನ್ನು ಸಂದರ್ಭೋಚಿತಗೊಳಿಸಲು ಇದು ಸಹಾಯ ಮಾಡುತ್ತದೆ.

ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯಲ್ಲಿ ಎಲ್ಲಾ ಆಸಕ್ತ ಅಭ್ಯರ್ಥಿಗಳು ಪ್ರವೇಶ ಪಡೆಯಬಹುದಾಗಿದೆ. ಉದಾಹರಣೆಗೆ, ತಂತ್ರಜ್ಞಾನದೊಂದಿಗೆ ಒಗ್ಗಿಕೊಳ್ಳಲಾಗದ ಅಥವಾ ಪ್ರವೇಶವನ್ನು ಹೊಂದಿರದ ಸಂಭಾವ್ಯ ಅಭ್ಯರ್ಥಿಗಳು ಇರಬಹುದು. ಅಂತೆಯೇ, ಮಾರ್ಗದರ್ಶನ ರಚನೆಯು ಅಖಿಲ ಭಾರತ/ರಾಜ್ಯ ಸೇವಾ ಅಧಿಕಾರಿಗಳಂತಹ ಇತರ ಕ್ಷೇತ್ರಗಳಿಂದ ಮಾರ್ಗದರ್ಶಕರನ್ನು ಆಯ್ಕೆ ಮಾಡಲು ಉದ್ದೇಶಿಸಿದ್ದರೆ, ಅರ್ಜಿ ಸಲ್ಲಿಸಲು ಅವರಿಗೆ ಆಯ್ಕೆ ಪ್ರಕ್ರಿಯೆಯು ಗೋಚರಿಸಬೇಕು. ಸಂಭಾವ್ಯ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಯು ಅಡ್ಡಿಯಾಗಬಾರದು.

## 4.2 ಮಾರ್ಗದರ್ಶಕರ ಗುಣಲಕ್ಷಣಗಳು

ಸಂಬಂಧಗಳಿಗೆ ಮಾರ್ಗದರ್ಶನ ನೀಡುವ ಸಮಯದಲ್ಲಿ ಅಥವಾ ಅದಕ್ಕೂ ಮೊದಲು, ಅದರ ಹೆಚ್ಚಿನ ಪ್ರಯೋಜನವನ್ನು ಪಡೆಯಲು, ಮಾರ್ಗದರ್ಶಿ ಮತ್ತು ಕಲಿಕಾರ್ಥಿಗಳು ಹೊಂದಲು, ತಯಾರಿ ಮತ್ತು ಕಲಿಯಲು ಅಗತ್ಯವಿರುವ ಕೆಲವು ಗುಣಲಕ್ಷಣಗಳಿವೆ. ಮಾರ್ಗದರ್ಶಕರು ಕಾರ್ಯಕ್ರಮದ ಅಪೇಕ್ಷಿತ ಕಲಿಕೆಯ ಫಲಿತಾಂಶಗಳಿಗೆ ಕಾರಣವಾದ ಮಹತ್ವಾಕಾಂಕ್ಷೆಯ ಗುಣಗಳನ್ನು ಹೊಂದಿರಬೇಕು. ಮಾರ್ಗದರ್ಶಕ ಸಂಬಂಧದಲ್ಲಿ ಪಾತ್ರವನ್ನು ವಹಿಸಿಕೊಳ್ಳಲು ಅಗತ್ಯವಾದ ಕೆಲವು ಗುಣಲಕ್ಷಣಗಳನ್ನು ವೀಕ್ಷಿಸಬಹುದು, ಆದರೆ ಕೆಲವು ಗುಣಲಕ್ಷಣಗಳನ್ನು ಮಾರ್ಗದರ್ಶಕ ತರಬೇತಿ ಮತ್ತು ನಿರಂತರ ಸಾಮರ್ಥ್ಯ-ವರ್ಧನೆಯ ಕಾರ್ಯಕ್ರಮಗಳ ಮೂಲಕ ಅಭಿವೃದ್ಧಿಪಡಿಸಬಹುದು.

ಮಾರ್ಗದರ್ಶಕ ವ್ಯವಸ್ಥೆಯ ಸಂದರ್ಭವನ್ನು ಅವಲಂಬಿಸಿ, ಮಾರ್ಗದರ್ಶಕರ ಆಯ್ಕೆಗೆ ಆರಂಭಿಕ ಹಂತವಾಗಿ ಕಾರ್ಯನಿರ್ವಹಿಸಬಹುದಾದ ಗುಣಲಕ್ಷಣಗಳ ಪಟ್ಟಿ ಇಲ್ಲಿದೆ ಮತ್ತು ಮುಂದೆ, ಮಾರ್ಗದರ್ಶಕರ ತರಬೇತಿಗೆ ಉಲ್ಲೇಖಿಸಲಾಗಿದೆ.

ಎ. **ವೈವಿಧ್ಯತೆಯ ಅರಿವು:** ಈ ಸಂದರ್ಭದಲ್ಲಿ, ವೈವಿಧ್ಯತೆಯ ಅರಿವು ಎಂದರೆ ಕಾರ್ಯಕ್ರಮದ ಮಧ್ಯಸ್ಥಿಕೆಯ ಮಾರ್ಗದರ್ಶನದ ಸಮಯದಲ್ಲಿ ನಿರ್ದಿಷ್ಟ ಪರಿಸರದಲ್ಲಿ ವಿವಿಧ ಜನರು, ಗುಂಪುಗಳು ಮತ್ತು ಅಭಿಪ್ರಾಯಗಳ ಅಸ್ತಿತ್ವದ ಬಗ್ಗೆ ತಿಳಿದಿರುವುದು. ಇದು ಸಾಮಾಜೋ-ಆರ್ಥಿಕ ಹಿನ್ನೆಲೆಗಳು, ಲಿಂಗ, ವಯಸ್ಸು, ಸಂಸ್ಕೃತಿ, ಜಾತಿ, ಧರ್ಮ ಮತ್ತು ವಿವಿಧ ಮಾರ್ಗದರ್ಶಕರು ಮತ್ತು ಮಾರ್ಗದರ್ಶಕರ ಇತರ ಅಂಶಗಳಿಗೆ ಸಂಬಂಧಿಸಿದ ಪ್ರಜ್ಞೆ ಮತ್ತು ವೈಯಕ್ತಿಕ ವ್ಯತ್ಯಾಸಗಳನ್ನು ಒಳಗೊಂಡಿದೆ.

ಬಿ. **ಪರಿಣಾಮಕಾರಿ ಸಂವಹನ:** ಪರಿಣಾಮಕಾರಿ ಸಂವನಹವು ಮಾರ್ಗದರ್ಶಿಯ ಪ್ರಮುಖ ಲಕ್ಷಣವಾಗಿದೆ. ಇದು ಹೊಳವುಗಳು, ಪರಿಕಲ್ಪನೆಗಳು, ಜ್ಞಾನ, ಆಲೋಚನೆಗಳು ಮತ್ತು ಭಾವನೆಗಳನ್ನು ಸಂಕ್ಷಿಪ್ತವಾಗಿ ಮತ್ತು ಮನವೊಪ್ಪಿಸುವ ರೀತಿಯಲ್ಲಿ ಸಂವಾದ ಮಾಡುವ ಸಾಮರ್ಥ್ಯವನ್ನು ಒಳಗೊಂಡಿದೆ. ಅಲ್ಲದೆ, ಸಕ್ರಿಯವಾಗಿ ಆಲಿಸುವುದು, ಗ್ರಹಿಸುವುದು ಮತ್ತು ಇತರರಿಗೆ ಪ್ರತಿಕ್ರಿಯಿಸುವುದು ಮಾರ್ಗದರ್ಶಕರಿಗೆ ಸಮಾನವಾಗಿ ಮುಖ್ಯವಾಗಿದೆ. ಆದ್ದರಿಂದ, ಯಶಸ್ವಿ ಕಾರ್ಯಕ್ರಮದ ಅನುಷ್ಠಾನಕ್ಕೆ ಪರಿಣಾಮಕಾರಿ ಸಂವಹನ ಅತ್ಯಗತ್ಯ.

ಸಿ. **ಸಹಾನುಭೂತಿ:** ಮಾರ್ಗದರ್ಶಕರು ತಮ್ಮ ಕಲಿಕಾರ್ಥಿಗಳ ಬಗ್ಗೆ ಸಹಾನುಭೂತಿ ಹೊಂದಿರಬೇಕು, ಅವರ ದೃಷ್ಟಿಕೋನಗಳು, ಭಾವನೆಗಳು, ಆಲೋಚನೆಗಳು ಮತ್ತು ಅನುಭವಗಳನ್ನು ಅರ್ಥಮಾಡಿಕೊಂಡು ಸಂಬಂಧ ಏರ್ಪಡಿಸಬೇಕು. ಇದು ಕಲಿಕಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡಲು ಅನುವು ಮಾಡಿಕೊಡುತ್ತದೆ.

ಡಿ. **ಅನುಭವ:** ಈ ಪರಿಸ್ಥಿತಿಯಲ್ಲಿ ಅನುಭವವು ಮುಖ್ಯವಾಗಿದೆ ಏಕೆಂದರೆ ಕಾರ್ಯಕ್ರಮದ ಮಧ್ಯಸ್ಥಿಕೆಯಲ್ಲಿ ಮಾರ್ಗದರ್ಶಕರು ಮತ್ತು ಕಲಿಕಾರ್ಥಿ ಇಬ್ಬರೂ ಪ್ರಮುಖ ಪಾತ್ರವಹಿಸುತ್ತಾರೆ. ಅನುಭವವು ತಮ್ಮ ವೃತ್ತಿಪರ ಬೆಳವಣಿಗೆಯ ಉದ್ದಕ್ಕೂ ಮಾರ್ಗದರ್ಶಕರು ಗಳಿಸಿದ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯವನ್ನು ಸೂಚಿಸುತ್ತದೆ. ಕಲಿಕಾರ್ಥಿ ಎದುರಿಸುತ್ತಿರುವ ಸಂದರ್ಭಗಳು ಮತ್ತು ಸವಾಲುಗಳನ್ನ ಹಂಚಿಕೊಂಡು ಮತ್ತು ಉತ್ತಮ ಅಭ್ಯಾಸಗಳ ಉದಾಹರಣೆಗಳನ್ನು ಹೊರತರಿಸಲು ಮತ್ತು ಹಂಚಿಕೊಳ್ಳಲು ಕಲಿಕಾರ್ಥಿ ಅವರಂತೆಯೇ ಮಾರ್ಗದರ್ಶಕರ ಶ್ರೀಮಂತ ಅನುಭವವು ಅವಶ್ಯಕವಾಗಿದೆ.

ಇ. **ಪರಿಣತಿ:** ನಿರ್ದಿಷ್ಟ ವಿಷಯ, ವೃತ್ತಿ ಅಥವಾ ಕ್ಷೇತ್ರದಲ್ಲಿ ಉನ್ನತ ಮಟ್ಟದ ಜ್ಞಾನ, ಕೌಶಲ್ಯ ಅಥವಾ ಪ್ರಾವೀಣ್ಯತೆಯನ್ನು ಹೊಂದಿರುವ ವ್ಯಕ್ತಿಯನ್ನು ವಿವರಿಸಲು ಪರಿಣತಿ ಎಂಬ ಪದವನ್ನು ಬಳಸಲಾಗುತ್ತದೆ. ಕಲಿಕಾರ್ಥಿಗಳು ತಮ್ಮ ಕ್ಷೇತ್ರದ ಬಗ್ಗೆ ಆಳವಾದ ಗ್ರಹಿಕೆಯನ್ನು ಬೆಳೆಸಿಕೊಳ್ಳಲು, ಮಾರ್ಗದರ್ಶಕರು ಆಯಾ ಕ್ಷೇತ್ರ ಅಥವಾ ವಿಷಯದಲ್ಲಿ ಪರಿಣತರಾಗಿರಬೇಕು ಮತ್ತು ಒಳನೋಟಗಳು ಮತ್ತು ಉತ್ತಮ ಅಭ್ಯಾಸಗಳನ್ನು ರೂಢಿ ಮಾಡಿಕೊಳ್ಳಲು ಶಕ್ತರಾಗಿಬೇಕು.

ಎಫ್. **ನಮ್ಯತೆ:** ಮಾರ್ಗದರ್ಶಿ ವಿಧಾನದಲ್ಲಿ ನಮ್ಯತೆಯನ್ನು ಹೊಂದಿರುವುದು ಮಾರ್ಗದರ್ಶಕರ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ಮಾರ್ಗದರ್ಶನ ಕಾರ್ಯಕ್ರಮದ ಸಮಯದಲ್ಲಿ, ಮಾರ್ಗದರ್ಶಕರು ಕಲಿಕಾರ್ಥಿಗಳ ಅಗತ್ಯಗಳಿಗೆ ಅನುಗುಣವಾಗಿ ವಿಷಯ ಮತ್ತು ವಿಧಾನಕ್ಕೆ ಹೊಂದಿಕೊಳ್ಳಲು ಮತ್ತು ಮಾರ್ಪಡಿಸಲು ಸಾಧ್ಯವಾಗುತ್ತದೆ. ಎಲ್ಲಾ ಕಲಿಕಾರ್ಥಿಗಳಿಗೆ ವಿಷಯವನ್ನು ಸುಲಭವಾಗಿ ತಿಳಿಸಲು ಪ್ರಾತಿನಿಧ್ಯದ ಬಹು ವಿಧಾನಗಳನ್ನು ಬಳಸುವ ಸಾಮರ್ಥ್ಯವನ್ನು ಅವಳು/ಅವನು ಹೊಂದಿರಬೇಕು. ಪ್ರಕ್ರಿಯೆ ಮತ್ತು ವಿಧಾನದಲ್ಲಿ ನಮ್ಯತೆ ಎರಡೂ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಜಿ. **ಸ್ಫೂರ್ತಿದಾಯಕ:** ಯಶಸ್ವಿ ಮಾರ್ಗದರ್ಶಕನು ಸ್ಫೂರ್ತಿದಾಯಕ ಗುಣಗಳನ್ನು ಹೊಂದಿರಬೇಕು. ತಮ್ಮ ಕಲಿಕಾರ್ಥಿಗಳನ್ನು ಪ್ರೇರೇಪಿಸುವ ಮಾರ್ಗದರ್ಶಕರು ಆಸಕ್ತಿ, ಉತ್ಸಾಹ ಮತ್ತು ಮುನ್ನುಗ್ಗುವ ಪ್ರಜ್ಞೆಯನ್ನು ಬೆಳೆಸುವ ಮೂಲಕ ಅವರ ಅತ್ಯುತ್ತಮ ಸಾಮರ್ಥ್ಯವನ್ನು ಸಾಧಿಸಲು ಸಹಾಯ ಮಾಡುತ್ತಾರೆ. ಸ್ಫೂರ್ತಿದಾಯಕ ಮಾರ್ಗದರ್ಶಕನು ಶ್ರೇಷ್ಠತೆಗಾಗಿ ಶ್ರಮಿಸುವಂತೆ ಕಲಿಕಾರ್ಥಿಗಳು ಪ್ರೋತ್ಸಾಹಿಸುತ್ತಾನೆ ಮತ್ತು ಕಾರ್ಯಕ್ಷಮತೆಯ ಹೆಚ್ಚಿನ ನಿರೀಕ್ಷೆಗಳನ್ನು ನಿಗದಿಪಡಿಸುತ್ತಾನೆ. ಕಲಿಕಾರ್ಥಿಗಳು ತಮ್ಮ ಸ್ವಂತ ಕಾರ್ಯಗಳು ಮತ್ತು ಯಶಸ್ಸಿನ ಮೂಲಕ ಉತ್ತಮ ವಿಷಯಗಳನ್ನು ಸಾಧಿಸಬಹುದು ಎಂದು ವಿವರಿಸುವ ಮೂಲಕ, ಅವರು ತಮ್ಮ ಆರಾಮ ವಲಯಗಳನ್ನು ದಾಟಿ ತಮ್ಮ ಉದ್ದೇಶಗಳನ್ನು ಅನುಸರಿಸುವಂತೆ ಮಾರ್ಗದರ್ಶಕರನ್ನು ಪ್ರೇರೇಪಿಸುತ್ತಾರೆ.

ಎಚ್. **ನಾಯಕತ್ವ ಕೌಶಲ್ಯಗಳು:** ಸಾಮಾನ್ಯ ಗುರಿ ಅಥವಾ ಉದ್ದೇಶದ ಕಡೆಗೆ ಇತರರನ್ನು ಮುನ್ನಡೆಸಲು, ಪ್ರಭಾವಿಸಲು ಮತ್ತು ಪ್ರೇರೇಪಿಸಲು, ಮಾರ್ಗದರ್ಶಕರು ನಾಯಕತ್ವದ ಲಕ್ಷಣಗಳು ಮತ್ತು ನಡವಳಿಕೆಗಳನ್ನು ಹೊಂದಿರಬೇಕು. ತಮ್ಮ ಕಲಿಕಾರ್ಥಿಗಳಿಗೆ

ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಲು ಅವರ ಸಂಬಂಧಗಳ ಮೇಲೆ ಪ್ರಭಾವ ಬೀರಲು ಮಾರ್ಗದರ್ಶಕರಿಗೆ ನಾಯಕತ್ವ ಕೌಶಲ್ಯಗಳು ಬೇಕಾಗಿರುವುದು ನಿರ್ಣಾಯಕವಾಗಿದೆ.

ಐ. **ವಿಮರ್ಶಾತ್ಮಕ ಚಿಂತನೆ:** ಮಾರ್ಗದರ್ಶಕರು ತರ್ಕ ಮತ್ತು ಕಾರಣಗಳ ಆಧಾರದ ಮೇಲೆ ಆಲೋಚನೆಗಳು, ತಾರ್ಕಿಕತೆ, ಸನ್ನಿವೇಶಗಳು ಇತ್ಯಾದಿಗಳನ್ನು ವಿಶ್ಲೇಷಿಸುವುದು ಮತ್ತು ಮೌಲ್ಯಮಾಪನ ಮಾಡುವುದು ಮುಖ್ಯವಾಗಿದೆ. ಮಾರ್ಗದರ್ಶಕರು ಯಾವಾಗಲೂ ಸಮಸ್ಯೆಗಳನ್ನು ತಾರ್ಕಿಕವಾಗಿ ಪರಿಹರಿಸಬೇಕು ಮತ್ತು ಪುರಾವೆಗಳನ್ನು ಹುಡುಕದೆ ಸತ್ಯ ಅಥವಾ ಮಾಹಿತಿಯನ್ನು ಸ್ವೀಕರಿಸುವ ಬದಲು ವಿಭಿನ್ನ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ವಿಮರ್ಶಾತ್ಮಕ ಚಿಂತನೆಯು ಕಲಿಕಾರ್ಥಿಗಳಿಗೆ ಸವಾಲುಗಳು ಮತ್ತು ಅಡೆತಡೆಗಳನ್ನು ದಾಟಲು, ಅವರ ವಿಧಾನಗಳನ್ನು ಮೌಲ್ಯಮಾಪನ ಮಾಡಲು, ಪರಿಸ್ಥಿತಿಗೆ ಸೂಕ್ತವಾಗಿ ಹೊಂದಿಕೊಳ್ಳಲು ಮತ್ತು ಪ್ರತಿಕ್ರಿಯಿಸಲು ಮಾರ್ಗದರ್ಶಕರನ್ನು ಬೆಂಬಲಿಸಲು ಅನುವು ಮಾಡಿಕೊಡುತ್ತದೆ.

ಜೆ. **ಸೃಜನಶೀಲತೆ:** ಸೃಜನಶೀಲತೆಯು ಮಾರ್ಗದರ್ಶಕರನ್ನು ಹೊಸದಾಗಿ ಆಲೋಚಿಸಲು ಮತ್ತು ಕಲಿಕಾರ್ಥಿಗಳು ಸವಾಲುಗಳನ್ನು ಜಯಿಸುವಂತೆ ಸಕ್ರಿಯಗೊಳಿಸಲು ನವೀನ ಪರಿಹಾರಗಳನ್ನು ಸೃಷ್ಟಿಸಲು ಸಜ್ಜುಗೊಳಿಸುತ್ತದೆ. ಮಾರ್ಗದರ್ಶಕರು ವಿಭಿನ್ನ ದೃಷ್ಟಿಕೋನಗಳನ್ನು ಅನ್ವೇಷಿಸಲು ಮತ್ತು ನವೀನ ಪರಿಹಾರಗಳೊಂದಿಗೆ ಹೊರಬರಲು ಹೊಸ ಆಲೋಚನೆಗಳು, ಪರಿಕಲ್ಪನೆಗಳು ಮತ್ತು ದೃಷ್ಟಿಕೋನಗಳೊಂದಿಗೆ ಪ್ರಯೋಗಿಸಲು ಕಲಿಕಾರ್ಥಿಗಳನ್ನು ಪ್ರೋತ್ಸಾಹಿಸುವುದು ಸಹ ಮುಖ್ಯವಾಗಿದೆ.

ಕೆ. **ಪುನರಾಲೋಚನೆ:** ಪ್ರತಿಫಲಿತ ಕೌಶಲ್ಯಗಳು ಮಾರ್ಗದರ್ಶಕರಿಗೆ ತಮ್ಮ ಆಲೋಚನೆಗಳು ಮತ್ತು ಯೋಜನೆಗಳನ್ನು ಸ್ವಯಂ-ಪ್ರತಿಬಿಂಬಕ್ಕಾಗಿ ಪ್ರಕ್ರಿಯೆಗೊಳಿಸಲು, ಮಾರ್ಗದರ್ಶಿ ಅವಧಿ'ಗಳನ್ನು ಮೌಲ್ಯಮಾಪನ ಮಾಡಲು, ಕಲಿಕಾರ್ಥಿಗಳಿಂದ ಸಕ್ರಿಯವಾಗಿ ಪ್ರತಿಕ್ರಿಯೆಯನ್ನು ಪಡೆಯಲು ಮತ್ತು ಮಾರ್ಗದರ್ಶಕರಾಗಿ ನಿರಂತರವಾಗಿ ಬೆಳೆಯಲು ಅನುವು ಮಾಡಿಕೊಡುತ್ತವೆ. ಇದರಿಂದ ಮಾರ್ಗದರ್ಶಕರು ತಮ್ಮ ಕಾರ್ಯತಂತ್ರಗಳನ್ನು ಪರಿಷ್ಕರಿಸಲು ಸಹಾಯವಾಗುತ್ತದೆ, ಕಲಿಕಾರ್ಥಿಗಳ ಅಗತ್ಯತೆಗಳ ಬಗ್ಗೆ ಅವರ ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ಅರ್ಥಪೂರ್ಣ ಮಾರ್ಗದರ್ಶನ ಮತ್ತು ಬೆಂಬಲವನ್ನು ಒದಗಿಸುತ್ತದೆ. ಮಾರ್ಗದರ್ಶಕರು ಕಲಿಕಾರ್ಥಿಗಳು ಪುನರಾಲೋಚಿಸುವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ಅವುಗಳನ್ನು ಮೈಗೂಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಸಹ ಮುಖ್ಯವಾಗಿದೆ.

ಮೇಲೆ ತಿಳಿಸಲಾದ ಗುಣಲಕ್ಷಣಗಳ ಜೊತೆಗೆ, ಒಬ್ಬ ಮಾರ್ಗದರ್ಶಕನು ತನ್ನ ಕಲಿಕಾರ್ಥಿಗಳ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಸಮರ್ಪಕವಾಗಿ ಬೆಂಬಲಿಸಲು ಹೆಚ್ಚಿನ ಭಾವನಾತ್ಮಕ ಅಂಶವನ್ನು ಹೊಂದಿರಬೇಕು. ಮಾರ್ಗದರ್ಶಿ ವ್ಯಕ್ತಿತ್ವದ ಕೆಲವು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ:

**ಮಾರ್ಗದರ್ಶಿ ವ್ಯಕ್ತಿತ್ವ 1**

ಶ್ರೀಮತಿ ಅಸ್ಮಿತಾ ಪಂತ್ ಅವರು ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಾಂಶುಪಾಲರು. ಅವರು ಎರಡು ಶಾಲೆಗಳಲ್ಲಿ ಕಳೆದ 20 ವರ್ಷಗಳಿಂದ ಶಾಲಾ ನಾಯಕರಾಗಿದ್ದಾರೆ ಮತ್ತು 10 ವರ್ಷಗಳ ಹಿಂದೆ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇರಿದ್ದಾರೆ. ಶಿಕ್ಷಕಿಯಾಗಿ, ಅವರು ಕಾಲಾನಂತರದಲ್ಲಿ ಶಿಕ್ಷಣಶಾಸ್ತ್ರದಲ್ಲಿ ಪರಿಣತಿಯನ್ನು ಬೆಳೆಸಿಕೊಂಡರು ಮತ್ತು ಸಂಪೂರ್ಣ ಶಾಲಾ ಸುಧಾರಣೆಯನ್ನು ಅನ್ವೇಷಿಸಲು ತನ್ನ ಜ್ಞಾನ ಮತ್ತು ಅನುಭವವನ್ನು ಬಳಸಲು ಬಯಸಿದ್ದರು. ಅವರು ಕೆಲವು ನಾಯಕತ್ವದ ಘಟಕಗಳನ್ನು ಪೂರ್ಣಗೊಳಿಸುವ ಮೂಲಕ ಪ್ರಾರಂಭಿಸಿ, ನಂತರ ತಂಡಗಳು ಮತ್ತು ಸಂಸ್ಥೆಗಳನ್ನು ನಿರ್ವಹಿಸುವ ತನ್ನ ತಿಳುವಳಿಕೆಯನ್ನು ಸುಧಾರಿಸಿಕೊಂಡರು. ಅವರು ತನ್ನ ಶಾಲೆಯ ಶಿಕ್ಷಕರು ಮತ್ತು ಸಿಬ್ಬಂದಿಯ ಮಾತುಗಳನ್ನು ಕೇಳಿಸಿಕೊಂಡರು ಮತ್ತು ಸುಧಾರಣೆಯ ಅಗತ್ಯವಿರುವ ಕ್ಷೇತ್ರಗಳನ್ನು ಗುರುತಿಸಿದರು. ಸವಾಲಿನ ಕ್ಷೇತ್ರಗಳ ಕುರಿತು ಶಿಕ್ಷಕರು ಮತ್ತು ಸಿಬ್ಬಂದಿಗಳೊಂದಿಗೆ ಮಾತನಾಡುವಾಗ, ಅವರು ಮುಕ್ತ ಮನಸ್ಸಿನಿಂದ ಕೇಳಿಸಿಕೊಳ್ಳುತ್ತಾರೆ, ಪ್ರತಿಯೊಬ್ಬರಿಗೂ ವಿಭಿನ್ನ ಸಾಮರ್ಥ್ಯಗಳು ಮತ್ತು ಅಭಿವೃದ್ಧಿಯ ಕ್ಷೇತ್ರಗಳಿವೆ. ಪ್ರತಿಕ್ರಿಯೆಯನ್ನು ನೀಡುವಾಗ, ರಚನಾತ್ಮಕ ಟೀಕೆಗಳ ಮೇಲೆ ಕೇಂದ್ರೀಕರಿಸುವ ಸಾಮರ್ಥ್ಯಗಳು ಮತ್ತು ಅಭಿವೃದ್ಧಿಯ ಕ್ಷೇತ್ರಗಳೆರಡನ್ನೂ ಗುರುತಿಸಲು ಮತ್ತು ಪುರಾವೆಗಳನ್ನು ನೀಡುವುದನ್ನು ಅವರು ಖಚಿತಪಡಿಸಿಕೊಳ್ಳುತ್ತಾರೆ. ಅವರು ತನ್ನ ಕ್ರಿಯೆಗಳು ಮತ್ತು ಅವುಗಳ ಪರಿಣಾಮಗಳನ್ನು ಆಗಾಗ್ಗೆ ಪ್ರತಿಬಿಂಬಿಸುತ್ತಾರೆ ಮತ್ತು ತನ್ನ ಕಾರ್ಯಗಳನ್ನು ಬದಲಾಯಿಸಲು ಮತ್ತು ಅವಳ ಕೆಲಸದಲ್ಲಿ ಅಸಮರ್ಥತೆ ಮತ್ತು ನಕಾರಾತ್ಮಕ ಬೆಳವಣಿಗೆಗೆ ಕಾರಣವಾಗುವ ಮಾದರಿಗಳನ್ನು ಭೇದಿಸಲು ಆ ಪ್ರತಿಫಲನವನ್ನು ಬಳಸುತ್ತಾಳೆ. ಯಾವಾಗಲೂ ಹೆಚ್ಚಿನದನ್ನು ಕಲಿಯಲು ಸಿದ್ಧರಿರುವ ಅವರು ತಮ್ಮ ಶಾಲೆಯ ಸಿಬ್ಬಂದಿಗೆ

ಕೌಶಲ್ಯವನ್ನು ಹೆಚ್ಚಿಸಲು ಕಾರ್ಯಾಗಾರಗಳನ್ನು ನಡೆಸುವ ಮೂಲಕ ಕಲಿಕೆಯನ್ನು ಮುಂದುವರಿಸಲು ತನ್ನ ಶಾಲೆಯಲ್ಲಿ ಇತರರನ್ನು ಪ್ರೇರೇಪಿಸುತ್ತಾರೆ ಮತ್ತು ಕಲಿಕೆಯು ಮುಂದುವರಿದರೆ ಹೇಗೆ ಸುಧಾರಣೆ ಸಂಭವಿಸಬಹುದು ಎಂಬುದರ ಉದಾಹರಣೆಗಳನ್ನು ಪ್ರದರ್ಶಿಸುತ್ತಾರೆ. ಶಿಕ್ಷಕರು ಸುರಕ್ಷಿತ ಮತ್ತು ಆರಾಮದಾಯಕವಾಗಿದ್ದಾರೆ ಮತ್ತು ಅಗತ್ಯವಿದ್ದಾಗ ಯಾವಾಗಲೂ ಬೆಂಬಲಕ್ಕೆ ಪ್ರವೇಶವನ್ನು ಹೊಂದುತ್ತಾರೆ ಎಂದು ಖಚಿತಪಡಿಸಿಕೊಳ್ಳಲು ಅವರು ತಮ್ಮ ಮಾರ್ಗದಿಂದ ಹೊರಗುಳಿಯುತ್ತಾರೆ. ಆಕೆಯ ಸಾರ್ವಜನಿಕ ಮಾತನಾಡುವ ಕೌಶಲ್ಯದಿಂದಾಗಿ ಏನು ಹೇಳಬೇಕು ಎಂಬುದರ ಬಗ್ಗೆ ಎಲ್ಲರಿಗೂ ಆಸಕ್ತಿಯನ್ನುಂಟುಮಾಡುತ್ತದೆ ಮತ್ತು ಕ್ರಮ ತೆಗೆದುಕೊಳ್ಳಲು ಪ್ರೇರೇಪಿಸುತ್ತದೆ. ಪ್ರಮುಖ ಶಾಲಾ ಸುಧಾರಣಾ ಯೋಜನೆಗಳಲ್ಲಿ ವಿವಿಧ ವರ್ಷಗಳ ಅನುಭವವನ್ನು ಹೊಂದಿರುವ ಶಾಲಾ ನಾಯಕಿಯಾಗಿ, ಅವರು ದೇಶಾದ್ಯಂತ ಶಾಲಾ ನಾಯಕರಿಗೆ ಅವರ ವಿಭಿನ್ನ ಸನ್ನಿವೇಶಗಳಿಂದ ಇನ್ನಷ್ಟು ಕಲಿಯಲು ಮತ್ತು ಉತ್ತಮ ಶಾಲೆಗಳ ಕಡೆಗೆ ಶಾಲಾ ನಾಯಕರ ಪ್ರಯಾಣದಲ್ಲಿ ಪಾಲುದಾರರಾಗಲು ಮಾರ್ಗದರ್ಶನ ನೀಡಲು ಆಸಕ್ತಿ ಹೊಂದಿದ್ದಾರೆ.

**ಮಾರ್ಗದರ್ಶಿ ವ್ಯಕ್ತಿತ್ವ 2**

ಶ್ರೀ. ಅಮರ್ ಪಾಲ್ ಬಾಲೆಂಗ್ ಅವರು ಸಿ.ಬಿ.ಎಸ್.ಇ ಮಾನ್ಯತೆಯ ಶಾಲೆಯಲ್ಲಿ ಭೂಗೋಳಶಾಸ್ತ್ರದ ಶಿಕ್ಷಕರಾಗಿದ್ದಾರೆ. ಅವರು 20 ವರ್ಷಗಳಿಂದ ಕಲಿಸುತ್ತಿದ್ದಾರೆ ಮತ್ತು ಅವರ ಶಾಲೆಯ ಇತರ ಶಿಕ್ಷಕರಿಗೆ ನಿರಂತರ ಸ್ಫೂರ್ತಿಯ ಮೂಲವಾಗಿದ್ದಾರೆ. ಶಿಕ್ಷಕರಾಗಿ ಅವರ ಕೌಶಲ್ಯಗಳ ಜೊತೆಗೆ, ಅವರು ಇತರ ಶಿಕ್ಷಕರ ಮಾತನ್ನು ಕೇಳಿಸಿಕೊಳ್ಳುತ್ತಾರೆ ಮತ್ತು ಶಾಲೆಯ ಸಂಸ್ಕೃತಿಗೆ ಹೊಂದಿಕೊಳ್ಳುವಲ್ಲಿ ಹೊಸ ಶಿಕ್ಷಕರನ್ನು ಬೆಂಬಲಿಸುತ್ತಾರೆ. ಅವರು ತಮ್ಮ ಸಂಸ್ಥೆಯಲ್ಲಿ ಎಲ್ಲಾ ಸಿಬ್ಬಂದಿ ಸದಸ್ಯರಿಗೆ ಬೆಂಬಲ, ಸುರಕ್ಷಿತ ಸ್ಥಳವನ್ನು ನಿರ್ಮಿಸುವ ಮತ್ತು ನಿರ್ವಹಿಸುವ ಕೌಶಲ್ಯವನ್ನು ಹೊಂದಿದ್ದಾರೆ ಮತ್ತು ಎಲ್ಲೆಡೆ ಸ್ಫೂರ್ತಿದಾಯಕ ನಾಯಕ ಎಂದು ಪರಿಗಣನೆಗೆ ಒಳಪಟ್ಟಿದ್ದಾರೆ. ಕೆಲಸದ ಸ್ಥಳದಲ್ಲಿ ಕೆಲಸದ ನೀತಿಗಳಿಗೆ ಸುರಕ್ಷತೆ, ವೃತ್ತಿಪರತೆ ಮತ್ತು ಉನ್ನತ ಗುಣಮಟ್ಟಗಳ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಅವರು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅದನ್ನು ತನ್ನ ಕೆಲಸಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಈಗ ತಮ್ಮ ಪರಿಣತಿಯನ್ನು ಬಳಸಿ ಇತರ ಶಿಕ್ಷಕರಿಗೆ ಬೆಂಬಲ, ಮಾರ್ಗದರ್ಶನ ಮತ್ತು ಶಾಲೆಗಳಿಗೆ ಸುಲಭವಾಗುವಂತೆ ಮತ್ತು ವೃತ್ತಿಪರ ಜೀವನಕ್ಕೆ ಬೇಕಾದ ಅಗತ್ಯಗಳನ್ನು ಪೂರೈಸುವ ಅವರ ಪ್ರಯಾಣದಲ್ಲಿ ಪಾಲುದಾರರಾಗಲು ಸಹಾಯ ಮಾಡಲು ಅವರು ಬಯಸುತ್ತಾರೆ.

## 4.3 ಒಬ್ಬ ಕಲಿಕಾರ್ಥಿಯ ಗುಣಲಕ್ಷಣಗಳು

ಮಾರ್ಗದರ್ಶಕ ಸಂಬಂಧವು ಯಶಸ್ವಿಯಾಗಲು, ಕಲಿಕಾರ್ಥಿಯು ಗುರಿ-ಆಧಾರಿತವಾಗಿರಬೇಕು, ಮುನ್ನಡಿ ಇಡಬೇಕು, ಸವಾಲುಗಳನ್ನು ಬಯಸಬೇಕು, ಕಲಿಯು ಮತ್ತು ಜವಾಬ್ದಾರಿಗಳನ್ನು ಸ್ವೀಕರಿಸುವ ಉತ್ಸಾಹವನ್ನು ತೋರಿಸಬೇಕು. ಅವರು ಸಕ್ರಿಯವಾಗಿ ಭಾಗವಹಿಸಬೇಕು, ನಿರ್ಣಾಯಕ ಶಿಕ್ಷಕರನ್ನು ಉಳಿಸಿಕೊಳ್ಳಬೇಕು, ಜ್ಞಾನದ ಜೊತೆಗೆ ಹೊಸ ಸಾಮರ್ಥ್ಯಗಳನ್ನು ಹುಡುಕಬೇಕು, ಸ್ವಂತ ಜವಾಬ್ದಾರಿಗಳನ್ನು ಹೊಂದಿರಬೇಕು ಮತ್ತು ಯಶಸ್ಸಿಗಾಗಿ ಬಹು ಪ್ರಭಾವಗಳಿಗೆ ತೆರೆದುಕೊಳ್ಳಬೇಕು.[9] ಕಲಿಕಾರ್ಥಿಯ ವ್ಯಕ್ತಿತ್ವದ ಕೆಲವು ಉದಾಹರಣೆಗಳನ್ನು ಕೆಳಗೆ ನೀಡಲಾಗಿದೆ:

**ಕಲಿಕಾರ್ಥಿ ವ್ಯಕ್ತಿತ್ವ 1**

ಶ್ರೀ ಸೆಲ್ವ ಕುಮಾರ್ ಕೇಂದ್ರೀಯ ವಿದ್ಯಾಲಯದಲ್ಲಿ ಶಿಕ್ಷಕರಾಗಿದ್ದಾರೆ. 12 ವರ್ಷಗಳಿಂದ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಹೆಚ್ಚು ಕಲಿಯುವ ಮತ್ತು ಅವರ ವೃತ್ತಿಯಲ್ಲಿ ಬೆಳವಣಿಗೆ ಹೊಂದುವ ಅವರ ಒಲವು ಅವರನ್ನು ಶಾಲಾ ಶಿಕ್ಷಣದ ಕುರಿತು ಕೆಲವು ಕೋರ್ಸ್‌ಗಳಿಗೆ ಸೇರಿಕೊಳ್ಳಲು ಕಾರಣವಾಯಿತು. ಅವರು ಸಾಧಾರಣತೆಯಿಂದ ಉತ್ಕೃಷ್ಟತೆಯ ಕಡೆಗೆ ಏರಲು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಉತ್ತಮ ಅನುಭವವನ್ನು ಸೃಷ್ಟಿಸಲು ಶಾಲೆಯಲ್ಲಿ ಸಾಕಷ್ಟು ಸಾಮರ್ಥ್ಯವನ್ನು ಎದುರು ನೋಡುತ್ತಾನೆ. ಈಗ ಅವನು ತನ್ನ ಶಾಲೆಯ ಸುಧಾರಣೆಯ ಪ್ರಯಾಣದ ಕಡೆಗೆ ಮಾರ್ಗದರ್ಶಕರಿಂದ ಮಾರ್ಗದರ್ಶನವನ್ನು ಬಯಸುತ್ತಾನೆ ಮತ್ತು ಕಲಿಯುವ ನಿಟ್ಟಿನಲ್ಲಿ ಉತ್ಸುಕನಾಗಿದ್ದಾನೆ.

[9] National Institute of Technical Teachers Training and Research. (2020, September). Making Mentoring Relevant: NEP 2020 PERSPECTIVE.

**ಕಲಿಕಾರ್ಥಿ ವ್ಯಕ್ತಿತ್ವ 2**

ಶ್ರೀಮತಿ ಸಂಗೀತಾ ಪ್ರಧಾನ್ ಅವರು ಜವಾಹರ್ ನವೋದಯ ವಿದ್ಯಾಲಯದಲ್ಲಿ ಇಂಗ್ಲಿಷ್ ಶಿಕ್ಷಕಿಯಾಗಿದ್ದಾರೆ. ಬೋಧನೆಯಲ್ಲಿ ವೃತ್ತಿಪರ ತರಬೇತಿಯ ನಂತರ ಶಿಕ್ಷಕಿಯಾಗಿ ಇದು ಅವರ ಮೊದಲ ಪೂರ್ಣಾವಧಿಯ ಕೆಲಸವಾಗಿದೆ. ಅವರು ಶಾಲೆಯಲ್ಲಿ ವೃತ್ತಿ ಪ್ರಾರಂಭಿಸಿದಾಗ, ತರಗತಿಯಲ್ಲಿ ತನ್ನ ತರಬೇತಿಯಲ್ಲಿ ಕಲಿತಿದ್ದನ್ನು ಅನ್ವಯಿಸಲು ಸ್ವಲ್ಪ ಸಮಯ ತೆಗೆದುಕೊಂಡರು. ವಿವಿಧ ಬಗೆಯ ವಿದ್ಯಾರ್ಥಿಗಳನ್ನ ಒಳಗೊಂಡಂತೆ 7ನೇ ಮತ್ತು 8ನೇ ತರಗತಿಯ ವಿದ್ಯಾರ್ಥಿಗಳ ತರಗತಿಯಲ್ಲಿ ಕೆಲಸ ಮಾಡುವುದರಲ್ಲಿ ಅನೇಕ ಸವಾಲುಗಳು ಇದ್ದವು. ಶ್ರೀಮತಿ ಪ್ರಧಾನ್ ಅವರು ಹೊಂದಾಣಿಕೆ ಮಾಡಿಕೊಳ್ಳಲು ಮತ್ತು ಪ್ರಜ್ಞಾಪೂರ್ವಕವಾಗಿ ಶಾಲೆಯಲ್ಲಿ ಮತ್ತು ಅವರ ನೆಟ್‌ವರ್ಕ್‌ನಲ್ಲಿರುವ ಇತರ ಶಿಕ್ಷಕರನ್ನು ಬೆಂಬಲಿಸಲು ಸಮಯವನ್ನು ತೆಗೆದುಕೊಳ್ಳಲು ನಿರ್ಧರಿಸಿದರು. ಅವರು ಕಲಿಯಲು ಮತ್ತು ಮಾರ್ಗದರ್ಶನ ಪಡೆಯಲು ಉತ್ಸುಕರಾಗಿದ್ದರು ಮತ್ತು ತನ್ನ ಗೆಳೆಯರೊಂದಿಗೆ ತನ್ನ ಸಂಭಾಷಣೆಗಳು, ಅವರು ಭಾಗವಹಿಸಿದ ಕಾರ್ಯಾಗಾರಗಳು ಮತ್ತು ಪ್ರತಿಫಲನವನ್ನು ಮುಂದುವರೆಸುವ ಮೂಲಕ ತರಗತಿಯಲ್ಲಿನ ತೊಂದರೆಗಳನ್ನು ಸರಿದೂಗಿಸಿಕೊಂಡು ಹೋಗಲು ಸಾಧ್ಯವಾಯಿತು.

## 4.4 ಮಾರ್ಗದರ್ಶಕರ ಅಭಿವೃದ್ಧಿ

ಯಶಸ್ವಿ ಮಾರ್ಗದರ್ಶನ ಸಂಬಂಧಗಳನ್ನು ಗರಿಷ್ಠಗೊಳಿಸಲು ಮತ್ತು ಸಕ್ರಿಯಗೊಳಿಸಲು ಮಾರ್ಗದರ್ಶಕರಿಗೆ ಉಪಕರಣಗಳು ಮತ್ತು ಅವಕಾಶಗಳನ್ನು ಒದಗಿಸಬೇಕು. ಮಾರ್ಗದರ್ಶಿ ಅಭಿವೃದ್ಧಿಯು ಎರಡು ಹಂತಗಳಲ್ಲಿ ಯಾವುದೇ ಮಾರ್ಗದರ್ಶನ ಕಾರ್ಯಕ್ರಮದ ಭಾಗವಾಗಿರಬೇಕು:

ಎ. ಒಮ್ಮೆ ಮಾರ್ಗದರ್ಶಕರನ್ನು ಆಯ್ಕೆ ಮಾಡಿದ ನಂತರ, ಮಾರ್ಗದರ್ಶಕ ತರಬೇತಿ ಕಾರ್ಯಕ್ರಮವು ಮಾರ್ಗದರ್ಶಿ ಸಂವಾದಗಳನ್ನು ಸುಲಭಗೊಳಿಸಲು ಮಾರ್ಗದರ್ಶಕರು ಉತ್ತಮವಾಗಿ ಸಜ್ಜುಗೊಳ್ಳಲು ಸಹಾಯ ಮಾಡುತ್ತದೆ.

ಬಿ. ಮಾರ್ಗದರ್ಶನ ಕಾರ್ಯಕ್ರಮವು ಮುಂದುವರೆದಂತೆ, ನಿರಂತರ ವೃತ್ತಿಪರ ಅಭಿವೃದ್ಧಿ (ಸಿ.ಡಿ.ಪಿ) ಅವಕಾಶಗಳ ಒಂದು ಜೊತೆ ಮಾರ್ಗದರ್ಶಕರಿಗೆ ಬೆಂಬಲ ಸಿಗುತ್ತಿರುವ ಅನುಭವವಾಗಲು ಪ್ರಾರಂಭವಾಗುತ್ತದೆ ಮತ್ತು ಅವರು ಮಾರ್ಗದರ್ಶಕರಾಗಿ ಬೆಳೆಯಲು ಸಹಾಯ ಮಾಡುತ್ತದೆ.

### 4.4.1 ಮಾರ್ಗದರ್ಶಕರ ತರಬೇತಿ ಕಾರ್ಯಕ್ರಮ

ಮಾರ್ಗದರ್ಶಕರು ಶಿಸ್ತು, ಸಂವಾದ, ಪರಾನುಭೂತಿ ಮತ್ತು ಭಾವನಾತ್ಮಕ ಬುದ್ಧಿವಂತಿಕೆ, ಸಮಸ್ಯೆ-ಪರಿಹರಿಸುವ ಕೌಶಲ್ಯ, ಸಮಯ ನಿರ್ವಹಣೆ ಮತ್ತು ನಾಯಕತ್ವ ಕೌಶಲ್ಯಗಳಂತಹ ವೃತ್ತಿಪರ ಕೌಶಲ್ಯಗಳ ಶ್ರೇಣಿಯನ್ನು ಹೊಂದಿದ್ದಾರೆ. ಈ ವೃತ್ತಿಪರ ಕೌಶಲ್ಯಗಳು ಮಾರ್ಗದರ್ಶನ ಕಾರ್ಯಕ್ರಮದ ಸಮಯದಲ್ಲಿ ಅವರ ಕಲಿಕಾರ್ಥಿಗಳಿಗೆ ಬೆಂಬಲ ಅಥವಾ ಮಾರ್ಗದರ್ಶನವನ್ನು ನೀಡಲು ಅನುವು ಮಾಡಿಕೊಡುತ್ತವೆ. ಮಾರ್ಗದರ್ಶಿ ತರಬೇತಿ ಕಾರ್ಯಕ್ರಮವು ಮಾರ್ಗದರ್ಶಕರಿಗೆ ಎರಡು ಕ್ಷೇತ್ರಗಳಲ್ಲಿ ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ: ಮೂಲಭೂತ ಮಾರ್ಗದರ್ಶನ ಕೌಶಲ್ಯಗಳ ಅಭಿವೃದ್ಧಿ ಮತ್ತು ಮಾರ್ಗದರ್ಶನದ ಪ್ರಕಾರಗಳತ್ತ ದೃಷ್ಟಿಕೋನ.

#### 4.4.1.1 ಮಾರ್ಗದರ್ಶನದ ಅಡಿಪಾಯಗಳು (ಮೂಲ ಕೌಶಲ್ಯಗಳು)

ಈ ತರಬೇತಿಯು ಒಳಗೊಳ್ಳಬಹುದಾದ ಕೆಲವು ಕೌಶಲ್ಯಗಳಿವೆ:

**ಕೋಷ್ಟಕ 4.1: ಕೌಶಲ್ಯಗಳು, ಘಟಕಗಳು ಮತ್ತು ವಿವರಣೆ**

| ಕೌಶಲ್ಯಗಳು | ಘಟಕಗಳು | ವಿವರಣೆ |
|---|---|---|
| **ಸಂವಹನ** | ಸಕ್ರಿಯವಾಗಿ ಆಲಿಸುವುದು | ಮಾರ್ಗದರ್ಶನ, ಸವಾಲಿನ ಸಂಭಾಷಣೆಗಳು ಇತ್ಯಾದಿಗಳಲ್ಲಿ ಸಕ್ರಿಯ ಆಲಿಸುವಿಕೆಯ ಮಹತ್ವ ಮತ್ತು ಪ್ರಮುಖ ಅಂಶಗಳು. |

| | | |
|---|---|---|
| | ಚಿಂತನಾತ್ಮಕ ಮತ್ತು ಆಳವಾದ ಪ್ರಶ್ನೆಗಳನ್ನು ಕೇಳುವುದು | ವಿಭಿನ್ನ ಸನ್ನಿವೇಶಗಳಿಗೆ ವಿವಿಧ ರೀತಿಯ ಪ್ರಶ್ನೆಗಳನ್ನು ಕೇಳುವ ಮೂಲಕ ಅರ್ಥಪೂರ್ಣ ಸಂಭಾಷಣೆಗಳನ್ನು ನಡೆಸುವುದು |
| | ಪ್ರತಿಕ್ರಿಯೆ ನೀಡುವುದು ಮತ್ತು ತೆಗೆದುಕೊಳ್ಳುವುದು | ರಚನಾತ್ಮಕ ಪ್ರತಿಕ್ರಿಯೆಯನ್ನು ಪರಿಣಾಮಕಾರಿಯಾಗಿ ತೆಗೆದುಕೊಳ್ಳುವ ಮತ್ತು ನೀಡುವ ಸಲಹೆಗಳು |
| **ನಾಯಕತ್ವ** | ಪರಿವರ್ತನೆ ನಿರ್ವಹಣೆ | ಸಾಂಸ್ಥಿಕ ಬದಲಾವಣೆ ಮತ್ತು ಅದರ ಬಗ್ಗೆ ಸಂವಾದ ಮಾಡುವ ಮೂಲಕ ಜನರನ್ನು ಧನಾತ್ಮಕವಾಗಿ ಮುನ್ನಡೆಸಲು ಮತ್ತು ಪ್ರೇರೇಪಿಸುವ ಮಾರ್ಗಗಳು |
| | ದೂರದೃಷ್ಟಿ ಮತ್ತು ಗುರಿಗಳನ್ನು ನಿಗದಿಪಡಿಸುವುದು | ಮಾರ್ಗದರ್ಶನ ಸಂಬಂಧಕ್ಕಾಗಿ ಅರ್ಥಪೂರ್ಣ ದೂರದೃಷ್ಟಿ ಮತ್ತು ಎಸ್.ಎಮ್.ಎ.ಆರ್.ಟಿ (ಸ್ಮಾರ್ಟ್) ಗುರಿಗಳನ್ನು ನಿಗದಿ ಮಾಡಿಕೊಳ್ಳುವುದು. |
| | ಹೊಣೆಗಾರಿಕೆಯನ್ನು ನಿರ್ಮಿಸುವುದು | ತಂಡಗಳಲ್ಲಿ ಯಶಸ್ವಿಯಾಗಿ ಹೊಣೆಗಾರಿಕೆಯನ್ನು ನಿರ್ಮಿಸುವುದು ಮತ್ತು ನಿಯೋಗ, ಮೇಲ್ವಿಚಾರಣೆ ಮತ್ತು ಪ್ರತಿಕ್ರಿಯೆಯಲ್ಲಿ ಕೌಶಲ್ಯಗಳನ್ನು ಪ್ರದರ್ಶಿಸುವುದು |
| | ಬೆಳವಣಿಗೆಯ ಮನಸ್ಥಿತಿಯನ್ನು ಅಭಿವೃದ್ಧಿಪಡಿಸುವುದು | ಬೆಳವಣಿಗೆಯ ಮನಸ್ಥಿತಿಯ ಅಗತ್ಯವನ್ನು ಸ್ಪಷ್ಟಪಡಿಸುವುದು ಮತ್ತು ಅವರ ಕಲಿಕಾರ್ಥಿಗಳ ಬೆಳವಣಿಗೆಯ ಮನಸ್ಥಿತಿಯನ್ನು ಹೆಚ್ಚಿಸಲು ಸಹಕಾರಿ ಕಾರ್ಯತಂತ್ರಗಳನ್ನು ನಿರ್ಮಿಸುವುದು. |
| | ಸಮಯ ನಿರ್ವಹಣೆ | ಸಮಯ ಮತ್ತು ಕಾರ್ಯಗಳನ್ನು ನಿರ್ವಹಿಸಲು ಮತ್ತು ಆದ್ಯತೆ ನೀಡಲು ಸಲಹೆಗಳು |
| | ಸಂಸ್ಕೃತಿ ನಿರ್ಮಾಣ | ಉತ್ತಮ ತಂಡ/ಕಲಿಕಾರ್ಥಿ ಗುಂಪು ಸಂಸ್ಕೃತಿಯನ್ನು ನಿರ್ಮಿಸಲು ಮಾರ್ಗಗಳನ್ನು ಗುರುತಿಸುವುದು ಮತ್ತು ಕಾರ್ಯಗತಗೊಳಿಸುವುದು |
| **ಇತರ ಹೊರಹೊಮ್ಮುವ ಕೌಶಲ್ಯಗಳು ಸಂವಹನ** | ನೆಟ್ವರ್ಕಿಂಗ್ | ಉದ್ದೇಶಪೂರ್ವಕ ಸಮಸ್ಯೆ ಪರಿಹಾರಕ್ಕಾಗಿ ನೆಟ್‌ವರ್ಕಿಂಗ್‌ನ ಪ್ರಾಮುಖ್ಯತೆಯನ್ನು ಪ್ರಮುಖ ಸಕ್ರಿಯಗೊಳಿಸುವಿಕೆಯಾಗಿ ಅರಿತುಕೊಳ್ಳುವುದು |
| | ಸಕ್ರಿಯವಾಗಿ ಆಲಿಸುವುದು | ಮಾರ್ಗದರ್ಶನ, ಸವಾಲಿನ ಸಂಭಾಷಣೆಗಳು ಇತ್ಯಾದಿಗಳಲ್ಲಿ ಸಕ್ರಿಯ ಆಲಿಸುವಿಕೆಯ ಮಹತ್ವ ಮತ್ತು ಪ್ರಮುಖ ಅಂಶಗಳು. |

### 4.4.1.2 ಮಾರ್ಗದರ್ಶನದ ವಿಧಗಳು

ಮಾರ್ಗದರ್ಶನ ಸಂವಾದವನ್ನು ವರ್ಚುವಲ್ ಮತ್ತು ನೇರ ವಿಧಾನಗಳ ಸಮಕಾಲಿಕ ಅಥವಾ ಅಸಮಕಾಲಿಕ ವಿಧಾನಗಳ ಮೂಲಕ ನಡೆಸಬಹುದು. ಮಾರ್ಗದರ್ಶನವನ್ನು ಈ ಕೆಳಗಿನ ಪ್ರಕಾರಗಳಾಗಿ ವಿಂಗಡಿಸಬಹುದು:

ಸಂವಾದಗಳು ನಾಲ್ಕು ಪ್ರಮುಖ ಕ್ರಿಯೆಗಳನ್ನು ವೇಗವರ್ಧಿಸಿದಾಗ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳಿಗೆ ಮಾರ್ಗದರ್ಶನದ ಅನುಭವವು ರಚನಾತ್ಮಕವಾಗುತ್ತದೆ; ಆಯಾ ಸಂದರ್ಭಗಳಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಕಲಿಕಾರ್ಥಿಗಳ ಏಜೆನ್ಸಿಯನ್ನು ಮರುಸ್ಥಾಪಿಸಲು *ಕಲಿಯಿರಿ, ಹಂಚಿಕೊಳ್ಳಿ, ಪರಿಹರಿಸಿ ಮತ್ತು ಸಂಪರ್ಕಿಸಿ* ಎಂಬುದನ್ನು ರೂಢಿಸಿಕೊಳ್ಳಬೇಕು. ಕೆಳಗೆ ವಿವರಿಸಿದಂತೆ ವಿವಿಧ

ರೀತಿಯ ಮಾರ್ಗದರ್ಶನದ ಮೂಲಕ ಇದನ್ನು ಸಕ್ರಿಯಗೊಳಿಸಬಹುದು:

**ಎ. ವೈಯಕ್ತಿಕ ಮಾರ್ಗದರ್ಶನ**

ವೈಯಕ್ತಿಕ ಮಾರ್ಗದರ್ಶನವು ವ್ಯಕ್ತಿಗತಗೊಳಿಸಿದ, ಜ್ಞಾನ-ಹಂಚಿಕೆಯ ಸಂಭಾಷಣೆಯಾಗಿದ್ದು, ಭಾಗವಹಿಸುವವರು ತಮ್ಮ ಆಯ್ಕೆಯ ವಿಷಯವನ್ನ ಆರಿಸಿಕೊಳ್ಳಬಹುದು. ಇದು ಮಾರ್ಗದರ್ಶಕ ಮತ್ತು ಕಲಿಕಾರ್ಥಿ ನಡುವಿನ ಕೇಂದ್ರೀಕೃತ ಚರ್ಚೆಯಾಗಿದೆ. ಹಂಚಿಕೊಳ್ಳಲು, ಕಲಿಯಲು ಮತ್ತು ಚರ್ಚಿಸಲು ವಿಶ್ವಾಸಾರ್ಹ ವ್ಯಕ್ತಿಯೊಂದಿಗೆ (ಮಾರ್ಗದರ್ಶಿ ಅಥವಾ ಸಹಪಾಠಿ) ಸಂಪರ್ಕಿಸಲು ಆಯ್ಕೆ ಮಾಡುವ ಅವಕಾಶವನ್ನು ಕಲಿಕಾರ್ಥಿಗಳು ಪಡೆಯುತ್ತಾರೆ. ಕಲಿಕಾರ್ಥಿಗಳು ಗಳಿಸಿರುವ ಕೌಶಲ್ಯಗಳು ಮತ್ತು ಜ್ಞಾನವನ್ನು ಅವರು ಎದುರಿಸುವ ಸವಾಲುಗಳಿಗೆ ಹೇಗೆ ಅನ್ವಯಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಮಾರ್ಗದರ್ಶಕರು ಸಹಾಯ ಮಾಡುತ್ತಾರೆ. ಒಬ್ಬರಿಗೊಬ್ಬರು ಮಾರ್ಗದರ್ಶನ ನೀಡುವ ವಿಧಾನದ ಮೂಲಕ ತೊಡಗಿಸಿಕೊಳ್ಳುವುದು ಕಲಿಕಾರ್ಥಿಗಳಿಗೆ ಒಳನೋಟವುಳ್ಳ ಪ್ರಯಾಣವಾಗುತ್ತದೆ ಏಕೆಂದರೆ ಇದು ಅವರ ಸಾಮರ್ಥ್ಯಗಳಲ್ಲಿ ಬಲವಾದ ನಂಬಿಕೆಯನ್ನು ನಿರ್ಮಿಸುವಾಗ ವೈಯಕ್ತಿಕವಾಗಿ ಮತ್ತು ವೃತ್ತಿಪರವಾಗಿ ಬೆಳೆಯಲು ಅವರನ್ನು ಬೆಂಬಲಿಸುತ್ತದೆ. ಇದು ಕಲಿಕಾರ್ಥಿಗಳ ಬೆಳವಣಿಗೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಮಾರ್ಗದರ್ಶಕರಿಗೆ, ಅವರು ಸೇರಿರುವ ಸಮುದಾಯಕ್ಕೆ ಕೊಡುಗೆ ನೀಡಲು ಇದು ಒಂದು ಅವಕಾಶವಾಗಿ ಕಾರ್ಯನಿರ್ವಹಿಸುತ್ತದೆ.

**ಬಿ. ಗುಂಪು ಮಾರ್ಗದರ್ಶನ**

ಗುಂಪು ಮಾರ್ಗದರ್ಶನದಲ್ಲಿ, ಒಂದೇ ರೀತಿಯ ಸವಾಲುಗಳನ್ನು ಎದುರಿಸುತ್ತಿರುವ ಕಲಿಕಾರ್ಥಿಗಳ ಗುಂಪು ತೊಡಗಿಸಿಕೊಂಡಿರುತ್ತಾರೆ. ಗೆಳೆಯರಿಂದ ಕಲಿಯಲು ಮತ್ತು ನೆಟ್‌ವರ್ಕ್ ನಿರ್ಮಿಸಲು ಬಯಸುವ ಕಲಿಕಾರ್ಥಿಗಳಿಗೆ ಇದು ಸಹಾಯಕವಾಗಿದೆ.

**i. ಚರ್ಚಾ ವಲಯಗಳು (ಜ್ಞಾನ ವರ್ಗಾವಣೆ ಮಾರ್ಗದರ್ಶನ)**

ಚರ್ಚಾ ವಲಯಗಳ ಮೂಲಕ (ಮಾರ್ಗದರ್ಶನ ವಲಯಗಳು), ಪರಿಕಲ್ಪನೆಗಳು (ನೀತಿಗಳು, ಯೋಜನೆಗಳು ಇತ್ಯಾದಿ) ಮತ್ತು ಸಮುದಾಯದ ಅಗತ್ಯಗಳಿಗೆ ಸಂಬಂಧಿಸಿದ ಉತ್ತಮ ಅಭ್ಯಾಸಗಳನ್ನು ಸುಗಮಗೊಳಿಸಬಹುದು. ತಮ್ಮ ಜ್ಞಾನ, ಅನುಭವ ಮತ್ತು ಕಲಿಕೆಗಳನ್ನು ಸುಲಭಗೊಳಿಸಲು ಮತ್ತು ಹಂಚಿಕೊಳ್ಳಲು ಮಾರ್ಗದರ್ಶಕರ ಪಾತ್ರವನ್ನು ತೆಗೆದುಕೊಳ್ಳುವ ಪರಿಣಿತರಿಗೆ ಈ ಸ್ಥಳಗಳು ತೆರೆದಿರುತ್ತವೆ. ಮಾರ್ಗದರ್ಶಕ ವಲಯಗಳು ಕಾರ್ಯಗತ ಕಲಿಕೆಯ ಅಂಶಗಳೊಂದಿಗೆ ಮಾರ್ಗದರ್ಶನದ ಆಕರ್ಷಣೀಯವಾಗಿ ಸಂಯೋಜಿಸುತ್ತವೆ. ಕಲಿಕಾರ್ಥಿಗಳು ಕಲಿಯುವಂತೆ ಮತ್ತು ಸಾಮೂಹಿಕವಾಗಿ ಪ್ರಗತಿ ಸಾಧಿಸುವಂತೆ ಪ್ರೇರೇಪಿಸಲು ಈ ವಲಯಗಳನ್ನು ಬಳಸಿಕೊಳ್ಳಬಹುದು. ಇದೇ ರೀತಿಯ ಸವಾಲುಗಳನ್ನು ಎದುರಿಸುತ್ತಿರುವ ಜನರು ಅಥವಾ ಸಾಮೂಹಿಕ ಜ್ಞಾನವನ್ನು ನಿರ್ಮಿಸಲು ಬಯಸುವವರು ಆ ನಿರ್ದಿಷ್ಟ ಪರಿಕಲ್ಪನೆಯಲ್ಲಿ ಜ್ಞಾನ, ಅನುಭವ ಮತ್ತು ಪರಿಣತಿಯನ್ನು ಹೊಂದಿರುವ ಯಾರಾದರೂ ಮಾರ್ಗದರ್ಶನ ಮಾಡುವವರು ಅನ್ವೇಷಿಸಲು ಮತ್ತು ಚರ್ಚಿಸಲು ಒಟ್ಟಾಗಿ ಸೇರಲು ಇದು ಸುಲಭಗೊಳಿಸುತ್ತದೆ: ಮಾರ್ಗದರ್ಶಕ ವಲಯಗಳನ್ನು ಆಯ್ಕೆ ಮಾಡುವ ಅವಕಾಶ ಅವರು ಏನನ್ನು ಮತ್ತು ಯಾರಿಂದ ಕಲಿಯಲು ಬಯಸುತ್ತಾರೆ ಎಂಬುದನ್ನು ಆಯ್ಕೆ ಮಾಡಲು ಕಲಿಕಾರ್ಥಿಗಳ ಏಜೆನ್ಸಿಗೆ ಸೇರಿಸುವ ಭಾಗವಾಗಲು ಅವರು ಬಯಸುತ್ತಾರೆ.

**ii. ಸಹಪಾಠಿ ಮಾರ್ಗದರ್ಶನ**

ಈ ಪ್ರಕಾರದಲ್ಲಿ, ನಿರ್ದಿಷ್ಟ ಸವಾಲುಗಳ ಮೂಲಕ ಯಶಸ್ವಿಯಾಗಿ ಸಾಗಿದ ಅಥವಾ ಕೆಲವು ವಲಯಗಳಲ್ಲಿ ಪರಿಣತಿಯನ್ನು ಅಭಿವೃದ್ಧಿಪಡಿಸಿದ ವೃತ್ತಿಪರರ ಗುಂಪು ತಮ್ಮ ಗೆಳೆಯರಿಗೆ ಚರ್ಚೆಗಳು ಮತ್ತು ಮಾರ್ಗದರ್ಶನದ ವಲಯಗಳನ್ನು ಮುನ್ನಡೆಸುತ್ತದೆ. ವಿವಿಧ ದೃಷ್ಟಿಕೋನಗಳಿಂದ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳುವ ಮೂಲಕ ಗೆಳೆಯರ ನಡುವೆ ಬೆಂಬಲ ಸಂಬಂಧಗಳನ್ನು ಹೆಚ್ಚಿಸುವ ವ್ಯಾಪ್ತಿಯನ್ನು ಸಹಪಾಠಿ ಮಾರ್ಗದರ್ಶನದ ಅವಧಿಗಳು ಹೊಂದಿವೆ. ಇದೇ ಸಮಯದಲ್ಲಿ ಅವರ ಜ್ಞಾನವನ್ನು ಸೇರಿಸುವ ಜೊತೆಗೆ ಅವರ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಇದೇ ಸಂದರ್ಭಗಳನ್ನು ಹೊಂದಿರುವ ಜನರ ವಿಶ್ವಾಸಾರ್ಹ ಜಾಲಗಳನ್ನು ಕಲಿಕಾರ್ಥಿಗಳಿಗೆ ನೀಡುತ್ತದೆ. ಸಹಪಾಠಿ ಮಾರ್ಗದರ್ಶನವು ಎರಡು ರೀತಿಯಲ್ಲಿ, ಪರಸ್ಪರ ಪ್ರಯೋಜನಕಾರಿ ಕಲಿಕೆಯ ಪ್ರಕ್ರಿಯೆಯನ್ನು ಸೂಚಿಸುತ್ತದೆ. ಮಾರ್ಗದರ್ಶಕ ಮತ್ತು ಕಲಿಕಾರ್ಥಿ ಇಬ್ಬರೂ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳುತ್ತಾರೆ ಎಂಬ ಅಂಶದಿಂದಾಗಿ, ಇದು ಎರಡೂ ಪಕ್ಷದವರಿಗೆ ಪ್ರಯೋಜನಕಾರಿಯಾಗಿದೆ. ಸಹಪಾಠಿ ಮಾರ್ಗದರ್ಶಕಗಳು ಕಲಿಕಾರ್ಥಿಗೆ ಮಾರ್ಗದರ್ಶನ ಮತ್ತು ಬೆಂಬಲ ನೀಡುವಂತೆ, ಕಲಿಕಾರ್ಥಿಗಳು

ಕಲಿಯಲು ಸಹಾಯ ಮಾಡುವ ವಿವಿಧ ರೀತಿಯಲ್ಲಿ ಜ್ಞಾನವನ್ನು ಅರ್ಥಮಾಡಿಕೊಳ್ಳಲು ಮತ್ತು ಅನ್ವಯಿಸಲು ಪ್ರಯತ್ನಿಸುತ್ತಿದ್ದಾರೆ. ಇದು 'ಅತ್ಯುತ್ತಮ ಅಭ್ಯಾಸ ಹಂಚಿಕೆ'ಗೆ ವೇದಿಕೆಯಾಗಿಯೂ ಕಾರ್ಯನಿರ್ವಹಿಸುತ್ತದೆ.

**iii. ಪ್ರಕರಣ-ಆಧಾರಿತ ಚರ್ಚೆಗಳು (ಸಾಂದರ್ಭಿಕ ಮಾರ್ಗದರ್ಶನ)**

ಈ ಪ್ರಕಾರದಲ್ಲಿ, ಮಾರ್ಗದರ್ಶಕರು ಅವರು ಎದುರಿಸುತ್ತಿರುವ ನಿರ್ದಿಷ್ಟ ಸಾಮಾನ್ಯ ಹೋರಾಟಗಳಿಗೆ ಪರಿಹಾರಗಳನ್ನು ಹುಡುಕುವ ನಿರೀಕ್ಷೆಯಲ್ಲಿ ಜಾಲ/ಮಾರ್ಗದರ್ಶಕರ ಬಳಿಗೆ ಹೋಗುತ್ತಾರೆ. ಸಾಮೂಹಿಕ ಸಮಸ್ಯೆ ಪರಿಹಾರಕ್ಕೆ ಈ ಪ್ರಕಾರವು ಉತ್ತಮ ಅವಕಾಶವಾಗಿದೆ.

**iv. ತ್ವರಿತ ಮಾರ್ಗದರ್ಶನ**

ತ್ವರಿತ ಮಾರ್ಗದರ್ಶನವು ಅಲ್ಪಾವಧಿಯ ಮಾರ್ಗದರ್ಶನವಾಗಿದ್ದು ಇದು ಸಂಕ್ಷಿಪ್ತ ಮತ್ತು ಕೇಂದ್ರೀಕೃತ ಅವಧಿಯಲ್ಲಿ ಸಂಭವಿಸುತ್ತದೆ. ನಿರ್ದಿಷ್ಟ ಸಮಸ್ಯೆ ಅಥವಾ ವಿಷಯದ ಕುರಿತು ವ್ಯಕ್ತಿಗಳಿಗೆ ತ್ವರಿತ ಮಾರ್ಗದರ್ಶನ ಮತ್ತು ಬೆಂಬಲ ಅಗತ್ಯವಿರುವ ಸಂದರ್ಭಗಳಲ್ಲಿ ಇದನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಕಡಿಮೆ ಅವಧಿಯಲ್ಲಿ ಮೌಲ್ಯಯುತ ಒಳನೋಟಗಳು ಮತ್ತು ಬೆಂಬಲವನ್ನು ಪಡೆಯಲು ಇದು ಹೊಂದಿಕೊಳ್ಳುವ ಮತ್ತು ಪರಿಣಾಮಕಾರಿ ಮಾರ್ಗವಾಗಿದೆ.

ಮೇಲೆ ಗುರುತಿಸಲಾದ ವಿಧಗಳು ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವಿನ ಸಂವಾದವನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದ್ದರೂ, ಮಾರ್ಗದರ್ಶಿ ಸಂವಾದವನ್ನು ಕಾರ್ಯಗತಗೊಳಿಸಲು ಹೆಚ್ಚುವರಿ ಮಾರ್ಗಗಳು ಸಾಧ್ಯತೆಗಳು ಇವೆ. ಇದು ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಸಮಕಾಲಿಕ ಅಥವಾ ಅಸಮಕಾಲಿಕ ವಿಧಾನಗಳನ್ನು ಬಳಸಿಕೊಂಡು ಆನ್‌ಲೈನ್ ಮತ್ತು ಆಫ್‌ಲೈನ್ ಮಾಧ್ಯಮಗಳ ಸಂಯೋಜನೆಯ ಮೂಲಕ ನಡೆಸಬಹುದಾಗಿದೆ:

**ಕೋಷ್ಟಕ 4.2: ಮಾರ್ಗದರ್ಶನದ ವಿಧಾನಗಳು**

| ವಿಧಾನಗಳು → <br> ಮಾಧ್ಯಮ ↓ | ಸಮಕಾಲಿಕ | ಅಸಮಕಾಲಿಕ |
|---|---|---|
| **ಆನ್‌ಲೈನ್** | ಆನ್‌ಲೈನ್ ಕಾನ್ಫರೆನ್ಸಿಂಗ್ ಪರಿಕರಗಳನ್ನು ಬಳಸಿಕೊಂಡು ಮೇಲೆ ವಿವರಿಸಿದ ಎಲ್ಲಾ ವಿಧಾನಗಳು<br>*ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳು ಭೌತಿಕವಾಗಿ ವಿವಿಧ ಸ್ಥಳಗಳಲ್ಲಿರುವುದರಿಂದ ವೈಯಕ್ತಿಕ ಅವಧಿಗಳು ಕಾರ್ಯಸಾಧ್ಯವಾಗದಿರುವಲ್ಲಿ ಇದು ಅತ್ಯಂತ ಉಪಯುಕ್ತವಾದ ಸಂಯೋಜನೆಯಾಗಿದೆ.* | ಪ್ರತಿಫಲಿತ ಕಾರ್ಯಯೋಜನೆಗಳು, ಸಂಯೋಜಿತ ಪ್ರಶ್ನೆಗಳೊಂದಿಗೆ ಪ್ರಕರಣ ಅಧ್ಯಯನCಗಳಂತಹ ಕೆಲಸವನ್ನು ನಿಯೋಜಿಸಲು ಮತ್ತು ಪ್ರತಿಕ್ರಿಯೆಯನ್ನು ವಿನಿಮಯ ಮಾಡಿಕೊಳ್ಳಲು ಆನ್‌ಲೈನ್ ಪರಿಕರಗಳು.<br>*ಸ್ವಯಂ ಪ್ರತಿಬಿಂಬ ಮತ್ತು ಸ್ವಯಂ ಕಲಿಕೆಯ ಸಮಯವನ್ನು ಪ್ರೋತ್ಸಾಹಿಸಲು ಆನ್‌ಲೈನ್-ಸಮಕಾಲಿಕ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ಇದನ್ನು ಬಳಸಬಹುದು.* |

| | | |
|---|---|---|
| **ಆಫ್‌ಲೈನ್** | ವೈಯಕ್ತಿಕ ಸೆಟ್ಟಿಂಗ್‌ನಲ್ಲಿ ಮೇಲೆ ವಿವರಿಸಿದಂತೆ ಎಲ್ಲಾ ವಿಧಾನಗಳು<br><br>ಈ ಸಂಯೋಜನೆಯು ಸಣ್ಣ-ಪ್ರಮಾಣದ ಕಾರ್ಯಕ್ರಮಗಳಿಗೆ ಹೆಚ್ಚು ಉಪಯುಕ್ತವಾಗಬಹುದು ಮತ್ತು ಆನ್‌ಲೈನ್ ಮಾದರಿಗಳಿಗೆ ಮಾತ್ರ ಸಂವಾದವನ್ನು ಅನುಕರಿಸದೆ ಇರುವ ಮೂಲಕ ಮಾರ್ಗದರ್ಶನವನ್ನು ಹೆಚ್ಚಿಸುತ್ತದೆ. | ಪುಸ್ತಕಗಳು, ಚಟುವಟಿಕೆ ಕಿಟ್‌ಗಳು, ಪ್ರಯೋಗಾತ್ಮಕ ಕಾರ್ಯಕ್ರಮಗಳು ಇತ್ಯಾದಿಗಳಂತಹ ಪರಿಕರಗಳನ್ನು ನಿಯೋಜಿಸಬಹುದು.<br><br>ಸ್ವಯಂ-ಕಲಿಕೆಯನ್ನು ಪ್ರೋತ್ಸಾಹಿಸಲು ಹೆಚ್ಚು ಕಸ್ಟಮೈಸ್ ಮಾಡಿದ ಆನ್‌ಲೈನ್/ಆಫ್ಲೈನ್ - ಸಮಕಾಲಿಕ ಮಾರ್ಗದರ್ಶನ ಕಾರ್ಯಕ್ರಮದ ಜೊತೆಗೆ ಈ ಸಂಯೋಜನೆಯನ್ನು ಬಳಸಬಹುದು. |

### 4.4.2 ಮಾರ್ಗದರ್ಶಕರಿಗೆ ನಿರಂತರ ವೃತ್ತಿಪರ ಅಭಿವೃದ್ಧಿ

ಮಾರ್ಗದರ್ಶಕ ತರಬೇತಿಯು ದಿಗ್ಭ್ರಮೆಗೊಳ್ಳಬೇಕು ಮತ್ತು ಮಾರ್ಗದರ್ಶಕರು ಹೆಚ್ಚು ಮಾರ್ಗದರ್ಶನ ನೀಡುವ ಸಂವಾದಗಳೊಂದಿಗೆ ತೊಡಗಿಸಿಕೊಂಡಂತೆ ಮುನ್ನಡೆಯಬೇಕು. ಉದಾಹರಣೆಗೆ, ಮಾರ್ಗದರ್ಶಕರಿಗೆ ವಿವಿಧ ಕೌಶಲ್ಯಗಳನ್ನು ಪರಿಚಯಿಸಲು ಮಾರ್ಗದರ್ಶಕ ತರಬೇತಿಯು ವಿವಿಧ ಹಂತಗಳಲ್ಲಿ ನಡೆಯಬಹುದು ಮತ್ತು ನಂತರದ ಘಟಕವು ಅವರ ಚಾಲ್ತಿಯಲ್ಲಿರುವ ಸಾಮರ್ಥ್ಯ ವೃದ್ಧಿಗೆ ಸಹಾಯ ಮಾಡಬಹುದು:

**ಕೋಷ್ಟಕ 4.3: ಮಾರ್ಗದರ್ಶಕರ ತರಬೇತಿ ಮತ್ತು ಕೌಶಲ್ಯಗಳ ಮಟ್ಟ**

| ಹಂತ 1 | ಹಂತ 2 | ಹಂತ 3 |
|---|---|---|
| ಮಾರ್ಗದರ್ಶನ ಮತ್ತು ಅದರ ಸಾರ | ಚರ್ಚಾ ವಲಯಗಳು | ಹೊಣೆಗಾರಿಕೆಯನ್ನು ನಿರ್ಮಿಸುವುದು |
| ದೃಷ್ಟಿಕೋನ ಮತ್ತು ಗುರಿಗಳನ್ನು ಹೊಂದಿಸುವುದು | ಸಂಸ್ಕೃತಿ ನಿರ್ಮಾಣ | ನೆಟ್ವರ್ಕಿಂಗ್ |
| ಗುಂಪು ಸುಗಮಗೊಳಿಸುವಿಕೆ | ವೈಯಕ್ತಿಕ ಮಾರ್ಗದರ್ಶನ | ಸಹಪಾಠಿ ಮಾರ್ಗದರ್ಶನ |
| ಪ್ರಕರಣ ಆಧಾರಿತ ಚರ್ಚೆಗಳು | ತನಿಖಾ ಪ್ರಶ್ನೆಗಳನ್ನು ಕೇಳುವುದು | ಪರಿವರ್ತನೆ |
| ಸಮಕಾಲಿಕ ಅನುಕೂಲತೆ | ಪ್ರತಿಕ್ರಿಯೆ ನೀಡುವುದು ಮತ್ತು ತೆಗೆದುಕೊಳ್ಳುವುದು | ಬೆಳವಣಿಗೆಯ ಮನಸ್ಥಿತಿ |
| ಸಕ್ರಿಯವಾಗಿ ಆಲಿಸುವುದು | | ಸಮಯ ನಿರ್ವಹಣೆ |
| ಅಸಮಕಾಲಿಕ ಅನುಕೂಲತೆ | | |
| ತನಿಖಾ ಪ್ರಶ್ನೆಗಳನ್ನು ಕೇಳುವುದು | | |

ಹೆಚ್ಚುವರಿಯಾಗಿ, ಮಾರ್ಗದರ್ಶಕರು ಕಲಿಕಾರ್ಥಿಗಳೊಂದಿಗೆ ತಮ್ಮ ಚರ್ಚೆಗಳ ಪರಿಧಿಯನ್ನು ವಿಸ್ತರಿಸಲು ಮತ್ತು ಹೆಚ್ಚಿನ ದೃಷ್ಟಿಕೋನಗಳನ್ನು ತರಲು ಆಡಳಿತ ಸಂಸ್ಥೆಗಳು ನೀಡುವ ಸಾಮರ್ಥ್ಯವನ್ನು ನಿರ್ಮಿಸುವಲ್ಲಿ ತೊಡಗಿಸಿಕೊಳ್ಳಲು ಅವಕಾಶಗಳನ್ನು ಪಡೆಯಬೇಕು. ಸಿ.ಡಿ.ಪಿ ಯಲ್ಲಿ ಮಾರ್ಗದರ್ಶಕರನ್ನು ನಿಯತಕಾಲಿಕವಾಗಿ ತೊಡಗಿಸಿಕೊಳ್ಳುವ ರಚನೆಯು ಮಾರ್ಗದರ್ಶಿ ಅಭಿವೃದ್ಧಿಗೆ ಅತ್ಯಗತ್ಯ ಮತ್ತು ಪರಿಣಿತ ಅವಧಿಗಳು,

ವೆಬಿನಾರ್‌ಗಳು, ಸಾಮರ್ಥ್ಯ ನಿರ್ಮಾಣವನ್ನು ಆನ್‌ಲೈನ್ ಕೋರ್ಸ್‌ಗಳು ಮುಂತಾದವುಗಳ ಮೂಲಕ ಸಾಧಿಸಬಹುದು.

## 4.5 ಮಾರ್ಗದರ್ಶನಕ್ಕಾಗಿ ಕ್ಷೇತ್ರಗಳು

ಮೇಲೆ ತಿಳಿಸಿದ ರೀತಿಯ ಮಾರ್ಗದರ್ಶನವನ್ನು ವಿವಿಧ ಕ್ಷೇತ್ರಗಳಲ್ಲಿ ಮಾರ್ಗದರ್ಶನ ಮಾಡಲು ಬಳಸಿಕೊಳ್ಳಬಹುದು. ಮಾರ್ಗದರ್ಶನ ಕಾರ್ಯಕ್ರಮದ ಉದ್ದೇಶಗಳು, ಮಧ್ಯಸ್ಥಗಾರರ ಅಗತ್ಯತೆಗಳು ಮತ್ತು ಸಂದರ್ಭವನ್ನು ಅವಲಂಬಿಸಿ, ಯಾವುದೇ ಪ್ರದೇಶದಲ್ಲಿ ಮಾರ್ಗದರ್ಶನವನ್ನು ನೀಡಬಹುದು. ಈ ಕೆಳಗಿನ ಕ್ಷೇತ್ರಗಳನ್ನು (ಕೋಷ್ಟಕ 4.4) ಅವಧಿಗೆ ಹೆಚ್ಚು ಸೂಕ್ತವಾದ ಮಾರ್ಗದರ್ಶನದ ವಿಷಯಗಳನ್ನು ಹುಡುಕಲು ಉದಾಹರಣೆಗಳಾಗಿ ಬಳಸಬಹುದು. ಈ ಗುರುತಿಸಲಾದ ಕ್ಷೇತ್ರಗಳು ಎನ್.ಇ.ಪಿ 2020ಗೆ ಅನುಗುಣವಾಗಿದ್ದು, ಇತರ ಉದಯೋನ್ಮುಖ ಪ್ರದೇಶಗಳನ್ನು ಗುರುತಿಸಲಾಗುತ್ತದೆ ಮತ್ತು ಕಾರ್ಯಕ್ರಮದ ಮುಂದುವರಿಕೆಯಲ್ಲಿ ಸೇರಿಸಲಾಗುತ್ತದೆ.

**ಕೋಷ್ಟಕ 4.4: ಮಾರ್ಗದರ್ಶನ ಮತ್ತು ವ್ಯಾಖ್ಯಾನದ ಕ್ಷೇತ್ರಗಳು**

| ಮಾರ್ಗದರ್ಶನದ ಕ್ಷೇತ್ರಗಳು | ವ್ಯಾಖ್ಯಾನ |
|---|---|
| **ಶಿಕ್ಷಣಶಾಸ್ತ್ರದ ವಿಷಯ ಜ್ಞಾನ (ಪೆಡಗಾಜಿಕಲ್ ಕಂಟೆಂಟ್ ನಾಲೆಜ್-ಪಿ.ಸಿ.ಕೆ) - ಶಾಲಾ ವಿಷಯಗಳು/ಶಿಸ್ತುಗಳ ವಿಷಯವನ್ನು ತಿಳಿದುಕೊಳ್ಳುವುದು ಮತ್ತು ಅರ್ಥಮಾಡಿಕೊಳ್ಳುವುದು.** | ಪಿ.ಸಿ.ಕೆ ಎನ್ನುವುದು ಶಿಕ್ಷಕರ ವಿಷಯ ಮತ್ತು ಶಿಕ್ಷಣ ಜ್ಞಾನವನ್ನು ವಿವರಿಸಲು ನೀಡಲಾದ ಪದಗುಚ್ಛವಾಗಿದೆ. ವಿಷಯ ಜ್ಞಾನವು ನಿರ್ದಿಷ್ಟ ವಿಷಯಗಳು/ಶಿಸ್ತುಗಳಿಗೆ ಸಂಬಂಧಿಸಿದ ಸತ್ಯಗಳು, ಸಿದ್ಧಾಂತಗಳು, ತತ್ವಗಳು ಮತ್ತು ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದನ್ನು ಸೂಚಿಸುತ್ತದೆ ಉದಾ. ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಕಲೆ ಇತ್ಯಾದಿ. ಮತ್ತೊಂದೆಡೆ, ಶಿಕ್ಷಣ ಜ್ಞಾನವು ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ಕಲಿಯುವವರಿಗೆ ಸಹಾಯ ಮಾಡಲು ಶಿಕ್ಷಕರು ಬಳಸುವ ವಿಧಾನಗಳು ಮತ್ತು ತಂತ್ರಗಳನ್ನು ಸೂಚಿಸುತ್ತದೆ. |
| **ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆ** | ಎನ್.ಇ.ಪಿ 2020 ಯಲ್ಲಿ ಹೇಳಿದಂತೆ, 2025 ರ ವೇಳೆಗೆ ಪ್ರಾಥಮಿಕ ಶಾಲೆಯಲ್ಲಿ ಸಾರ್ವತ್ರಿಕ ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆಯ ಸಾಧನೆಗೆ ಹೆಚ್ಚಿನ ಆದ್ಯತೆಯಾಗಿದೆ. ವಿದ್ಯಾರ್ಥಿಯು 3ನೇ ತರಗತಿಯನ್ನು ತಲುಪುವಷ್ಟರಲ್ಲಿ, ಅವಳು/ಅವನು ಅರ್ಥಪೂರ್ಣ ಓದುವಿಕೆ ಮತ್ತು ಬರೆಯುವಲ್ಲಿ ಸಮರ್ಥರಾಗಿರಬೇಕು ಮತ್ತು ಗಣಿತಕ್ಕೆ ಸಂಬಂಧಿಸಿದ ಮೂಲಭೂತ ತಿಳುವಳಿಕೆಯನ್ನು ಬೆಳೆಸಿಕೊಂಡಿರಬೇಕು. ಮೂಲಭೂತ ಸಾಕ್ಷರತೆ ಮತ್ತು ಗಣಿತ ಜ್ಞಾನವನ್ನು ಶಾಲೆ ಮತ್ತು ಶಾಲೆಯ ಹೊರಗಿನ ಜೀವನವನ್ನು ಸಂಯೋಜಿಸುವ ಮೂಲಕ ಸಾಧಿಸಬಹುದು. |
| **ಸಮಾನ ಮತ್ತು ಅಂತರ್ಗತ ಶಿಕ್ಷಣ** | ಎನ್.ಇ.ಪಿ 2020 ಸಮಾನ ಮತ್ತು ಅಂತರ್ಗತ ಶಿಕ್ಷಣವನ್ನು ಬಲವಾಗಿ ಒತ್ತಿಹೇಳುತ್ತದೆ, ಎಲ್ಲಾ ಮಕ್ಕಳು ಗುಣಮಟ್ಟದ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯಬೇಕು ಎಂಬ ಪರಿಕಲ್ಪನೆಯನ್ನು ಉತ್ತೇಜಿಸುತ್ತದೆ. ಇದು ಹಿಂದುಳಿದ ಗುಂಪುಗಳು ಎತ್ತಿರುವ ಸವಾಲುಗಳನ್ನು ಪರಿಗಣಿಸಿದೆ. (ಮಹಿಳೆಯರು, ಮಂಗಳಮುಖಿಯರ ಗುಂಪುಗಳು, ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳು, ಒಬಿಸಿಗಳು, ವಿಶೇಷ ಚೇತನರು ಮತ್ತು ಅನನುಕೂಲ ಪರಿಸ್ಥಿತಿಯ ಇತರ ಗುಂಪುಗಳು). ನೀತಿಯು ಎಲ್ಲಾ ಮಕ್ಕಳಿಗೂ ಒಳಗೊಳ್ಳುವ ಕಲಿಕೆಯ ವಾತಾವರಣವನ್ನು ಸೃಷ್ಟಿಸುವುದನ್ನು ಖಚಿತಪಡಿಸುತ್ತದೆ. |

| | |
|---|---|
| **ಸಾಮರ್ಥ್ಯ ಆಧಾರಿತ ಶಿಕ್ಷಣ** | ಸಾಮರ್ಥ್ಯ-ಆಧಾರಿತ ಶಿಕ್ಷಣವು ದೃಢವಾದ ಪಠ್ಯಕ್ರಮ ಮತ್ತು ಕಾಲಮಿತಿಯ ಮೂಲಕ ಮುಂದುವರಿಯುವುದಕ್ಕಿಂತ ಹೆಚ್ಚಾಗಿ ಗಮನಿಸಬಹುದಾದ ಮತ್ತು ಅಳೆಯಬಹುದಾದ ನಡವಳಿಕೆ, ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಕೇಂದ್ರೀಕರಿಸುವ ಒಂದು ವಿಧಾನವಾಗಿದೆ. ನೈಜ-ಜೀವನದ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಅನ್ವಯಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು ಸಾಮರ್ಥ್ಯ ಆಧಾರಿತ ಶಿಕ್ಷಣದ ಗುರಿಯಾಗಿದೆ. |
| **ಕಥೆ ಹೇಳುವುದು ಮತ್ತು ಆಟಿಕೆ ಆಧಾರಿತ ಶಿಕ್ಷಣಶಾಸ್ತ್ರ** | ಎನ್.ಇ.ಪಿ 2020 ಮತ್ತು ನ್ಯಾಷನಲ್ ಕರಿಕ್ಯೂಲಮ್ ಫ್ರೇಮ್ ವರ್ಕ್ ಫಾರ್ ದ ಫೌಂಡೇಶನಲ್ ಸ್ಟೇಜ್- 2022 ಯು ಕಲಿಕೆಯ ಅಡಿಪಾಯದ ಹಂತದಲ್ಲಿ ಮಕ್ಕಳಿಗೆ ಕಥೆ ಹೇಳುವಿಕೆ ಮತ್ತು ಆಟಿಕೆ ಆಧಾರಿತ ಶಿಕ್ಷಣಶಾಸ್ತ್ರದ ಬಳಕೆಯನ್ನು ಹೆಚ್ಚು ಶಿಫಾರಸು ಮಾಡುತ್ತವೆ. ಆರಂಭಿಕ ಹಂತಗಳಲ್ಲಿ ಮಕ್ಕಳು ಪಡೆದ ಪರಿಕಲ್ಪನಾ ತಿಳುವಳಿಕೆಯನ್ನು ಆಟಿಕೆ ಆಧಾರಿತ ಶಿಕ್ಷಣಶಾಸ್ತ್ರದಿಂದ ಬಲಪಡಿಸಬಹುದು. ಇದು ಮಕ್ಕಳಲ್ಲಿ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆ, ಜಾಣ್ಮೆ ಮತ್ತು ಸೃಜನಶೀಲತೆಯನ್ನು ಉತ್ತೇಜಿಸುತ್ತದೆ. |
| **ಪ್ರಯೋಗಾತ್ಮಕ ಕಲಿಕೆ** | ಎನ್.ಇ.ಪಿ 2020 ಯು ಪ್ರಾಯೋಗಿಕ ಕಲಿಕೆಯ ಅಳವಡಿಕೆಯನ್ನು ಸೂಚಿಸುತ್ತದೆ, "ಕಲೆ-ಸಂಯೋಜಿತ ಮತ್ತು ಕ್ರೀಡಾ-ಸಂಯೋಜಿತ ಶಿಕ್ಷಣ ಮತ್ತು ಕಥೆ-ಹೇಳುವಿಕೆ-ಆಧಾರಿತ ಶಿಕ್ಷಣಶಾಸ್ತ್ರ, ಪ್ರತಿ ವಿಷಯದ ಪ್ರಮಾಣಿತ ಶಿಕ್ಷಣಶಾಸ್ತ್ರದೊಳಗೆ ಕಲಿಕೆಯ ಏಕೀಕರಣವನ್ನು ಒಳಗೊಂಡಂತೆ". |
| **ಭಾರತೀಯ ಜ್ಞಾನ** | ಭಾರತೀಯ ಜ್ಞಾನ ಮತ್ತು ಆಲೋಚನೆಗಳು ಯಾವಾಗಲೂ ಜ್ಞಾನ, ಬುದ್ಧಿವಂತಿಕೆ ಮತ್ತು ಸತ್ಯದ ಹಸಿವನ್ನು ಶಿಕ್ಷಣದ ಭಾಗವೆಂದು ಪರಿಗಣಿಸುತ್ತವೆ. ಭಾರತೀಯ ಜ್ಞಾನದಲ್ಲಿ ಶಿಕ್ಷಣದ ಗುರಿಯು ಅಂತಿಮ ಸ್ವಯಂ-ಸಾಕ್ಷಾತ್ಕಾರ ಮತ್ತು ವಿಮೋಚನೆ ಮತ್ತು ಜೀವನ ಸಾಗಿಸಲು ವ್ಯಕ್ತಿಗಳನ್ನು ಸಿದ್ಧ ಮಾಡುವುದಾಗಿದೆ. ಪ್ರಾಚೀನ ಭಾರತೀಯ ಜ್ಞಾನದ ಅಂಶಗಳನ್ನು ವೈಜ್ಞಾನಿಕ ರೀತಿಯಲ್ಲಿ ತಿಳಿಸಬಹುದು. |
| **ಕ್ರಿಯಾ ಸಂಶೋಧನೆ** | ಕ್ರಿಯಾ ಸಂಶೋಧನೆಯು ಒಂದು ರೀತಿಯ ವ್ಯವಸ್ಥಿತ ಅರಿವಿಗೆ ಅದು ತರಗತಿ ಮತ್ತು ಶಾಲೆಯಲ್ಲಿ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ತಂತ್ರಗಳ ಬಗ್ಗೆ ಹೆಚ್ಚಿನದನ್ನು ಕಂಡುಹಿಡಿಯಲು ಶಿಕ್ಷಕರಿಂದ ಇದನ್ನು ನಡೆಸಲಾಗುತ್ತದೆ ಮತ್ತು ಬೋಧನೆ-ಕಲಿಕೆಯ ವಾತಾವರಣದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. |
| **ನೈತಿಕತೆ ಮತ್ತು ಸಾಂವಿಧಾನಿಕ ಮೌಲ್ಯಗಳು** | ಉತ್ತಮ ಶಿಕ್ಷಣ ವ್ಯವಸ್ಥೆಯು ತತ್ವಗಳು, ನೈತಿಕತೆ ಮತ್ತು ಸಾಂವಿಧಾನಿಕ ಮೌಲ್ಯಗಳಿಂದ ಮಾರ್ಗದರ್ಶಿಸಲ್ಪಡುತ್ತದೆ, ಅದು ಸಹಾನುಭೂತಿ, ಇತರರಿಗೆ ಗೌರವ ನೀಡುವಿಕೆ, ಸ್ವಚ್ಛತೆ, ಸೌಜನ್ಯ, ಪ್ರಜಾಪ್ರಭುತ್ವದ ಮನೋಭಾವ, ಸಾರ್ವಜನಿಕ ಆಸ್ತಿಗೆ ಗೌರವ, ವೈಜ್ಞಾನಿಕ ಮನೋಭಾವ, ಸ್ವಾತಂತ್ರ್ಯ, ಜವಾಬ್ದಾರಿ, ಬಹುತ್ವ, ಸಮಾನತೆ ಮತ್ತು ನ್ಯಾಯದ ಮೇಲೆ ಕೇಂದ್ರೀಕರಿಸುತ್ತದೆ. |

| | |
|---|---|
| **ಡಿಜಿಟಲ್ ಶಿಕ್ಷಣ ಸಾಕ್ಷರತೆ** | ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ತಂತ್ರಜ್ಞಾನದ ಪ್ರಯೋಜನಗಳನ್ನು ಬಳಸಿಕೊಳ್ಳುವ ಪ್ರಾಮುಖ್ಯತೆಯನ್ನು ಎನ್.ಇ.ಪಿ 2020 ಅನುಮೋದಿಸುತ್ತದೆ. ಡಿಜಿಟಲ್ ವೇದಿಕೆಗಳು ಮತ್ತು ಐ.ಸಿ.ಟಿ-ಆಧಾರಿತ ಶೈಕ್ಷಣಿಕ ಉಪಕ್ರಮಗಳು ಅತ್ಯಗತ್ಯ ಮತ್ತು ಭವಿಷ್ಯದ ಶೈಕ್ಷಣಿಕ ಭೂದೃಶ್ಯದ ಸವಾಲುಗಳನ್ನು ಎದುರಿಸಲು ಇವುಗಳನ್ನು ಉತ್ತೇಜಿಸುವ ಮತ್ತು ವಿಸ್ತರಿಸುವ ಅಗತ್ಯವಿದೆ. |
| **ವೃತ್ತಿಪರ ಮಾನ್ಯತೆ ಮತ್ತು ಕೌಶಲ್ಯಗಳು** | ಎನ್.ಇ.ಪಿ 2020 ವೃತ್ತಿಪರ ಮತ್ತು ಶೈಕ್ಷಣಿಕ ಶಿಕ್ಷಣದ ನಡುವೆ ಯಾವುದೇ ಗಟ್ಟಿಯಾದ ಪ್ರತ್ಯೇಕತೆಯ ಪರಿಕಲ್ಪನೆಯನ್ನು ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಗಳು ವಿಶೇಷವಾಗಿ ತಮ್ಮ ಆಸಕ್ತಿಗೆ ಅನುಗುಣವಾಗಿ ವಿಷಯವನ್ನು ಆರಿಸಿಕೊಳ್ಳುವ ಆಯ್ಕೆ ಹೊಂದಿರುತ್ತಾರೆ, ಇದರಿಂದ ಅವರು ಭವಿಷ್ಯದಲ್ಲಿ ತಮ್ಮದೇ ಆದ ಮಾರ್ಗವನ್ನು ಆರಿಸಿಕೊಳ್ಳಬಹುದು. ಇಂಟರ್ನ್‌ಶಿಪ್ ಸಾಧ್ಯತೆಗಳ ಮೂಲಕ, ಬಡಗಿಗಳು, ತೋಟಗಾರರು, ಕುಂಬಾರರು ಮತ್ತು ಕಲಾವಿದರು ಸೇರಿದಂತೆ ವಿವಿಧ ಕ್ಷೇತ್ರಗಳ ವೃತ್ತಿಪರ ತಜ್ಞರೊಂದಿಗೆ ಇದು ವಿದ್ಯಾರ್ಥಿಗಳನ್ನು ಸಂಪರ್ಕಿಸುತ್ತದೆ. |
| **ಕಲೆ-ಸಂಯೋಜಿತ ಶಿಕ್ಷಣ** | ಶಿಕ್ಷಣಶಾಸ್ತ್ರದಲ್ಲಿ ಕಲೆ-ಸಂಯೋಜಿತ ಶಿಕ್ಷಣದ ಸಂಯೋಜನೆಯು ಮಕ್ಕಳಿಗೆ ಸಂತೋಷ ಮತ್ತು ಆನಂದದಾಯಕ ಕಲಿಕೆಯ ವಾತಾವರಣವನ್ನು ಸೃಷ್ಟಿಸುತ್ತದೆ. ಭಾರತೀಯ ಕಲೆ ಮತ್ತು ಸಂಸ್ಕೃತಿಯ ಏಕೀಕರಣವು ಕಲಿಕೆಯಲ್ಲಿ ಭಾರತೀಯ ನೀತಿ ಮತ್ತು ಮೌಲ್ಯಗಳನ್ನು ಹಿಡಿದಿಟ್ಟುಕೊಳ್ಳುತ್ತದೆ ಮತ್ತು ಶಿಕ್ಷಣ ಮತ್ತು ಸಂಸ್ಕೃತಿಯ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುತ್ತದೆ, ಇದು ಯಾವುದೇ ದೇಶದ ಶಿಕ್ಷಣ ವ್ಯವಸ್ಥೆಯ ಅತ್ಯಂತ ಪ್ರಮುಖ ಅಂಶವಾಗಿದೆ. |
| **ಕ್ರೀಡೆ-ಸಂಯೋಜಿತ ಶಿಕ್ಷಣ** | ಹಾಗೆಯೇ ಎನ್.ಇ.ಪಿ 2020 "ಸ್ಥಳೀಯ ಕ್ರೀಡೆಗಳು ಸೇರಿದಂತೆ ದೈಹಿಕ ಚಟುವಟಿಕೆಗಳನ್ನು ಬಳಸಿಕೊಳ್ಳುವ ಕ್ರೀಡೆ-ಸಂಯೋಜಿತ ಶಿಕ್ಷಣ ವಿಧಾನ ಹಾಗೂ ವಿದ್ಯಾರ್ಥಿಗಳಿಗೆ ಸಹಯೋಗ, ಸ್ವಯಂ-ಉಪಕ್ರಮ, ಸ್ವಯಂ-ನಿರ್ದೇಶಿತ, ಸ್ವಯಂ-ಶಿಸ್ತು, ತಂಡದ ಕೆಲಸ ಮತ್ತು ಜವಾಬ್ದಾರಿಯಂತಹ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುವುದು" ಇದನ್ನೂ ಪ್ರೋತ್ಸಾಹಿಸುತ್ತದೆ. |
| **ಸಮುದಾಯದ ತೊಡಗಿಸಿಕೊಳ್ಳುವಿಕೆ** | ಪರಿಣಾಮಕಾರಿ ಕಲಿಕೆಗಾಗಿ ಮಗುವಿನ ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ವಿವಿಧ ಅಧ್ಯಯನಗಳು ಬೆಂಬಲಿಸಿವೆ. ವಿವಿಧ ರೀತಿಯಲ್ಲಿ ಸಮುದಾಯದ ಅರ್ಥಪೂರ್ಣ ಒಳಗೊಳ್ಳುವಿಕೆಯು ಮಕ್ಕಳಲ್ಲಿ ಸಾಂಸ್ಕೃತಿಕ ಗೌರವದ ಭಾವನೆಯನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ-ಭಾವನಾತ್ಮಕ ಕಲಿಕೆಯನ್ನು ಹೆಚ್ಚಿಸುತ್ತದೆ. ಶಾಲೆಯ ಹೊರಗೆ ಸಮಾಜದ ಚಲನಶೀಲತೆಯನ್ನು ಕಲಿಯಲು ಇದು ಅವರಿಗೆ ಸಹಾಯ ಮಾಡುತ್ತದೆ. |
| **21ನೇ ಶತಮಾನದ ಕೌಶಲ್ಯಗಳು** | ವಿಕಸನಗೊಳ್ಳುತ್ತಿರುವ ಸಮಾಜ ಮತ್ತು ಪ್ರಪಂಚದಲ್ಲಿ ವ್ಯಕ್ತಿಗಳು ಅಭಿವೃದ್ಧಿ ಹೊಂದುವ ಅಗತ್ಯತೆಯಾಗಿ ಹೊರಹೊಮ್ಮಿದ ವ್ಯಾಪಕ ಶ್ರೇಣಿಯ ಕೌಶಲ್ಯಗಳು ಅಥವಾ ಸಾಮರ್ಥ್ಯಗಳನ್ನು ಇದು ಸೂಚಿಸುತ್ತದೆ. ಈ ಕೌಶಲ್ಯಗಳು ಸೃಜನಶೀಲತೆ, ಡಿಜಿಟಲ್ ಸಾಕ್ಷರತೆ, ಸಮಸ್ಯೆ ಪರಿಹಾರ, ಸಂವಾದ, ನಾವೀನ್ಯತೆ ಮತ್ತು ಹೊಂದಾಣಿಕೆಯನ್ನು |

| | |
|---|---|
| | ಒಳಗೊಂಡಿರುತ್ತವೆ. ಹೊಸ ಉದಯೋನ್ಮುಖ ತಂತ್ರಜ್ಞಾನದ ಪ್ರಗತಿಯೊಂದಿಗೆ, ಈ ಕೌಶಲ್ಯಗಳು ಈಗ ಜನರು ಜಾಗತಿಕ ನಾಗರಿಕರಾಗಲು ನಿರ್ಣಾಯಕವಾಗಿವೆ. |
| **360- ಡಿಗ್ರಿ ಮೌಲ್ಯಮಾಪನವನ್ನು ರಚಿಸುವುದು ಮತ್ತು ಕಾರ್ಯನಿರ್ವಹಿಸುವುದು (ಸಮಗ್ರ ಮೌಲ್ಯಮಾಪನ)** | ಎನ್.ಇ.ಪಿ 2020 ರಲ್ಲಿ ಮಕ್ಕಳಿಗೆ 360-ಕೋನೀಯ ಬಹು ಆಯಾಮದ ಮೌಲ್ಯಮಾಪನವನ್ನು ಸೂಚಿಸಲಾಗಿದೆ. ಮಕ್ಕಳ ಮೌಲ್ಯಮಾಪನವನ್ನು ಶಿಕ್ಷಕರು, ಪೋಷಕರು, ಗೆಳೆಯರು ಮತ್ತು ಸ್ವಯಂ ಮೌಲ್ಯಮಾಪನದ ಮೂಲಕ ಸಮಗ್ರ ರೀತಿಯಲ್ಲಿ ಮಾಡಬೇಕು. ಇದು ಅರಿವಿನ, ಭಾವನೆಯ ಮತ್ತು ಮನೋಚಾಲನೆಯ ಅಭಿವೃದ್ಧಿಯ ಎಲ್ಲಾ ಅಂಶಗಳನ್ನು ಒಳಗೊಂಡಿದೆ. |
| **ಶಿಕ್ಷಕರ ಮಾನಸಿಕ ಆರೋಗ್ಯ** | ಪ್ರಸ್ತುತ ಶೈಕ್ಷಣಿಕ ಸನ್ನಿವೇಶದಲ್ಲಿ, ಶಿಕ್ಷಕರು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ ಮತ್ತು ಅವರ ವೃತ್ತಿಗೆ ಹೆಚ್ಚು ಬೇಡಿಕೆಯಿದೆ. ಭಾವನಾತ್ಮಕ ಬೇಡಿಕೆಗಳು, ಕೆಲಸ-ಜೀವನದ ಸಮತೋಲನ ಮತ್ತು ಕಾರ್ಯಕ್ಷಮತೆಯ ಒತ್ತಡವು ಶಾಲಾ ಶಿಕ್ಷಕರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವ ಕೆಲವು ಅಂಶಗಳಾಗಿವೆ. ಆದ್ದರಿಂದ, ಶಾಲೆಗಳಲ್ಲಿ ಪೂರಕ ಮತ್ತು ಆರೋಗ್ಯಕರ ಕಲಿಕೆಯ ವಾತಾವರಣವನ್ನು ಸೃಷ್ಟಿಸಲು ಶಿಕ್ಷಕರ ಮಾನಸಿಕ ಆರೋಗ್ಯದ ಸಮಸ್ಯೆಯನ್ನು ಗುರುತಿಸುವುದು ಮುಖ್ಯವಾಗಿದೆ. |

## 4.6 ಮಾರ್ಗದರ್ಶನದ ಸಂವಾದ

ರಚನಾತ್ಮಕ ಮಾರ್ಗದರ್ಶನ ಸಂವಾದವು ಯಶಸ್ವಿ ಮಾರ್ಗದರ್ಶನ ಸಂಬಂಧಕ್ಕೆ ಪ್ರಮುಖವಾಗಿದೆ, ಇದು ಮಾರ್ಗದರ್ಶಕ ಮತ್ತು ಕಲಿಕಾರ್ಥಿ ಇಬ್ಬರಿಗೂ ಪ್ರಯೋಜನವನ್ನು ನೀಡುತ್ತದೆ; ಆದಾಗ್ಯೂ, ಮಾರ್ಗದರ್ಶಕ ಮತ್ತು ಕಲಿಕಾರ್ಥಿಗಳ ನಡುವಿನ ಸಂಬಂಧವು ಕಾಲಾನುಕ್ರಮದಲ್ಲಿ ವಿಕಸನಗೊಳ್ಳುತ್ತದೆ. ಸಂಪೂರ್ಣ ಸಂವಾದದ ಸಮಯದಲ್ಲಿ, ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವಿನ ಸಂಬಂಧವು ಸ್ಥಿರ ಮತ್ತು ವಿಶ್ವಾಸಾರ್ಹವಾಗಿರಬೇಕು ಮತ್ತು ಅವರು ಮಾರ್ಗದರ್ಶನ ಸಂಬಂಧದಲ್ಲಿ ಭಾಗವಹಿಸಲು ಆಯ್ಕೆಮಾಡಿದ ಕಾರಣಗಳನ್ನು ಆಲೋಚಿಸಬೇಕು. ಇದು ಮಾರ್ಗದರ್ಶಿ ಕಾರ್ಯಕ್ರಮದ ಗುರಿಗಳು, ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವಿನ ಸಂವಾದವನ್ನು ಅವಲಂಬಿಸಿರುತ್ತದೆ. ಈ ಸಂವಾದವು ಕೆಳಗಿನವುಗಳನ್ನು ಒಳಗೊಂಡಿರುತ್ತದೆ:

ಎ. ನಂಬಿಕೆ ಮತ್ತು ಬಾಂಧವ್ಯವನ್ನು ಬೆಳೆಸುವುದು

ಬಿ. ಗುರಿಗಳನ್ನು ಹೊಂದಿಸಲು ಸಹಕಾರಿ ಪ್ರಯತ್ನಗಳು

ಸಿ. ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವೆ ಕಾಲಕಾಲಿಕ ಸಭೆಗಳು

ಡಿ. ಪರಸ್ಪರ ಹೊಗಳಿಕೆ ಮತ್ತು ಪ್ರೇರಣೆ

ಇ. ವೈಯಕ್ತಿಕ ಮತ್ತು ವೃತ್ತಿಪರ ಅಭಿವೃದ್ಧಿ

ಎಫ್. ಬೆಂಬಲ ಮಾರ್ಗದರ್ಶನ ಮತ್ತು ಪ್ರತಿಕ್ರಿಯೆ

ಅಧ್ಯಾಯ 5

# ಮಾರ್ಗದರ್ಶನ ಕಾರ್ಯಕ್ರಮದ ಅಂಶಗಳು



# ಅಧ್ಯಾಯ V: ಮಾರ್ಗದರ್ಶನ ಕಾರ್ಯಕ್ರಮದ ಅಂಶಗಳು

ಮಾರ್ಗದರ್ಶನ ಕಾರ್ಯಕ್ರಮವನ್ನು ವಿನ್ಯಾಸ ಮಾಡುವಾಗ ಪರಿಗಣಿಸಲು ಹಲವು ಅಂಶಗಳನ್ನು ಹೊಂದಿರುವ ಸಂಕೀರ್ಣ ರಚನೆಗಳಿರಬಹುದು. ಮಾರ್ಗದರ್ಶನ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ವಿನ್ಯಾಸಗೊಳಿಸಲು ಮತ್ತು ಕಾರ್ಯಗತಗೊಳಿಸಲು ಈ ಕೆಳಗಿನ ಅಂಶಗಳು ಸಹಾಯ ಮಾಡುತ್ತವೆ:

## 5.1 ಕಾರ್ಯಕ್ರಮ ವಿನ್ಯಾಸ ಮತ್ತು ಯೋಜನೆ

ಎ. ಉದ್ದಿಷ್ಟ ಗುಂಪು (ಕಲಿಕಾರ್ಥಿಗಳು)

ಬಿ. ಮಾರ್ಗದರ್ಶನ ಕಾರ್ಯಕ್ರಮದ ಸ್ವರೂಪ

ಸಿ. ಆನ್‌ಬೋರ್ಡಿಂಗ್‌ಗಾಗಿ ಸಂಭಾವ್ಯ ಮಾರ್ಗದರ್ಶಕರು

ಡಿ. ಒಳಗೊಂಡಿರುವ ಎಲ್ಲಾ ಪಾಲುದಾರರಿಗೆ ದೂರದೃಷ್ಟಿ, ಗುರಿಗಳು ಮತ್ತು ನಿರೀಕ್ಷಿತ ಫಲಿತಾಂಶಗಳು (ಮಾರ್ಗದರ್ಶಕರು, ಕಲಿಕಾರ್ಥಿಗಳು, ನಿರ್ವಾಹಕರು ಇತ್ಯಾದಿ)

ಇ. ಅವಧಿ ಮತ್ತು ಆವರ್ತನ ಅವಧಿಗಳು

ಎಫ್. ಮಾರ್ಗದರ್ಶನ ನೀಡುವಿಕೆಯ ಬಗ್ಗೆ ಸಂವಾದ ವಿಧಾನ

ಜಿ. ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯ ಪ್ರಸಾರ

ಎಚ್. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

ಐ. ಪ್ರತಿಕ್ರಿಯೆ ಮತ್ತು ಅನುಸರಣೆ

### 5.1.1 ಮಾರ್ಗದರ್ಶಕರ ಪ್ರಗತಿ

ಮಾರ್ಗದರ್ಶಿ ಕಾರ್ಯಕ್ರಮವು ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವಿನ ಸಂಬಂಧವನ್ನು ಮಾತ್ರ ಒಳಗೊಂಡಿರುತ್ತದೆ. ಆದರೆ ಮಾರ್ಗದರ್ಶಕರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಪರಿಗಣಿಸಿ ಅವರು ನಿರಂತರವಾಗಿ ವ್ಯವಸ್ಥೆಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಮಾರ್ಗದರ್ಶನ ವ್ಯವಸ್ಥೆಯನ್ನು ಸಮರ್ಥವಾಗಿ ಬೆಂಬಲಿಸುವ ರೀತಿಯಲ್ಲಿ ವಿನ್ಯಾಸಗೊಳಿಸಬೇಕು ಮತ್ತು ವ್ಯವಸ್ಥೆಯನ್ನು ಮುಂದುವರಿಸಲು ಯಾವಾಗಲೂ ಬಾಹ್ಯ ಮೂಲಗಳನ್ನು ಅವಲಂಬಿಸಬಾರದು. ಉದಾಹರಣೆಗೆ, ಮಾರ್ಗದರ್ಶಕರು ಒಂದು ನಿರ್ದಿಷ್ಟ ಮಟ್ಟದ ತರಬೇತಿಯನ್ನು ಪಡೆದ ನಂತರ ಹೊಸ ಮಾರ್ಗದರ್ಶಕರಿಗೆ ತರಬೇತಿ ನೀಡಬಹುದು. ನಾಲ್ಕು-ಹಂತದ ಪ್ರಕ್ರಿಯೆಯ ಉದಾಹರಣೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

ಮಾರ್ಗದರ್ಶನದ ಸಂಬಂಧದ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಮಾರ್ಗದರ್ಶಿ ಕಾರ್ಯಕ್ರಮದ ಪ್ರಗತಿಯನ್ನು ವಿನ್ಯಾಸಗೊಳಿಸಬೇಕು.




ಚಿತ್ರ 5.1: ಮಾರ್ಗದರ್ಶಕರ ಪ್ರಗತಿ

## 5.2 ಕಾರ್ಯಕ್ರಮ ನಿರ್ವಹಣೆ

ಮಾರ್ಗದರ್ಶನ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಕಾರ್ಯಕ್ರಮ ನಿರ್ವಹಣಾ ಘಟಕ (ಪ್ರೋಗ್ರಾಮ್ ಮ್ಯಾನೇಜ್ಮೆಂಟ್ ಯುನಿಟ್-PMU) ಅಥವಾ ನಿರ್ವಾಹಕರ ತಂಡವನ್ನು ಹೊಂದಿಸಬಹುದು, ಅದು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ:

ಎ. ಸಲಹಾ ಗುಂಪನ್ನು ಸ್ಥಾಪಿಸುವುದು

ಬಿ. ಕಾರ್ಯಕ್ರಮವನ್ನು ನಿರ್ವಹಿಸುವ ವ್ಯವಸ್ಥೆ

ಸಿ. ಅಭಿವೃದ್ಧಿ ಯೋಜನೆಗಳು ಮತ್ತು ಸಂಪನ್ಮೂಲ ವಿನ್ಯಾಸ

ಡಿ. ಕಾರ್ಯಕ್ರಮವನ್ನು ಮೇಲ್ವಿಚಾರಣೆ ಮಾಡುವ ವ್ಯವಸ್ಥೆ

ಇ. ಪಾಲುದಾರರು, ಸಂಸ್ಥೆಗಳು ಮತ್ತು ಕಾರ್ಯಕ್ರಮಕ್ಕಾಗಿ ಪ್ರತಿಕ್ರಿಯೆ ನೀಡುವ ಕಾರ್ಯವಿಧಾನ

ಎಫ್. ಮಾನವ ಸಂಪನ್ಮೂಲ ಅಭಿವೃದ್ಧಿಗೆ ತಂತ್ರಗಳು

ಜಿ. ಪರಿಣಾಮಕಾರಿ ಸಾರ್ವಜನಿಕ ಸಂಪರ್ಕಗಳು ಮತ್ತು ಸಂವಾದ ಪ್ರಯತ್ನಗಳು

ಎಚ್. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಬಜೆಟ್ ಹಂಚಿಕೆ

## 5.3 ಕಾರ್ಯಕ್ರಮದ ಕಾರ್ಯಾಚರಣೆಗಳು

ನೆನಪಿನಲ್ಲಿಟ್ಟುಕೊಳ್ಳಬೇಕಾದ ಕಾರ್ಯಾಚರಣೆಯ ಕಾರ್ಯಗಳು:

ಎ. ಮಾರ್ಗದರ್ಶಕರು, ಕಲಿಕಾರ್ಥಿಗಳು, ಕಾರ್ಯಕ್ರಮ ಸಿಬ್ಬಂದಿ ಮತ್ತು ಸ್ವಯಂಸೇವಕರು, ಇವರುಗಳಲ್ಲಿ ಯಾರಾದರೂ ಇದ್ದರೆ ಅವರ ತಂಡಗಳನ್ನು ರಚಿಸುವುದು

ಬಿ. ಸಂಭಾವ್ಯ ಮಾರ್ಗದರ್ಶಕರ ಸ್ಕ್ರೀನಿಂಗ್ ಮತ್ತು ಕಲಿಕಾರ್ಥಿಗಳ ಮೌಲ್ಯೀಕರಣ

ಸಿ. ಮಾರ್ಗದರ್ಶಕರು, ಕಲಿಕಾರ್ಥಿಗಳು ಮತ್ತು ಕಾರ್ಯಕ್ರಮ ಸಿಬ್ಬಂದಿಗೆ ಪುನರ್ಮನನ ಮತ್ತು ತರಬೇತಿಯನ್ನು ಒದಗಿಸುವುದು

ಡಿ. ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ಮ್ಯಾಪಿಂಗ್ ಮಾಡುವುದು

ಇ. ಸ್ಥಾಪಿತ ನಿಯತಾಂಕಗಳಲ್ಲಿ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳಿಗೆ ಚಟುವಟಿಕೆಗಳು ಮತ್ತು ಅವಧಿಗಳನ್ನು ಯೋಜಿಸುವುದು.

ಎಫ್. ಮಾರ್ಗದರ್ಶನ ಕಾರ್ಯಕ್ರಮವನ್ನು ಮೇಲ್ವಿಚಾರಣೆ ಮಾಡಲು ಸಹಾಯಕ ಕಾರ್ಯವಿಧಾನ

ಜಿ. ಕಾರ್ಯಕ್ರಮದ ಉದ್ದಕ್ಕೂ ಭಾಗವಹಿಸುವವರ ಕೊಡುಗೆಗಳನ್ನು ಗುರುತಿಸುವುದು

ಎಚ್. ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳಿಗೆ ತಮ್ಮ ಗುರಿ ಸಾಧನೆಗೆ ಅನುಕೂಲ ಮಾಡಿಕೊಡುವುದು

### 5.3.1 ಪಾತ್ರಗಳು ಮತ್ತು ಜವಾಬ್ದಾರಿಗಳು

ಮಾರ್ಗದರ್ಶನ ಕಾರ್ಯಕ್ರಮದ ವಿವಿಧ ಪಾಲುದಾರರಿಗೆ ಸೂಚಿತ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 5.1: ಪಾಲುದಾರರು ಮತ್ತು ಜವಾಬ್ದಾರಿಗಳು**

| ಪಾಲುದಾರರು | ಜವಾಬ್ದಾರಿಗಳು |
|---|---|
| ಹಿರಿಯ ಅಧಿಕಾರಿಗಳು/ ಪಿ.ಎಮ್.ಯು | ಎ. ಮಾರ್ಗದರ್ಶಿ ತರಬೇತಿಗಾಗಿ ಕಾರ್ಯಕ್ರಮ, ಮಾರ್ಗಸೂಚಿ ಮತ್ತು ಪಠ್ಯಕ್ರಮವನ್ನು ವಿನ್ಯಾಸಗೊಳಿಸಿ<br>ಬಿ. ಮಾರ್ಗದರ್ಶಕರನ್ನು ಆಯ್ಕೆಮಾಡಿ<br>ಸಿ. ಮಾರ್ಗದರ್ಶಕರ ಸಾಮರ್ಥ್ಯವನ್ನು ನಿರ್ಮಿಸಿ<br>ಡಿ. ನಿರಂತರ ಸಾಮರ್ಥ್ಯ ನಿರ್ಮಾಣದೊಂದಿಗೆ ಮಾರ್ಗದರ್ಶಕರಿಗೆ ಬೆಂಬಲ ನೀಡಿ<br>ಇ. ನೈತಿಕ ಸ್ಥೈರ್ಯ ಕಡಿಮೆಯಾಗದಂತೆ ನೋಡಿಕೊಳ್ಳಲು ಮಾರ್ಗದರ್ಶನದ ಕುರಿತು ಅವರ ಆಲೋಚನೆಗಳನ್ನು ದಾಖಲು ಮಾಡಿ ಮತ್ತು ಹಂಚಿಕೊಳ್ಳಲು ಖ್ಯಾತ ಭಾಷಣಕಾರರನ್ನು ಆಹ್ವಾನಿಸಿ<br>ಎಫ್. ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನ ಮತ್ತು ಕಾರ್ಯಗತಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳಿ<br>ಜಿ. ಕಾರ್ಯಕ್ರಮವನ್ನು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಿ |
| ಮಾರ್ಗದರ್ಶಕ | ಎ. ಸಂಪೂರ್ಣ ಮಾರ್ಗದರ್ಶಿ ಪ್ರಮಾಣೀಕರಣ ಕಾರ್ಯಕ್ರಮ<br>ಬಿ. ಇತರ ಶಿಕ್ಷಕರಿಗೆ ಮಾರ್ಗದರ್ಶನ ರಚನೆಗಳನ್ನು ಆಯೋಜಿಸಿ ಮತ್ತು ಸುಗಮಗೊಳಿಸಿ<br>ಸಿ. ಕಲಿಕಾರ್ಥಿಗಳಿಂದ ಅವರ ಮಾರ್ಗದರ್ಶನ ಕೌಶಲ್ಯಗಳ ಕುರಿತು ಸಲಹೆಗಳು ಮತ್ತು ಪ್ರತಿಕ್ರಿಯೆಯನ್ನು ಪಡೆಯಿರಿ<br>ಡಿ. ನಿರಂತರವಾಗಿ ಸಾಮರ್ಥ್ಯವನ್ನು ಬೆಳೆಸಲು ತರಬೇತಿ/ ಕಾರ್ಯಾಗಾರಗಳಿಗೆ ಹಾಜರಾಗಿ |

| | |
|---|---|
| ಕಲಿಕಾರ್ಥಿ | ಎ. ಮಾರ್ಗದರ್ಶನ ರಚನೆಗಳಿಗೆ ಹಾಜರಾಗಿ<br>ಬಿ. ನಿರಂತರ ವೃತ್ತಿಪರ ಅಭಿವೃದ್ಧಿಗೆ ಕಲಿಯಿರಿ, ಹಂಚಿಕೊಳ್ಳಿ, ಪರಿಹರಿಸಿ ಮತ್ತು ಸಂಪರ್ಕ ಸಾಧಿಸಿ |

### 5.3.2 ಮಾರ್ಗದರ್ಶನ ಕಾರ್ಯಕ್ರಮದ ವಿವಿಧ ಹಂತಗಳ ಕಾರ್ಯಾಚರಣೆಗಳಿಗೆ ಶಿಫಾರಸ್ಸುಗಳು

#### ಎ. ಕಾರ್ಯಕ್ರಮವನ್ನು ಪರಿಚಯಿಸುವಿಕೆ

i. ಮಾರ್ಗದರ್ಶಕರಾಗಲು ದೇಶ/ರಾಜ್ಯ/ವ್ಯವಸ್ಥೆಯಾದ್ಯಂತ ವೃತ್ತಿಪರರಿಗೆ ಆಯ್ಕೆ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಿ

ii. ಮಾರ್ಗದರ್ಶಕರಾಗಿ ದಾಖಲಾಗಲು ಬೇಕಾದ ಮಾನದಂಡವನ್ನು ಬಿಡುಗಡೆ ಮಾಡಿ

iii. ವ್ಯವಸ್ಥೆ ಪಾಲುದಾರರಿಗೆ ಮಾನದಂಡ ಮತ್ತು ಆಯ್ಕೆಯ ಕಾಲಮಿತಿಯನ್ನು ಬಿಡುಗಡೆ ಮಾಡಿ

#### ಬಿ. ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆ (ಅನುಬಂಧ II ಅನ್ನು ನೋಡಿ)

ಮಾರ್ಗದರ್ಶಿ ಆಯ್ಕೆ ಪ್ರಕ್ರಿಯೆಯನ್ನು ಎರಡು ಹಂತಗಳಲ್ಲಿ ಕಾರ್ಯಗತಗೊಳಿಸಬಹುದು:

i. ಹಂತ 1: ಜನಸಂಖ್ಯಾ ವಿವರಗಳನ್ನು ಕೇಳುವ ಅರ್ಜಿ ನಮೂನೆ ಮತ್ತು ಆನ್‌ಲೈನ್ ಕಲಿಕೆಯ ಸೆಟ್ಟಿಂಗ್‌ನಲ್ಲಿ ಸವಾಲುಗಳನ್ನು ಪರಿಹರಿಸಲು ಅರ್ಜಿದಾರರ ಸಾಮರ್ಥ್ಯವನ್ನು ನಿರ್ಣಯಿಸುವ ಪ್ರಕರಣ ಅಧ್ಯಯನ. ಆಯ್ಕೆಯಾದ ಅರ್ಜಿದಾರರು ಹಂತ 2 ಕ್ಕೆ ಮುಂದುವರಿಯುತ್ತಾರೆ.

ii. ಹಂತ 2: ಸಂವಾದ ಕೌಶಲ್ಯಗಳು, ಸ್ಫೂರ್ತಿ ನೀಡುವ ಸಾಮರ್ಥ್ಯ, ಡೊಮೇನ್ ಜ್ಞಾನ ಇತ್ಯಾದಿಗಳನ್ನು ನಿರ್ಣಯಿಸಲು ಒಂದು ಸಂವಾದ/ಸಂದರ್ಶನ. ಸಂದರ್ಶನ ಪ್ರಕ್ರಿಯೆಯನ್ನು ತಜ್ಞರ ಸಮಿತಿಯು ನಡೆಸುತ್ತದೆ. ಆಯ್ಕೆಯಾದ ಅರ್ಜಿದಾರರನ್ನು ಮಾರ್ಗದರ್ಶನ ವೇದಿಕೆಯಲ್ಲಿ ಮಾರ್ಗದರ್ಶಕರಾಗಿ ಸೇರಿಸಿಕೊಳ್ಳಲಾಗುತ್ತದೆ.

*ಒಂದು ನಿರ್ದಿಷ್ಟ ಡೊಮೇನ್‌ನಲ್ಲಿ ಹೆಸರಾಂತ ಮತ್ತು ಅತ್ಯುತ್ತಮ ವೃತ್ತಿಪರರನ್ನು ಎನ್.ಸಿ.ಟಿ.ಇ ಮೂಲಕ ನೇರವಾಗಿ ಎನ್.ಎಮ್.ಎಮ್ ಗೆ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ.*

#### ಸಿ. ಮಾರ್ಗದರ್ಶಕ ಸಾಮರ್ಥ್ಯದ ನಿರ್ಮಾಣ

i. ಮಾರ್ಗದರ್ಶಕರು ಪರಿಣಾಮಕಾರಿಯಾಗಿ ಮಾರ್ಗದರ್ಶನ ಮಾಡಲು ಅಗತ್ಯವಿರುವ ಪರಿಕಲ್ಪನೆಗಳು, ಕೌಶಲ್ಯಗಳು ಮತ್ತು ತಂತ್ರಜ್ಞಾನದ ಬಗ್ಗೆ ಜ್ಞಾನವನ್ನು ನಿರ್ಮಿಸುವ ಗುರಿಯನ್ನು ಹೊಂದಿರುವ ಕಾರ್ಯಾಗಾರಗಳನ್ನು ವಿನ್ಯಾಸ ಮಾಡಿ. ಉದಾ. ಸುಗಮಗೊಳಿಸುವ ಕೌಶಲ್ಯಗಳು, ತನಿಖೆಯ ಪ್ರಶ್ನೆಗಳನ್ನು ಕೇಳುವುದು, ಕಲಿಕಾರ್ಥಿಗಳ ಗುಂಪಿನೊಳಗೆ ಸಂಸ್ಕೃತಿಯನ್ನು ನಿರ್ಮಿಸುವುದು ಇತ್ಯಾದಿ.
ii. ಮಾರ್ಗದರ್ಶಕ ಸಂವಾದಗಳ ಮೊದಲು ನಡೆಸಬೇಕಾದ ಕಾರ್ಯಾಗಾರಗಳು ಪ್ರವೇಶಾತಿ/ಸಾಮರ್ಥ್ಯ ನಿರ್ಮಾಣಕ್ಕಾಗಿ ಕ್ಷೇತ್ರ ತಜ್ಞರನ್ನು ಆಹ್ವಾನಿಸುವ ಮೂಲಕ ಪ್ರಾರಂಭವಾಗುತ್ತವೆ, ಮಾಹಿತಿ ವೀಡಿಯೊಗಳು ಮತ್ತು ಚಟುವಟಿಕೆ ಇತ್ಯಾದಿಗಳನ್ನು ಯೋಜಿಸಲಾಗಿದೆ.

#### ಡಿ. ಮಾರ್ಗದರ್ಶಕರನ್ನು ಸೇರಿಸಿಕೊಳ್ಳುವ (ಆನ್‌ಬೋರ್ಡಿಂಗ್) ಪ್ರಕ್ರಿಯೆ

i. ಮಾರ್ಗದರ್ಶಕರನ್ನು ಮಾರ್ಗದರ್ಶಿ ವೇದಿಕೆಗೆ (ಎನ್.ಎಮ್.ಎಮ್ ಪೋರ್ಟಲ್/ಮೊಬೈಲ್ ಅಪ್ಲಿಕೇಶನ್) ಸೇರಿಸಿಕೊಳ್ಳಲು ಮಾರ್ಗಸೂಚಿಗಳನ್ನು ತಯಾರಿಸಿ ಮತ್ತು ಹಂಚಿಕೊಳ್ಳಿ

ii. ಮಾರ್ಗದರ್ಶಕರು ತಮ್ಮ ಪ್ರೊಫೈಲ್‌ಗಳನ್ನು ರಚಿಸುತ್ತಾರೆ ಮತ್ತು ಅಗತ್ಯ ಮಾಹಿತಿಯನ್ನು ಒದಗಿಸುತ್ತಾರೆ

#### ಇ. ಕಲಿಕಾರ್ಥಿಗಳನ್ನು ಸೇರಿಸಿಕೊಳ್ಳುವ (ಆನ್‌ಬೋರ್ಡಿಂಗ್) ಪ್ರಕ್ರಿಯೆ

i. ಮಾರ್ಗದರ್ಶನ ವೇದಿಕೆಯಲ್ಲಿ ಕಲಿಕಾರ್ಥಿಗಳನ್ನು ಸೇರಿಸಿಕೊಳ್ಳಲು ಮಾರ್ಗಸೂಚಿಗಳನ್ನು ರೂಪಿಸಿ ಮತ್ತು ಹಂಚಿಕೊಳ್ಳಿ

ii. ಕಲಿಕಾರ್ಥಿ-ಸೇರಿಸಿಕೊಳ್ಳುವ ಪ್ರಕ್ರಿಯೆಯನ್ನು ಟ್ರ್ಯಾಕ್ ಮಾಡಲು ದಾಖಲೆಗಳನ್ನು ನಿರ್ವಹಿಸಿ

### ಎಫ್. ಮಾರ್ಗದರ್ಶನ ಸಂವಾದಗಳು

i. ಮಾರ್ಗದರ್ಶಕರು ವೇದಿಕೆಯಲ್ಲಿ ಗುಂಪು ಮಾರ್ಗದರ್ಶನದ ಅವಧಿಗಳನ್ನು ನಿಗದಿಪಡಿಸಬಹುದು ಮತ್ತು ಆತಿಥ್ಯ ವಹಿಸಬಹುದು.

ii. ಮಾರ್ಗದರ್ಶಕರು ವೇದಿಕೆಯಲ್ಲಿ ಗುಂಪು ಮಾರ್ಗದರ್ಶನದ ಅವಧಿಗಳು ಮತ್ತು ಮಾರ್ಗದರ್ಶಕರನ್ನು ಹುಡುಕಬಹುದು ಮತ್ತು ಈ ಅವಧಿಗಳಿಗೆ ಹಾಜರಾಗಲು ನೋಂದಾಯಿಸಿಕೊಳ್ಳಬಹುದು

iii. ಮಾರ್ಗದರ್ಶಕರು ತಮ್ಮ ಪ್ರಶ್ನೆಗಳೊಂದಿಗೆ ಸಂಬಂಧಪಟ್ಟ ಡೊಮೇನ್‌ನ ಮಾರ್ಗದರ್ಶಕರನ್ನು ಪ್ರತ್ಯೇಕವಾಗಿ ಸಂಪರ್ಕಿಸಬಹುದು. ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳು ಮಾರ್ಗದರ್ಶನದ ಸಂವಾದಕ್ಕಾಗಿ ಸಮಯ ಮತ್ತು ಚೌಕಟ್ಟನ್ನು ಪರಸ್ಪರ ನಿರ್ಧರಿಸಬಹುದು

iv. ಕಲಿಕಾರ್ಥಿಗಳು ಮಾರ್ಗದರ್ಶಕರಿಗೆ ರೇಟಿಂಗ್‌ಗಳು ಮತ್ತು ಪ್ರತಿಕ್ರಿಯೆಯನ್ನು ನೀಡಬಹುದು

ಸೇರಿಸಿಕೊಳ್ಳುವ (ಆನ್‌ಬೋರ್ಡಿಂಗ್) ಅಥವಾ ಮಾರ್ಗದರ್ಶನ ಸಂವಾದಗಳಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ಯಾವುದೇ ತಾಂತ್ರಿಕ ದೋಷವನ್ನು ಪರಿಹರಿಸುವಲ್ಲಿ ಐಟಿ ತಂಡವು ಬೆಂಬಲಿಸುತ್ತದೆ.

### ಜಿ. ಮಾರ್ಗದರ್ಶನ ಮತ್ತು ವಿಶ್ಲೇಷಣೆ

i. ವೇದಿಕೆಯಲ್ಲಿ ಮಾರ್ಗದರ್ಶನ ಒಳಗೊಳ್ಳುವಿಕೆಯನ್ನು ಟ್ರ್ಯಾಕ್ ಮಾಡಿ ಮತ್ತು ಅಗತ್ಯವಿರುವಂತೆ ಮಾಸಿಕ/ತ್ರೈಮಾಸಿಕ ವರದಿಗಳನ್ನು ಸಿದ್ಧಪಡಿಸಿ.

ii. ಮಾರ್ಗದರ್ಶಕ ಕಾರ್ಯಕ್ರಮವನ್ನು ವಿಶ್ಲೇಷಿಸಲು ಎಲ್ಲಾ ವರದಿಗಳನ್ನು ಟ್ರ್ಯಾಕ್ ಮಾಡಿ ಮತ್ತು ಒಟ್ಟು ಸೇರಿಸಿ ಮತ್ತು ಅಗತ್ಯವಿರುವಂತೆ ಕ್ರಮಗಳನ್ನು ಸಕ್ರಿಯಗೊಳಿಸಲು ಸೂಚಿಸಿ

## 5.4 ಕಾರ್ಯಕ್ರಮದ ಮೌಲ್ಯಮಾಪನ


ನಿರಂತರ ಗುಣಮಟ್ಟದ ಸುಧಾರಣೆಗಾಗಿ ಮಾರ್ಗದರ್ಶನ ಕಾರ್ಯಕ್ರಮದ ಮೌಲ್ಯಮಾಪನಕ್ಕೆ ಈ ಕೆಳಗಿನವುಗಳು ಅಗತ್ಯವಿದೆ:

ಎ. ಕಾರ್ಯಕ್ರಮದ ಪ್ರಗತಿಯನ್ನು ಅಳೆಯುವ ಯೋಜನೆ

ಬಿ. ಕಾರ್ಯಕ್ರಮದ ನಿರೀಕ್ಷಿತ ಫಲಿತಾಂಶಗಳನ್ನು ಅಳೆಯುವ ಪ್ರಕ್ರಿಯೆ

ಸಿ. ಕಾರ್ಯಕ್ರಮದ ಮೌಲ್ಯಮಾಪನ, ಸಂಶೋಧನೆಗಳು ಮತ್ತು ಪ್ರಸಾರದ ಕುರಿತು ಸಮಗ್ರ ವರದಿ.

ಕಾರ್ಯಕ್ರಮದ ಯಶಸ್ಸನ್ನು ಮೂರು ಮೆಟ್ರಿಕ್ಸ್'ಗಳನ್ನು ಮೌಲ್ಯಮಾಪನ ಮಾಡುವ ಮೂಲಕ ಅಳೆಯಬಹುದು:




ಚಿತ್ರ 5.2: ಮಾರ್ಗದರ್ಶನಕ್ಕಾಗಿ ಮೌಲ್ಯಮಾಪನದ ಮೆಟ್ರಿಕ್ಸ್

**ಎ. ಪ್ರವೇಶ:** ಮಾರ್ಗದರ್ಶನ ಕಾರ್ಯಕ್ರಮವು ಸೇವೆ ಸಲ್ಲಿಸಲು ಉದ್ದೇಶಿಸಿರುವ ಅಗತ್ಯ ಎಲ್ಲಾ ಪಾಲುದಾರರನ್ನು ಒಳಗೊಂಡಿದೆಯೇ?

ಪ್ರವೇಶ, ಇದು ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡುವಾಗ ಗಣನೆಗೆ ತೆಗೆದುಕೊಳ್ಳಬೇಕಾದ ಅತ್ಯಂತ ನಿರ್ಣಾಯಕ ಅಂಶವಾಗಿದೆ. ಕಸ್ಟಮೈಸ್ ಮಾಡಿದ ಮತ್ತು ಸಮಗ್ರವಾದ ವೃತ್ತಿಪರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಲು ಅವಕಾಶವನ್ನು ಒದಗಿಸುವುದರಿಂದ ಕೇಡರ್‌ನ ಎಲ್ಲಾ ಸದಸ್ಯರು ಮಾರ್ಗದರ್ಶನಕ್ಕೆ ಪ್ರವೇಶವನ್ನು ಹೊಂದಿರಬೇಕು. ಪಾಲುದಾರರ ಅಸ್ತಿತ್ವದಲ್ಲಿರುವ ಡೇಟಾಬೇಸ್‌ಗಳಲ್ಲಿ ಕವರೇಜ್ ಅನ್ನು ನೋಡುವ ಮೂಲಕ ಈ ಸೂಚಕವನ್ನು ಮೌಲ್ಯಮಾಪನ ಮಾಡಬೇಕು. ಇದು ಹಲವಾರು ಸನ್ನಿವೇಶಗಳನ್ನು ಹೊಂದಿರುವ ದೇಶದಲ್ಲಿ ಯಶಸ್ವಿ ಅನುಷ್ಠಾನಕ್ಕೆ ಅಗತ್ಯವಾದ ಒಳಗೊಳ್ಳುವಿಕೆ, ವೈವಿಧ್ಯತೆ, ಮಾಪಕತೆ, ಭಾಷೆ ಮತ್ತು ಪ್ರವೇಶದಂತಹ ಪ್ರಮುಖ ಅಂಶಗಳನ್ನು ಸಹ ಒಳಗೊಂಡಿರಬೇಕು.

ಪಾಲುದಾರರಿಗೆ ಮಾರ್ಗದರ್ಶನವು ಅತ್ಯಗತ್ಯವಾಗಿ ಬೇಕು ಅಥವಾ ಅದೊಂದು ಆಯ್ಕೆಯ ಅವಕಾಶವ ಎಂಬುದನ್ನು ಕಾರ್ಯಕ್ರಮವು ಸೂಚಿಸಬಹುದಾದರೆ, ಈ ಮುಂದಿನ ಪ್ರಶ್ನೆ ಕೇಳುವುದು ಮುಖ್ಯವಾಗಿರುತ್ತದೆ - "ಮಾರ್ಗದರ್ಶನದಿಂದ ಪ್ರಯೋಜನ ಪಡೆಯುವ ಪಾಲುದಾರರೇ ಹೆಚ್ಚಾಗಿ ಕಾರ್ಯಕ್ರಮಕ್ಕೆ ಪ್ರವೇಶಿಸುತ್ತಾರೆಯೇ?" ಇದು ಮಾರ್ಗದರ್ಶನ ಕಾರ್ಯಕ್ರಮವು ಸಲಹಾಪಟ್ಟಿ ಮತ್ತು ಆಯ್ಕೆ-ಆಧಾರಿತ ಸಂಯೋಜನೆಯಾಗಿರಬೇಕು. ಯಾವುದೇ ವ್ಯವಸ್ಥೆಯಲ್ಲಿ ಹೊಸ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಸವಾಲಿನ ಸಂಗತಿಯಾಗಿದೆ ಮತ್ತು ಲಭ್ಯತೆ ಹಾಗೂ ಪ್ರವೇಶಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವಂತೆ ಕ್ರಮಗಳನ್ನು ಜಾರಿಗೊಳಿಸಬೇಕು.

**ಬಿ. ತೃಪ್ತಿ:** ಮಾರ್ಗದರ್ಶಕರು, ಕಲಿಕಾರ್ಥಿಗಳು ಮತ್ತು ಅವರಿಗೆ ಸಂಬಂಧಿಸಿದ ಶಾಲೆಗಳು/ಸಂಸ್ಥೆಗಳು ಕಾರ್ಯಕ್ರಮದ ಕುರಿತು ಎಷ್ಟು ತೃಪ್ತರಾಗಿದ್ದಾರೆ?

ಈ ಮೆಟ್ರಿಕ್ಸ್, ಮಾರ್ಗದರ್ಶನದ ಸಂವಾದಗಳ ಗುಣಮಟ್ಟದ ಬಗ್ಗೆ ಗಮನ ಹರಿಸುತ್ತದೆ. ಈ ಕಾರ್ಯಕ್ರಮವು ಮುಂದುವರಿಯುತ್ತದೆ ಮತ್ತು ಅದನ್ನು ಎಲ್ಲರಿಗೂ ಬೇಕೆನಿಸುವ ಕಾರ್ಯಕ್ರಮವಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಭಾಗವಹಿಸುವ ಎಲ್ಲಾ ಪಾಲುದಾರರ ತೃಪ್ತಿ ಅತ್ಯಗತ್ಯ. ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ತೃಪ್ತಿಯನ್ನು ಆವರ್ತಕ ಸಮೀಕ್ಷೆಗಳನ್ನು ಬಳಸಿಕೊಂಡು

ಅವರ ವೃತ್ತಿಪರ ಜೀವನಕ್ಕೆ ಈ ಕಾರ್ಯಕ್ರಮದಿಂದ ಸೇರಿಸಲಾದ ಮೌಲ್ಯ ಮತ್ತು ಅವರು ವ್ಯಯ ಮಾಡಿದ ಸಮಯಕ್ಕೆ ಅವರು ಪಡೆಯುವ ಆದಾಯದ ಬಗ್ಗೆ ಕೇಳಬಹುದು. ಪಾಲುದಾರ ತೃಪ್ತಿಯನ್ನು ಎರಡು ಪ್ರತ್ಯೇಕ ಮೆಟ್ರಿಕ್ಸ್ ಳನ್ನು ಬಳಸಿ ಅಳೆಯಬಹುದು-

i. ಸುಗಮ ಸಂವಾದಗಳ ಗುಣಮಟ್ಟ - ಇದು ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವಿನ ಮಾರ್ಗದರ್ಶನ ಸಂಭಾಷಣೆಗಳ ರಚನೆಯನ್ನು ಆನಂದಿಸುತ್ತಿದ್ದಾರೆ ಮತ್ತು ಈ ಚಟುವಟಿಕೆಗಳಲ್ಲಿ ಕಳೆಯುವ ಸಮಯವನ್ನು ಗರಿಷ್ಠಗೊಳಿಸಲು ಎರಡೂ ಕಡೆಯಿಂದ ಸಾಕಷ್ಟು ತೊಡಗಿಸಿಕೊಳ್ಳುವಿಕೆ ಅಗತ್ಯವಿದೆ ಎಂದು ಖಚಿತಪಡಿಸಿಕೊಳ್ಳುವುದು.

ii ಸಂವಾದಗಳ ಮೂಲಕ ನೀಡಲಾದ ವಿಷಯದ ಗುಣಮಟ್ಟ - ಈ ಸಂವಾದಗಳ ಸಮಯದಲ್ಲಿ ನೀಡಲಾದ ವಿಷಯವು ಪಾಲುದಾರರ ವೃತ್ತಿಪರ ಜೀವನಕ್ಕೆ ಮೌಲ್ಯವನ್ನು ಸೇರಿಸುತ್ತದೆ ಎಂದು ಖಚಿತಪಡಿಸಿಕೊಳ್ಳುವುದು. ಪಾಲುದಾರರು ತಮ್ಮ ಅಸ್ತಿತ್ವದಲ್ಲಿರುವ ಜ್ಞಾನದ ಮೂಲದೊಂದಿಗೆ ಸಂಪರ್ಕಗಳನ್ನು ಮಾಡಲು ಸಾಕಷ್ಟು ತಿಳಿದುಕೊಂಡಿರಬೇಕು ಮತ್ತು ಅವರ ಆಲೋಚನೆಯನ್ನು ಹೊಸ ದಿಕ್ಕುಗಳಲ್ಲಿ ಪಸರಿಸಲು ಸಾಕಷ್ಟು ಸವಾಲು ಎದುರಾಗಲಿಗೆ ಎಂದು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು.

**ಸಿ. ಪರಿಣಾಮ:** ಶಾಲೆ/ಸಂಸ್ಥೆಯ ಮೇಲೆ ಕಾರ್ಯಕ್ರಮದ ಪ್ರಭಾವವೇನು?

ಪ್ರಭಾವಕ್ಕಾಗಿ ಮಾರ್ಗದರ್ಶನ ವ್ಯವಸ್ಥೆಯನ್ನು ನಿರ್ಣಯಿಸುವುದರಲ್ಲಿ ಬಹುಶಃ ಈ ಮೆಟ್ರಿಕ್ಸ್ ಕಠಿಣವಾದ ಅಳತೆಗೋಲಾಗಿದೆ. ಮಾರ್ಗದರ್ಶನ ಕಾರ್ಯಕ್ರಮದ ಉದ್ದೇಶವನ್ನು ಅವಲಂಬಿಸಿ, ವಿದ್ಯಾರ್ಥಿಗಳ ಮೇಲೆ ಪ್ರಭಾವ, ಶಾಲಾ ಸಂಸ್ಕೃತಿಯಲ್ಲಿನ ಬದಲಾವಣೆಗಳು ಇತ್ಯಾದಿಗಳನ್ನು ಮೌಲ್ಯಮಾಪನ ಮಾಡಬೇಕಾಗಬಹುದು. ಇದು ದೀರ್ಘಾವಧಿಯ ಮೆಟ್ರಿಕ್ಸ್ ಅನ್ನು ಅಳೆಯಲು ಮತ್ತು ಕಾರ್ಯಕ್ರಮದ ಆರಂಭಿಕ ಹಂತಗಳಲ್ಲಿ ಕಾರ್ಯಸಾಧ್ಯವಾಗದಿರಬಹುದು, ದಿನನಿತ್ಯದ ಅಭ್ಯಾಸಗಳ ಪ್ರತಿಕ್ರಿಯೆ ಮೇಲಿನ ಪ್ರಭಾವವು ಗುರಿಗಳನ್ನು ಸಾಧಿಸುವುದರೊಂದಿಗೆ ಲಯದಲ್ಲಿ (ಟ್ರ್ಯಾಕ್‌ನಲ್ಲಿ) ಉಳಿಯಲು ಕಾರ್ಯಕ್ರಮವನ್ನು ಮಾರ್ಪಾಡು ಮಾಡುವುದಕ್ಕೆ ಸಹಾಯ ಮಾಡುತ್ತದೆ.

ದೀರ್ಘಾವಧಿಯಲ್ಲಿ, ಕಾರ್ಯಕ್ರಮದ ಯಶಸ್ಸು ಮತ್ತು ಅದರೊಂದಿಗೆ ಮುಂದುವರಿಯುವ ನಿರ್ಧಾರಗಳು ಕಾರ್ಯಕ್ರಮದಿಂದ ರಚಿಸಲ್ಪಟ್ಟ ಪ್ರಭಾವವನ್ನು ಆಧರಿಸಿರಬೇಕು. ಮಾರ್ಗದರ್ಶಕ ಕಾರ್ಯಕ್ರಮದಲ್ಲಿ ನಿರ್ದಿಷ್ಟ ಸಮಯದ ನಂತರವೇ ಇದನ್ನು ಅಳೆಯಬಹುದಾದರೂ, ಇದು ಕಾರ್ಯಕ್ರಮದ ಯಶಸ್ಸಿನ ಪ್ರಮುಖ ಸೂಚಕವಾಗಿದೆ. ಶಾಲೆಯ ಸುಧಾರಣೆ, ಹೊಸ ಕೆಲಸದ ಸಂಸ್ಕೃತಿಗಾಗಿ ಪರಿವರ್ತನೆಯ ಸಿದ್ಧತೆ, ಸುಧಾರಿತ ಕಲಿಕೆಯ ಫಲಿತಾಂಶಗಳು ಇತ್ಯಾದಿಗಳಂತಹ ಪ್ರಭಾವವನ್ನು ಅಳೆಯುವುದು ಸರಿಯಾದ ಯಶಸ್ಸಿನ ಸೂಚಕಗಳನ್ನು ಬಳಸಿ ಮತ್ತು ಕಾರ್ಯಕ್ರಮವನ್ನು ಮಾರ್ಪಾಡು ಮಾಡಲು ಸಾಕಷ್ಟು ಬಾರಿ ಮಾಡಬೇಕಾಗುತ್ತದೆ. ಕೆಲವು ಉದಾಹರಣೆಗಳು ಇಲ್ಲಿವೆ:

**ಕೋಷ್ಟಕ 5.2: ಉದ್ದೇಶ ಮತ್ತು ಪರಿಣಾಮದ ಸೂಚಕ**

| ಮಾರ್ಗದರ್ಶನ ಕಾರ್ಯಕ್ರಮದ ಉದ್ದೇಶ | ಬಳಸಬಹುದಾದ ಪರಿಣಾಮ ಸೂಚಕಗಳು |
|---|---|
| ಸೇವಾಪೂರ್ವ ಶಿಕ್ಷಕರನ್ನು ಕಾರ್ಯಪಡೆಗೆ ಪರಿವರ್ತಿಸುವುದನ್ನು ಸುಲಭಗೊಳಿಸಲು, ಸೇವಾಪೂರ್ವ ಶಿಕ್ಷಕರಿಗೆ ಸೇವಾನಿರತ ಶಿಕ್ಷಕರಿಂದ ಮಾರ್ಗದರ್ಶನ ನೀಡಲಾಗುತ್ತದೆ. | ಎ) ಕಾರ್ಯಪಡೆಗೆ ಸೇರಿದ ನಂತರ ಶಿಕ್ಷಕರ ಸಂತೃಪ್ತಿಯಲ್ಲಿ ಆದ ಶೇಕಡಾವಾರು ಹೆಚ್ಚಳ.<br>ಬಿ) ಹೊಸ ಶಿಕ್ಷಕರ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳಲ್ಲಿ ಶೇಕಡಾವಾರು ಹೆಚ್ಚಳ<br>ಸಿ) ಹೊಸ ಶಿಕ್ಷಕರ ವಿದ್ಯಾರ್ಥಿಗಳ ತೃಪ್ತಿಯ ಮಟ್ಟಗಳಲ್ಲಿ ಶೇಕಡಾ ಹೆಚ್ಚಳ<br>ಡಿ) ಸೇವೆಯಲ್ಲಿರುವ ಶಿಕ್ಷಕ-ಮಾರ್ಗದರ್ಶಿಗಳಿಗೆ ಕಾರ್ಯಕ್ಷಮತೆ ಸೂಚಕಗಳಲ್ಲಿ ಶೇಕಡಾವಾರು ಹೆಚ್ಚಳ |

| | |
|---|---|
| ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸಲು, ಕ್ಲಸ್ಟರ್‌ನಲ್ಲಿರುವ ಶಿಕ್ಷಕರು ಸಹಪಾಠಿ-ಮಾರ್ಗದರ್ಶನಗಳ ವಲಯಗಳನ್ನು ರಚಿಸುತ್ತಾರೆ. | ಎ) ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆ ಮೌಲ್ಯಮಾಪನಗಳಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಶೇಕಡಾವಾರು ಹೆಚ್ಚಳ<br>ಬಿ) ಸೂಕ್ತವಾದ ಬೋಧನಾ-ಕಲಿಕೆ ಸಾಮಗ್ರಿಗಳ ಬಳಕೆಯಲ್ಲಿ ಶೇಕಡಾವಾರು ಹೆಚ್ಚಳ ಮತ್ತು ತರಗತಿಯ ಅವಲೋಕನಗಳ ಸಮಯದಲ್ಲಿ ದಾಖಲಾದ ಕಾರ್ಯಕ್ಷಮತೆ<br>ಸಿ) ಶಿಕ್ಷಕರ ತೃಪ್ತಿ ಮತ್ತು ಸಮುದಾಯದ ಭಾವನೆಯಲ್ಲಿ ಶೇಕಡಾ ಹೆಚ್ಚಳ |

ಎನ್.ಎಮ್.ಎಮ್, ಎಸ್.ಡಿ.ಜಿ 4 (ಗುಣಮಟ್ಟದ ಶಿಕ್ಷಣ) ನಿಂದ ಸ್ಫೂರ್ತಿ ಪಡೆದಿದ್ದರೂ, ಎಸ್.ಡಿ.ಜಿ ಅನುಷ್ಠಾನದ ಕಾಲಮಿತಿಗೆ ಸೀಮಿತವಾಗಿಲ್ಲ. ವ್ಯವಸ್ಥೆಯೊಳಗೆ ಮಾರ್ಗದರ್ಶನಕ್ಕಾಗಿ ನಡೆಯುತ್ತಿರುವ ಮತ್ತು ನಿರಂತರ ಪ್ರಕ್ರಿಯೆಗಳನ್ನು ರಚಿಸುವ ಉದ್ದೇಶದಿಂದ ಯೋಜನೆಯನ್ನು ಪರಿಚಯಿಸಲಾಗುತ್ತಿದೆ. ಮೇಲೆ ಪಟ್ಟಿ ಮಾಡಲಾದ ಪ್ರಭಾವದ ಸೂಚಕಗಳು ಮಾರ್ಗದರ್ಶಿ ಕಾರ್ಯಕ್ರಮದ ಉದ್ದೇಶಗಳು ಮತ್ತು ಉದ್ದೇಶಿತ ಗುರಿಗಳಿಗೆ ಸಮಯೋಚಿತ ಪರಿಷ್ಕರಣೆಗಳನ್ನು ನಡೆಸಲು ಸಹಾಯಕವಾಗುತ್ತವೆ.

ಬದಲಾವಣೆಯನ್ನು ಹೆಚ್ಚಿಸಲು ಧನಾತ್ಮಕ ಬಲವರ್ಧನೆಯನ್ನು ಬಳಸುವ ಪ್ರಯತ್ನದಲ್ಲಿ, ಧನಾತ್ಮಕ ಪ್ರಭಾವಕ್ಕೆ ಕಾರಣವಾಗುವ ಎಲ್ಲಾ ಪಾಲುದಾರರ ಕೆಲಸವನ್ನು ಪುರಸ್ಕರಿಸಬೇಕು ಮತ್ತು ಪ್ರೋತ್ಸಾಹಿಸಬೇಕು. ಮಾರ್ಗದರ್ಶಿ ಕಾರ್ಯಕ್ರಮದ ಇತರ ಪ್ರಯೋಜನಗಳ ಜೊತೆಗೆ, ಬದಲಾವಣೆ ಮತ್ತು ಧನಾತ್ಮಕ ಪ್ರಭಾವದ ಮೇಲೆ ನಿರಂತರ ಗಮನವನ್ನು ಇದು ಖಚಿತಪಡಿಸುತ್ತದೆ. ಅಂತಿಮವಾಗಿ, ಭಾರತದಲ್ಲಿ ಶಿಕ್ಷಣಕ್ಕೆ ಧನಾತ್ಮಕ ಬದಲಾವಣೆಗಳನ್ನು ತರುವ ಸಾಮರ್ಥ್ಯದ ಮೂಲಕ ಮಾರ್ಗದರ್ಶನ ಕಾರ್ಯಕ್ರಮವನ್ನು ಮೌಲ್ಯಮಾಪನ ಮಾಡಬೇಕು.

## 5.5 ಸಾಂಸ್ಥೀಕಿಕರಣ

ಸಾಂಸ್ಥಿಕ, ಸಂಘಟನಾತ್ಮಕ ಮತ್ತು ವೈಯಕ್ತಿಕ ವೃತ್ತಿಪರ ಗುರಿಗಳನ್ನು ಸಾಧಿಸಲು ಮಾರ್ಗದರ್ಶನವು ಉತ್ತಮ ದಾರಿಯಾಗಿದೆ. ಇದು ವ್ಯವಸ್ಥೆಯ ಸಾಮೂಹಿಕ ಮೌಲ್ಯದ ಕೊಡುಗೆಯನ್ನು ಸುಧಾರಿಸಲು ಪರಿಸರ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಸಂಪನ್ಮೂಲಗಳನ್ನು ನಿಯಂತ್ರಿಸುತ್ತದೆ ಮತ್ತು ಶಿಕ್ಷಣ ವ್ಯವಸ್ಥೆಯ ಹಂತಗಳಲ್ಲಿ ಅತ್ಯಗತ್ಯ ಚಟುವಟಿಕೆಯಾಗಿ ಗ್ರಹಿಸಬೇಕು. ಈ ಅಗತ್ಯ ಚಟುವಟಿಕೆಯು ಎಲ್ಲಾ ಪಾಲುದಾರರಿಗೆ ದೈನಂದಿನ ಅಭ್ಯಾಸಗಳಲ್ಲಿ ಸಮರ್ಥನೀಯವಾಗಿ ಸಂಯೋಜಿಸಲ್ಪಟ್ಟ ನಿರಂತರ ಪ್ರಕ್ರಿಯೆಯಾಗಿರಬೇಕು.

ಮಾರ್ಗದರ್ಶನ ಕಾರ್ಯಕ್ರಮವು ಅದರ ಫಲಾನುಭವಿಗಳ ನಡುವೆ ಸೌಹಾರ್ದತೆಯ ಭಾವನೆಯಿಂದಾಗಿ ಆರಂಭದಲ್ಲಿ ಪಾಲುದಾರರಲ್ಲಿ ಸಾಕಷ್ಟು ತೃಪ್ತಿಯನ್ನು ನೀಡುತ್ತದೆ. ಆದಾಗ್ಯೂ, ಮಾರ್ಗದರ್ಶಕ, ಕಲಿಕಾರ್ಥಿ ಮತ್ತು ಆಡಳಿತಕ್ಕಾಗಿ ಮಾರ್ಗದರ್ಶನ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಸಾಕಷ್ಟು ಸಮಯ ಮತ್ತು ಶ್ರಮವನ್ನು ತೆಗೆದುಕೊಳ್ಳುತ್ತದೆ. ಅಂತಹ ಕಾರ್ಯಕ್ರಮವನ್ನು ಮುಂದುವರಿಸಲು, ಮಾರ್ಗದರ್ಶನ ಕಾರ್ಯಕ್ರಮವನ್ನು ಸಾಂಸ್ಥಿಕಗೊಳಿಸಬೇಕಾಗಿದೆ.

ಸಾಂಸ್ಥಿಕೀಕರಣವು ಸಂಸ್ಥೆ ಅಥವಾ ಸಂಸ್ಕೃತಿಯಲ್ಲಿ ಯಾವುದನ್ನಾದರೂ ಸಂಪ್ರದಾಯ ಅಥವಾ ರೂಢಿಯಾಗಿ ಸ್ಥಾಪಿಸುವ ಕ್ರಿಯೆಯಾಗಿದೆ. ಮಾರ್ಗದರ್ಶನ ಕಾರ್ಯಕ್ರಮದ ಎಲ್ಲಾ ರಚನೆಗಳನ್ನು ಸಾಂಸ್ಥಿಕ ಅಭ್ಯಾಸಗಳು ಮತ್ತು ಪ್ರಯೋಜನಗಳಿಗೆ ಜೋಡಣೆ ಮಾಡಬೇಕು, ಅದು ಸುಸ್ಥಿರವಾಗಿ, ಗಮನಾರ್ಹ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತದೆ. ಯಾವುದೇ ಹಂತದಲ್ಲಿ ಮಾರ್ಗದರ್ಶನವನ್ನು ಯಶಸ್ವಿಯಾಗಿ ಸಾಂಸ್ಥಿಕಗೊಳಿಸಲು ಎರಡು ಮಾರ್ಗಗಳಿವೆ.

## 5.6 ಪ್ರೋತ್ಸಾಹೀಕರಣ

ಶಿಕ್ಷಣ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ರಚನೆಗಳಲ್ಲಿ ಮಾರ್ಗದರ್ಶಕರು, ಕಲಿಕಾರ್ಥಿಗಳು ಮತ್ತು ಅದರ ಸಂಬಂಧಿತ ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಹಾಯ ಮಾಡುವ ಭಾಗವಹಿಸುವಿಕೆಗಾಗಿ ವಿತ್ತೀಯವಲ್ಲದ ಪ್ರೋತ್ಸಾಹವನ್ನು ಕಾರ್ಯಕ್ರಮಗಳು ಬಳಸಿಕೊಳ್ಳುತ್ತವೆ.

ಮಾರ್ಗದರ್ಶಕರು ಅಥವಾ ಕಲಿಕಾರ್ಥಿಗಳನ್ನು ಹೇಗೆ ಪ್ರೋತ್ಸಾಹಿಸಬಹುದು ಎಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ:

**ಕೋಷ್ಟಕ 5.3: ಪ್ರೋತ್ಸಾಹಕಗಳ ವಿಧಗಳು**

| ಉದಾಹರಣೆ ಸಂಖ್ಯೆ. | ಪ್ರೋತ್ಸಾಹಕದ ವಿಧ | ವಿವರ |
|---|---|---|
| **ಉದಾಹರಣೆ 1** | ಮಾರ್ಗದರ್ಶಕರಿಗೆ ಮಾನ್ಯತೆ | ಎ) ಅತ್ಯುತ್ತಮ-ಕಾರ್ಯನಿರ್ವಹಣೆಯ ಮಾರ್ಗದರ್ಶಕರಿಗೆ ಪ್ರಮುಖ ಸಂಸ್ಥೆಯಿಂದ ವಿಶೇಷ ನಾಯಕತ್ವ ಅಭಿವೃದ್ಧಿ ಕೋರ್ಸ್ ಅನ್ನು ಪ್ರವೇಶಿಸಲು ಅವಕಾಶ.<br>ಬಿ) ಎನ್.ಎಮ್.ಎಮ್ ಅನ್ನು ಶಿಕ್ಷಕರಿಗಾಗಿ ರಾಷ್ಟ್ರೀಯ ವೃತ್ತಿಪರ ಮಾನದಂಡಗಳೊಂದಿಗೆ (ಎನ್.ಪಿ.ಎಸ್.ಟಿ) ಜೋಡಣೆ ಮಾಡಲಾಗುತ್ತದೆ. |
| **ಉದಾಹರಣೆ 2** | ಉತ್ತಮ ಪ್ರದರ್ಶನ ನೀಡುವ ಮಾರ್ಗದರ್ಶಕರನ್ನು ಗುರುತಿಸುವುದು | ಎ) ಮೆಚ್ಚುಗೆಯ ಪ್ರಮಾಣಪತ್ರಗಳು<br>ಬಿ) ಪ್ರಮುಖ ಅಂಶಗಳು ಉದಾ. ವೆಬ್‌ಸೈಟ್‌ನಲ್ಲಿ ಪ್ರಕಟಪಡಿಸುವುದು, ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಮಾರ್ಗದರ್ಶಕರ ಕಥೆಗಳನ್ನು ಎತ್ತಿತೋರುವುದು, ಇತ್ಯಾದಿ.<br>ಸಿ) ಎನ್.ಎಮ್.ಎಮ್ ನಲ್ಲಿ ವರ್ಷಾಂತ್ಯದ ಸೆಮಿನಾರ್‌ನಲ್ಲಿ ಉತ್ತಮ ಅಭ್ಯಾಸಗಳನ್ನು ಪ್ರದರ್ಶಿಸುವ ಅವಕಾಶ |

ಕಲಿಕಾರ್ಥಿಗಳಿಂದ ಅತ್ಯುತ್ತಮ ಪ್ರದರ್ಶನವನ್ನು ಗುರುತಿಸಲಾಗುತ್ತದೆ ಮತ್ತು ಪ್ರಶಂಸಾಪತ್ರವನ್ನು ಸಹ ನೀಡಲಾಗುತ್ತದೆ.

## 5.7. ಮಾರ್ಗದರ್ಶನ ಕಾರ್ಯಕ್ರಮಗಳಿಗೆ ಸವಾಲುಗಳು

ಮಾರ್ಗದರ್ಶನ ಕಾರ್ಯಕ್ರಮವು ಅಡೆತಡೆಗಳಿಂದ ಮುಕ್ತವಾಗಿಲ್ಲ. ಮಾರ್ಗದರ್ಶನ ಕಾರ್ಯಕ್ರಮವನ್ನು ವಿನ್ಯಾಸಗೊಳಿಸುವುದು ಮತ್ತು ಕಾರ್ಯಗತಗೊಳಿಸುವಾಗ ತನ್ನದೇ ಆದ ಸವಾಲುಗಳನ್ನು ಒಡ್ಡಬಹುದು. ಆದಾಗ್ಯೂ, ನಾವು ಈ ಸವಾಲುಗಳ ಬಗ್ಗೆ ತಿಳಿದಿದ್ದರೆ, ಅವುಗಳನ್ನು ಸರಳ ರೀತಿಯಲ್ಲಿ ಪರಿಹರಿಸಬಹುದು.

### 5.7.1 ಹೊಂದಿಕೆಯಾಗದ ನಿರೀಕ್ಷೆಗಳು

ಯಾವುದೇ ಮಾರ್ಗದರ್ಶನದ ರಚನೆಯಲ್ಲಿ ಪ್ರಮುಖ ಅಂಶವೆಂದರೆ ಗುರಿಗಳನ್ನು ನಿಗದಿಪಡಿಸುವುದು ಮತ್ತು ಒಳಗೊಂಡಿರುವ ಎಲ್ಲಾ ಪಾಲುದಾರರಿಗೆ ಆ ಗುರಿಗಳ ಬಗ್ಗೆ ಸ್ಪಷ್ಟತೆ ಇರಬೇಕು. ಹಾಗೆಯೇ, ವಿಶೇಷವಾಗಿ ಮಾರ್ಗದರ್ಶಕ ಅಥವಾ ಕಲಿಕಾರ್ಥಿಗಳಿಗೆ ಅವರು ಮಾರ್ಗದರ್ಶನದಲ್ಲಿ ಏನನ್ನು ಸಾಧಿಸಲು ಬಯಸುತ್ತಾರೆ ಎಂಬುದರ ಕುರಿತು ಸ್ಪಷ್ಟತೆ ಇಲ್ಲವಾದರೆ, ಗುರಿಗಳನ್ನು ನಿಗದಿಪಡಿಸುವುದು ಮತ್ತು ನಿರೀಕ್ಷೆಗಳನ್ನು ಒಟ್ಟಾಗಿಸುವುದು ಒಂದು ಸವಾಲಾಗಿ ಪರಿಣಮಿಸಬಹುದು.

ಈ ಅಡೆತಡೆಗಳನ್ನು ಸಂಪೂರ್ಣವಾಗಿ ತಪ್ಪಿಸಲು, ಮಾರ್ಗದರ್ಶನ ಕಾರ್ಯಕ್ರಮದ ಉದ್ದಕ್ಕೂ ನಿರೀಕ್ಷೆಗಳನ್ನು ನಿರಂತರವಾಗಿ ಸಂವಾದ ಮಾಡುವುದು ಮತ್ತು ಎಲ್ಲರೂ ಒಟ್ಟಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅಲ್ಲಲ್ಲಿ ಪರೀಕ್ಷಿಸುವುದು ಅತ್ಯಗತ್ಯವಾಗಿರುತ್ತದೆ.

### 5.7.2 ವ್ಯಯ ಮಾಡದ ಕಲಿಕಾರ್ಥಿಗಳು

ಮಾರ್ಗದರ್ಶನದ ಕಾರ್ಯಕ್ರಮಗಳಲ್ಲಿ ಕಲಿಕಾರ್ಥಿಗಳು ಭಾಗವಹಿಸುವುದು ಮತ್ತು ಅದರಿಂದ ಹೆಚ್ಚಿನ ಪ್ರಯೋಜನವನ್ನು ಪಡೆದುಕೊಳ್ಳುವಲ್ಲಿ ಸಂಬಂಧಗಳನ್ನು ಉಳಿಸಿಕೊಳ್ಳುವುದಕ್ಕೆ ಪ್ರೋತ್ಸಾಹ ನೀಡುವುದು ಬಹಳ ಮುಖ್ಯವಾಗಿದೆ. ಕಲಿಕಾರ್ಥಿಗಳು ಹಿಂದಕ್ಕೆ ಸರಿಯುವುದಕ್ಕೆ ಕಾರಣವಾಗುವ ಹಲವಾರು ಕಾರಣಗಳಿರಬಹುದು. ಇದು ಮಾರ್ಗದರ್ಶಕ-ಕಲಿಕಾರ್ಥಿ ಸಂಬಂಧದ ಗುಣಮಟ್ಟದ ಮೇಲೆ ಪರಿಣಾಮ

ಬೀರುತ್ತದೆ ಮತ್ತು ವಿಭಿನ್ನ ಕಾರ್ಯಕರ್ತರು ಮಾಡುವ ಪ್ರಯತ್ನಗಳನ್ನು ಕಡೆಗಣಿಸುತ್ತದೆ. ಅಂತಹುಗಳಲ್ಲಿ ಯಾವುದೇ ರೀತಿಯಲ್ಲಿ ವ್ಯಯ ಮಾಡದೇ ಇರುವ ಕಲಿಕಾರ್ಥಿಗಳು ಮಾರ್ಗದರ್ಶನ ಕಾರ್ಯಕ್ರಮದಿಂದ ಗರಿಷ್ಠ ಪ್ರಯೋಜನಗಳನ್ನು ಪಡೆಯಲು ಮಾರ್ಗದರ್ಶಕರಿಂದ ಪ್ರೇರೇಪಣೆ ಮತ್ತು ಪ್ರೋತ್ಸಾಹವನ್ನು ಪಡೆಯಬೇಕು.

### 5.7.3 ಮಾರ್ಗದರ್ಶಕರಲ್ಲಿ ಪ್ರೇರಣೆಯ ಕೊರತೆ

ಕಾರ್ಯಕ್ರಮಕ್ಕಾಗಿ ಸೂಕ್ತ ಸಂಖ್ಯೆಯ ಮಾರ್ಗದರ್ಶಕರನ್ನು ಆಯ್ಕೆ ಮಾಡುವುದು ಸಾಮಾನ್ಯ ಸವಾಲುಗಳಲ್ಲಿ ಒಂದಾಗಿದೆ. ಆ ಸವಾಲು ಮುಖ್ಯವಾಗಿದ್ದರೂ, ಮಾರ್ಗದರ್ಶಕರ ಪ್ರೇರಣೆ ಮತ್ತು ಪರಿಣತಿಯೂ ಅಷ್ಟೇ ಮುಖ್ಯ. ಪ್ರೇರಣೆಯ ಕೊರತೆಯು ಮಾರ್ಗದರ್ಶಕರ ಉತ್ಸಾಹವನ್ನು ಕಡಿಮೆ ಮಾಡುತ್ತದೆ ಮತ್ತು ಅದರ ಪರಿಣಾಮಕಾರಿ ಮಾರ್ಗದರ್ಶನದ ಸಂಬಂಧಕ್ಕೆ ಧಕ್ಕ ಉಂಟುಮಾಡುತ್ತದೆ ಹಾಗೂ ಇದರಿಂದಾಗಿ ಕಲಿಕಾರ್ಥಿಗಳು ಕಳಪೆ ಫಲಿತಾಂಶಗಳನ್ನು ನೀಡುತ್ತಾರೆ.

ಆದ್ದರಿಂದ ಕಾರ್ಯಕ್ರಮದ ಆರಂಭದಲ್ಲಿ ಸೂಕ್ತ ಮಾರ್ಗದರ್ಶಕರನ್ನು ಆಯ್ಕೆ ಮಾಡುವುದು ಮುಖ್ಯವಾಗುತ್ತದೆ. ಇದರೊಂದಿಗೆ, ಮಾರ್ಗದರ್ಶಕರಿಗೆ ಸರಿಯಾದ ತರಬೇತಿಯನ್ನು ನೀಡುವುದು ಮತ್ತು ಸಂಬಂಧದ ಉದ್ದಕ್ಕೂ ಅವರೊಂದಿಗೆ ಸಂವಾದ ನಡೆಸುವುದು ನಿರ್ಣಾಯಕವಾಗುತ್ತದೆ.

### 5.7.4 ಹೆಚ್ಚುವರಿ ಅಥವಾ ಅಸಮರ್ಪಕ ರಚನೆ

ಕಲಿಕಾರ್ಥಿಗಳ ವೈಯಕ್ತಿಕ ಅಗತ್ಯಗಳನ್ನು ಗುರುತಿಸುವುದು ಮುಖ್ಯವಾಗಿದೆ. ಕೆಲವು ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳು ವಿವಿಧ ಪರಿಕರಗಳು ಮತ್ತು ಸಂಪನ್ಮೂಲಗಳನ್ನ ಹೊಂದಲು ಇಚ್ಛಿಸುತ್ತಾರೆ, ಆದರೆ ಇತರರು ಅವುಗಳನ್ನು ಬಳಸಲು ನಿರಾಕರಿಸಿದರೆ ಅದರಿಂದಾಗುವ ಒತ್ತಡವನ್ನು ಅನುಭವಿಸಬೇಕಾಗಿ ಬರಬಹುದು. ಮಾರ್ಗದರ್ಶಕರು/ಕಲಿಕಾರ್ಥಿಗಳು ತಮ್ಮ ಅವಶ್ಯಕತೆಗಳು ಮತ್ತು ಅನುಕೂಲಕ್ಕೆ ಅನುಗುಣವಾಗಿ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ರೀತಿಯಲ್ಲಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿ ಸಮತೋಲನಗೊಳಿಸುವ ಮಾರ್ಗವನ್ನು ಕಂಡುಹಿಡಿಯುವುದು ಪ್ರಮುಖವಾಗಿದೆ.

### 5.7.5 ನಿರ್ಲಕ್ಷಿಸಿದ ಚೆಕ್‌ಪಾಯಿಂಟ್‌ಗಳು

ಮಾರ್ಗದರ್ಶಿ ಕಾರ್ಯಕ್ರಮದ ಸ್ಪಷ್ಟ ಚೆಕ್‌ಪಾಯಿಂಟ್‌ಗಳು ಕಾರ್ಯಕ್ರಮ ಕುರಿತು ಉತ್ತಮವಾಗಿ ವ್ಯಾಖ್ಯಾನಿಸಲಾದ ಆರಂಭ, ಮಧ್ಯ ಮತ್ತು ಅಂತ್ಯದ ಕುರಿತು ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡುತ್ತವೆ. ಇವು ಮಾರ್ಗದರ್ಶಕ ಮತ್ತು ಕಲಿಕಾರ್ಥಿ ಇಬ್ಬರಿಗೂ ತೃಪ್ತಿಯನ್ನು ನೀಡುತ್ತದೆ. ಉದಾಹರಣೆಗೆ, ಮಾರ್ಗದರ್ಶನದ ಸಂಬಂಧಕ್ಕೆ ಪರಿಣಾಮಕಾರಿ ಅಂತ್ಯವಿಲ್ಲದಿರುವಿಕೆ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳು ನಂತರ ಅತೃಪ್ತರಾಗಬಹುದು, ಗೊಂದಲಕ್ಕೊಳಗಾಗಬಹುದು ಮತ್ತು ಕಲಿಕೆಯೊಂದಿಗೆ ಹೇಗೆ ಮುಂದುವರಿಯುವುದು ಎಂಬುದರ ಕುರಿತು ಖಚಿತವಾಗದಿರಬಹುದು.

### 5.7.6 ಮಾರ್ಗದರ್ಶನದ ಸುತ್ತ ತಪ್ಪು ಕಲ್ಪನೆಗಳು

ಮಾರ್ಗದರ್ಶನದ ಸುತ್ತ ಕೆಲವು ಸಾಮಾನ್ಯ ತಪ್ಪುಗ್ರಹಿಕೆಗಳು ಅಡೆತಡೆಗಳನ್ನು ಉಂಟುಮಾಡಬಹುದು. ಮಾರ್ಗದರ್ಶನದ ಬಗ್ಗೆ ಕೆಲವು ವ್ಯಾಪಕವಾದ ನಂಬಿಕೆಗಳು  ಅಡೆತಡೆಗಳನ್ನು ಉಂಟುಮಾಡಬಹುದು ಮತ್ತು ಭಾಗವಹಿಸುವವರು ಅನುಭವದಿಂದ ಹೆಚ್ಚಿನದನ್ನು ಪಡೆಯುವುದನ್ನು ನಿರುತ್ಸಾಹಗೊಳಿಸಬಹುದು. ಹಲವಾರು ಸಾಮಾನ್ಯ ಅಪನಂಬಿಕೆಗಳು ಹೇಗಿವೆ:

“ಮಾರ್ಗದರ್ಶನವು ಸಮಯ ತೆಗೆದುಕೊಳ್ಳುವ ಪ್ರಕ್ರಿಯೆಯಾಗಿದೆ”

“ಮಾರ್ಗದರ್ಶನವು ವೃತ್ತಿ ಅಥವಾ ವೈಯಕ್ತಿಕ ಜೀವನಕ್ಕೆ ಯಾವುದೇ ಮೌಲ್ಯವನ್ನು ಹೊಂದಿಲ್ಲ”

“ಮಾರ್ಗದರ್ಶನದಿಂದ ಕಲಿಕಾರ್ಥಿಗಳಿಗೆ ಮಾತ್ರ ಪ್ರಯೋಜನವಾಗುತ್ತದೆ ಮತ್ತು ಮಾರ್ಗದರ್ಶಕರಿಗಲ್ಲ”

ಕಾರ್ಯಕ್ರಮದ ಪ್ರಾರಂಭದಲ್ಲಿ ಸ್ಪಷ್ಟವಾದ ನಿರೀಕ್ಷೆಗಳನ್ನು ಹೊಂದಿಸುವುದು ಉತ್ತಮವಾದ ಪಾತ್ರಗಳು, ಜವಾಬ್ದಾರಿಗಳು ಮತ್ತು ಫಲಿತಾಂಶಗಳೊಂದಿಗೆ ಈ ತಪ್ಪುಗ್ರಹಿಕೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಸರಿಯಾದ ಯೋಜನೆ ಮತ್ತು ಬೆಂಬಲದೊಂದಿಗೆ

ಮಾರ್ಗದರ್ಶನ ಕಾರ್ಯಕ್ರಮವು ದೀರ್ಘಕಾಲದವರೆಗೆ ಮುಂದುವರಿಯಬಹುದು ಮತ್ತು ಅದು ಪರಿಣಾಮ ಬೀರಬಹುದು. ಕಾರ್ಯಕ್ರಮವು ವೇಗವನ್ನು ಪಡೆದ ನಂತರ, ಮಾರ್ಗದರ್ಶನದ ಸಂಸ್ಕೃತಿಯನ್ನು ಹುಟ್ಟುಹಾಕಲಾಗುತ್ತದೆ ಮತ್ತು ಔಪಚಾರಿಕ ಕಾರ್ಯಕ್ರಮಗಳ ಜೊತೆಗೆ ಅನೌಪಚಾರಿಕ ಮಾರ್ಗದರ್ಶನವು ಹೆಚ್ಚಾಗಿ ಪ್ರವರ್ಧಮಾನಕ್ಕೆ ಬರುತ್ತದೆ.

### 5.7.7 ಪ್ರವೇಶಿಸಲಾಗದ ಮಾರ್ಗದರ್ಶನ


ಯಾವುದೇ ಮಾರ್ಗದರ್ಶನ ರಚನೆಯನ್ನು ಮಾರ್ಗದರ್ಶನ ಸಂವಾದಗಳ ಪ್ರವೇಶವನ್ನು ಪರಿಗಣಿಸಿ ವಿನ್ಯಾಸಗೊಳಿಸಬೇಕು. ಉದಾಹರಣೆಗೆ, ಶಾಲೆಯೊಳಗೆ ಮಾರ್ಗದರ್ಶನವು ವೈಯಕ್ತಿಕವಾಗಿ ಮತ್ತು ನಿಗದಿತ ಆವರ್ತನದಲ್ಲಿ ಸಂಭವಿಸಬಹುದು ಇದರಿಂದ ಎಲ್ಲಾ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳು ಸುಲಭವಾಗಿ ಪ್ರವೇಶಿಸಬಹುದು. ಆದಾಗ್ಯೂ, ರಾಷ್ಟ್ರವ್ಯಾಪಿ ಮಾರ್ಗದರ್ಶನ ಕಾರ್ಯಕ್ರಮಕ್ಕೆ ತಾಂತ್ರಿಕ ವೇದಿಕೆಯಂತಹ ಉದ್ದೇಶಗಳನ್ನು ಪೂರೈಸಲು ದೊಡ್ಡ ಮೂಲಸೌಕರ್ಯ ಅಗತ್ಯವಿರಬಹುದು. ವಿಧಾನಗಳು ಮತ್ತು ಮಾಧ್ಯಮವನ್ನು ವಿನ್ಯಾಸಗೊಳಿಸುವಾಗ ಬಹುಶಿಸ್ತೀಯ ವಿಧಾನವನ್ನು ಬಳಸಿಕೊಳ್ಳುವ ಮೂಲಕ ಮಾರ್ಗದರ್ಶನವನ್ನು ಹೆಚ್ಚು ಪ್ರವೇಶಿಸಬಹುದಾಗಿದೆ.

## 5.8 ಕುಂದುಕೊರತೆ ಪರಿಹಾರ ಕಾರ್ಯವಿಧಾನ

ಎನ್.ಎಮ್.ಎಮ್ ಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಹೆಚ್ಚಿನ ಪಾರದರ್ಶಕತೆಯೊಂದಿಗೆ ನಿರ್ವಹಿಸಲು ಮತ್ತು ಪರಿಹರಿಸಲು ಎನ್.ಸಿ.ಟಿ.ಇ ನಿಂದ ಕುಂದುಕೊರತೆ ಪರಿಹಾರ ಸಮಿತಿಯನ್ನು ರಚಿಸಲಾಗುತ್ತದೆ. ಮಾರ್ಗದರ್ಶಕರು/ಕಲಿಕಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರಿಯಾದ ಮಧ್ಯಸ್ಥಿಕೆಗಳನ್ನು ಪ್ರಾರಂಭಿಸಲು ಇದು ಸಹಾಯ ಮಾಡುತ್ತದೆ. ಕಲಿಕಾರ್ಥಿಗಳು/ಮಾರ್ಗದರ್ಶಕರು ತಮ್ಮ ಕಾಳಜಿ ಮತ್ತು ಸಲಹೆಗಳನ್ನು ಹಂಚಿಕೊಳ್ಳಲು ಮಾರ್ಗದರ್ಶಕ ವ್ಯವಸ್ಥೆಯನ್ನು ತಮ್ಮ ಅಗತ್ಯಗಳಿಗೆ ಹೆಚ್ಚು ಸ್ಪಂದಿಸುವಂತೆ ಮಾಡಲು ಇದು ಅವಕಾಶವನ್ನು ಒದಗಿಸುತ್ತದೆ.

# ಅಧ್ಯಾಯ 6

# ರಾಷ್ಟ್ರೀಯ ಮಾರ್ಗದರ್ಶನಕ್ಕೆ ಮೂಲಸೌಕರ್ಯ



# ಅಧ್ಯಾಯ VI: ರಾಷ್ಟ್ರೀಯ ಮಾರ್ಗದರ್ಶನಕ್ಕೆ ಮೂಲಸೌಕರ್ಯ


## 6.1 ಪರಿಚಯ

ಎನ್.ಎಮ್.ಎಮ್ ದೊಡ್ಡಪ್ರಮಾಣದಲ್ಲಿ ಮಾರ್ಗದರ್ಶನವನ್ನು ಯಶಸ್ವಿಯಾಗಿ ಸ್ಥಾಪಿಸುವ ಗುರಿಯನ್ನು ಹೊಂದಿದೆ ಮತ್ತು ಈ ತಂತ್ರಜ್ಞಾನವನ್ನು ಸಕ್ರಿಯಗೊಳಿಸುವುದು ಅತ್ಯಂತ ಪ್ರಮುಖವಾಗಿದೆ. ರಾಷ್ಟ್ರೀಯ ಮಾರ್ಗದರ್ಶನ ಮೂಲಸೌಕರ್ಯವನ್ನು (ನ್ಯಾಷನಲ್ ಮೆಂಟರಂಗ್ ಇನ್ ಫ್ರಾಸ್ಟ್ರಕ್ಚರ್-ಎನ್.ಎಮ್.ಐ) ಮುಕ್ತ ಮೂಲ ಮಾಡ್ಯುಲರ್ ಬಿಲ್ಡಿಂಗ್ ಬ್ಲಾಕ್‌ಗಳ ಒಂದು ಸೆಟ್‌ನಂತೆ ಕಲ್ಪಿಸಲಾಗಿದೆ, ಅದು ಎನ್.ಡಿ.ಇ.ಎ.ಆರ್ ದೂರುಗಳು ಮತ್ತು ಮಾಪಕತೆ ಮತ್ತು ವಿಶ್ವಾಸಾರ್ಹತೆಗಾಗಿ ನಿರ್ಮಿಸಲಾಗಿದೆ. ಮಾರ್ಗದರ್ಶಕ ಪರಿಹಾರಗಳು/ವ್ಯವಸ್ಥೆಗಳ ವಿತರಣೆಗಾಗಿ ಪ್ರಸ್ತುತ ಯಾವುದೇ ಮುಕ್ತ ಪ್ರೋಟೋಕಾಲ್‌ಗಳನ್ನು ವ್ಯಾಖ್ಯಾನಿಸದ ಕಾರಣ ಹಲವಾರು ಸಂಪರ್ಕ ಕಡಿತಗೊಂಡ ಮತ್ತು ವಿಭಜಿತ ಮಾರ್ಗದರ್ಶಕ ಪರಿಹಾರಗಳಿವೆ. ಮಾರ್ಗದರ್ಶಕರನ್ನು ಅನ್ವೇಷಿಸಲು ಕಲಿಕಾರ್ಥಿಗಳು ವಿಭಿನ್ನ ಪರಿಹಾರಗಳು ಅಥವಾ ವ್ಯವಸ್ಥೆಗಳನ್ನು ಬಳಸುತ್ತಿದ್ದಾರೆ. ಯೂನಿಫೈಡ್ ಮೆಂಟರಿಂಗ್ ಇಂಟರ್‌ಫೇಸ್ (ಯು.ಎಮ್.ಐ) ಅನ್ನು ವಿವರಿಸುವ ಮತ್ತು ಸಕ್ರಿಯಗೊಳಿಸುವ ಮೂಲಕ ಎನ್.ಎಮ್.ಐ ಈ ನ್ಯೂನತೆಯನ್ನು ನಿವಾರಿಸುವ ಗುರಿಯನ್ನು ಹೊಂದಿದೆ - Beckn DSEP ಶಿಷ್ಟಾಚಾರದಲ್ಲಿ ಇದನ್ನು ಅಳವಡಿಸಲಾಗಿದೆ. ಯು.ಎಮ್.ಐ ವೈವಿಧ್ಯಮಯ ಮಾರ್ಗದರ್ಶಕ ಸೇವೆಗಳು ಮತ್ತು ಪರಿಹಾರಗಳ ಪರಸ್ಪರ ಕಾರ್ಯಸಾಧ್ಯತೆಯನ್ನು ಸಕ್ರಿಯಗೊಳಿಸುವ ಗುರಿಯನ್ನು ಹೊಂದಿದೆ, ಆ ಮೂಲಕ ಮುಕ್ತ ಶಿಷ್ಟಾಚಾರಗಳು/ವಿಶೇಷತೆಗಳು ಮತ್ತು ಇಂಟರ್‌ಫೇಸ್‌ನ ಮೂಲಕ ವಿವಿಧ ಸೇವೆಗಳಾದ್ಯಂತ ಮಾರ್ಗದರ್ಶಕರು ಮತ್ತು ಮಾರ್ಗದರ್ಶನ ಕಾರ್ಯಕ್ರಮಗಳ ಅನ್ವೇಷಣೆಯನ್ನು ತೆರೆಯುತ್ತದೆ. ನಾವೀನ್ಯತೆ, ವೈವಿಧ್ಯತೆ ಮತ್ತು ಸಂದರ್ಭೋಚಿತತೆಯನ್ನು ತರಲು ಪರಿಸರ ವ್ಯವಸ್ಥೆಯನ್ನು ಶಕ್ತಿಯುತಗೊಳಿಸುವುದು ಅವಶ್ಯಕ. ಯು.ಎಮ್.ಐ ಏಕೀಕೃತ ಮಾರ್ಗದರ್ಶನ ಜಾಲವು (ಯು.ಎಮ್.ಎನ್) ರಚನೆಯನ್ನು ಸಕ್ರಿಯಗೊಳಿಸುತ್ತದೆ, ಅಲ್ಲಿ ವಿವಿಧ ಪರಿಸರ ವ್ಯವಸ್ಥೆಯ ಪಾಲುದಾರರು ಪರಿಹಾರಗಳನ್ನು ಬಳಸಬಹುದು ಮತ್ತು ರಚಿಸಬಹುದು ಮತ್ತು ಬಳಕೆಯ ಸಂದರ್ಭಗಳಲ್ಲಿ ಮಾರ್ಗದರ್ಶನಕ್ಕಾಗಿ ಅವರ ಪರಿಹಾರಗಳು/ಸೇವೆಗಳನ್ನು ವಿಸ್ತರಿಸಬಹುದು.

ಎನ್.ಎಮ್.ಐ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳಿಬ್ಬರಿಗೂ ವಿವಿಧ ಸಂದರ್ಭಗಳಲ್ಲಿ ಮಾರ್ಗದರ್ಶಕ ಸೇವೆಗಳು ಮತ್ತು ಪರಿಹಾರಗಳ ಅಳವಡಿಕೆಯಲ್ಲಿ ಸುಲಭವಾಗಿ ಖಾತರಿಪಡಿಸುವ ಗುರಿಯನ್ನು ಹೊಂದಿದೆ. ಅದರ ತತ್ವಗಳು ಮತ್ತು ತಂತ್ರಜ್ಞಾನದ ಘಟಕಗಳನ್ನು ಒಳಗೊಂಡಂತೆ ಅದರ ವಿನ್ಯಾಸದ ಪ್ರತಿಯೊಂದು ಹಂತದಲ್ಲೂ ಈ ವೈಶಿಷ್ಟ್ಯಗಳನ್ನು ಬಲಪಡಿಸಲಾಗಿದೆ.

## 6.2 ವಿನ್ಯಾಸ ತತ್ವಗಳು

ಈ ವಿಭಾಗದಲ್ಲಿ, ಮೂಲಭೂತ ವಿನ್ಯಾಸ ತತ್ವಗಳು ಮತ್ತು ಉತ್ತಮ ಅಭ್ಯಾಸಗಳನ್ನು ವಿವರಿಸುವ ಮೂಲಕ ಎನ್.ಎಮ್.ಐ ಯ ಡಿಜಿಟಲ್ ಮೂಲಸೌಕರ್ಯ ಅಂಶಗಳಿಗೆ ಗಮನಹರಿಸಲಾಗಿದೆ:




**ಚಿತ್ರ 6.1: ರಾಷ್ಟ್ರೀಯ ಮಾರ್ಗದರ್ಶನ ಮೂಲಸೌಕರ್ಯದ ವಿನ್ಯಾಸ ತತ್ವಗಳು**

ಎ. **ಮೈಕ್ರೋ ಸರ್ವೀಸ್ ಆರ್ಕಿಟೆಕ್ಚರ್:** ಪ್ರಮಾಣ ಮತ್ತು ವೈವಿಧ್ಯತೆಯನ್ನು ಪರಿಹರಿಸಲು, ಮಾಡ್ಯುಲರ್ ಸೇವೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಒಗ್ಗೂಡಿಸಬಹುದು ಮತ್ತು ವಿಸ್ತರಿಸಬಹುದು. ಇದು ಸಡಿಲವಾಗಿ ಜೋಡಿಸಲಾದ ಸೂಕ್ಷ್ಮಸೇವೆಗಳ ಮೂಲಕ ಬದಲಾಗುತ್ತಿರುವ ಅಗತ್ಯತೆಗಳು ಮತ್ತು ಸಂದರ್ಭಕ್ಕೆ ಅನುಗುಣವಾಗಿ ಕ್ರಿಯಾತ್ಮಕತೆಯ ವಿಕಸನವನ್ನು ಶಕ್ತಗೊಳಿಸುತ್ತದೆ.

ಬಿ. **ಸುರಕ್ಷಿತ ಮತ್ತು ವಿಶ್ವಾಸಾರ್ಹ:** ಅದು ವಿನ್ಯಾಸದ ನಿರ್ಣಾಯಕ ಭಾಗವಾಗಿ ರೂಪುಗೊಳ್ಳುವ ಕಾರಣ ಭದ್ರತೆ ಮತ್ತು ಗೌಪ್ಯತೆಯನ್ನು ನಿರ್ವಹಿಸುವುದು ಮುಖ್ಯವಾಗಿದೆ. ಅದರ ಬಳಕೆದಾರರಿಗೆ ಡೇಟಾವನ್ನು ಒದಗಿಸುವಾಗ ಸುರಕ್ಷತೆ ಮತ್ತು ಗೌಪ್ಯತೆಯನ್ನು ಖಾತ್ರಿಪಡಿಸುವಂತೆ ಮೂಲಸೌಕರ್ಯವನ್ನು ವಿನ್ಯಾಸಗೊಳಿಸಲಾಗಿದೆ.

ಸಿ. **ಮುಕ್ತ ಮಾನದಂಡಗಳು:** ಮೂಲಸೌಕರ್ಯದ ವಿನ್ಯಾಸಕ್ಕೆ ಮುಕ್ತ ಮಾನದಂಡಗಳು ಮತ್ತು ಪರಸ್ಪರ ಕಾರ್ಯಸಾಧ್ಯತೆಯು ವಿವಿಧ ಬಳಕೆಯ ಸಂದರ್ಭಗಳಿಗೆ ಬೆಂಬವಾಗಿರುತ್ತದೆ ಎಂದು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದೆ. ನಿರ್ದಿಷ್ಟ ಪ್ಲಾಟ್‌ಫಾರ್ಮ್, ಜಾಲ ತಂತ್ರಜ್ಞಾನಗಳು ಅಥವಾ ಭಾಷೆಗಳಿಗೆ ಯಾವುದೇ ರೀತಿಯಲ್ಲಿ ಸಂಬಂಧವಿಲ್ಲದಂತೆ ಪರಸ್ಪರ ಕಾರ್ಯಸಾಧ್ಯತೆಯನ್ನು ಖಚಿತಪಡಿಸುವ ಮುಕ್ತ ಶಿಷ್ಟಾಚಾರಗಳು ಮತ್ತು ಎ.ಪಿ.ಐ ಗಳನ್ನು ಬಳಸಿಕೊಂಡು ಎನ್.ಎಮ್.ಐ ಅನ್ನು ನಿರ್ಮಿಸಲಾಗಿದೆ. ಇದು ಪರಸ್ಪರ ಕಾರ್ಯಸಾಧ್ಯತೆಯನ್ನು ಒದಗಿಸಲು ಮಾನದಂಡಗಳ ಮೇಲೆ ಆಧರಿತವಾಗಿದೆ. ಆದ್ದರಿಂದ ಮುಕ್ತ ಎ.ಪಿ.ಐ ಗಳು, ಒಟ್ಟಿಗೆ ಕೆಲಸ ಮಾಡಲು ವೈವಿಧ್ಯಮಯ ತಂತ್ರಜ್ಞಾನಗಳ ಮೇಲೆ ನಿರ್ಮಿಸಲಾದ ವೈವಿಧ್ಯಮಯ ಮಾರ್ಗದರ್ಶನದ ಪರಿಹಾರಗಳನ್ನು ಬೆಂಬಲಿಸುತ್ತದೆ.

ಡಿ. **ಮಾಪಕತೆ ಮತ್ತು ಸ್ಥಿತಿಸ್ಥಾಪಕ:** ಪರಿಸರ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯ ಬಳಕೆದಾರರಿಗೆ ಅಳೆಯಲು ಸಾಧ್ಯವಾಗುವಂತೆ, ಪ್ರಮಾಣೀಕರಣ ಮತ್ತು ಲಂಬೀಯವಾಗಿ ಅಳೆಯುವ ಮೂಲಕ ಕಾರ್ಯಾಚರಣೆಗಳ ಮಾಪಕತೆಯನ್ನು ಖಾತ್ರಿಪಡಿಸಲಾಗುತ್ತದೆ.

ಇ. **ಅವಲೋಕನ:** ಮೂಲಸೌಕರ್ಯದಲ್ಲಿ ಸಂವಾದದ ಮಾರ್ಗದರ್ಶನದ ಸುತ್ತ ವಿನಿಮಯವಾಗುವ ಮೌಲ್ಯಯುತ ಮಾಹಿತಿಯ ವೀಕ್ಷಣೆಯನ್ನು ಟೆಲಿಮೆಟ್ರಿ ಮೂಲಕ ತಿಳಿಯುತ್ತದೆ. ಕಲಿಕಾರ್ಥಿ/ ಮಾರ್ಗದರ್ಶಕರ ಸುತ್ತಲಿನ ಎಲ್ಲಾ ಕಾರ್ಯಕ್ರಗಳನ್ನು ಸೆರೆಹಿಡಿಯಲು ಮತ್ತು ಅವುಗಳನ್ನು ಬಳಸಿ ವಿಶ್ಲೇಷಣೆಗೆ ಲಭ್ಯವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ.

ಎಫ್. **ವಿಶ್ವಾಸಾರ್ಹ ಪ್ಲಾಟ್‌ಫಾರ್ಮ್:** ಈ ಪ್ಲಾಟ್‌ಫಾರ್ಮ್, ಮೂಲಸೌಕರ್ಯವನ್ನು ಎರಡೂ ಕಡೆಯವರಿಗೂ ಅಂದರೆ - ಕಲಿಕಾರ್ಥಿಗಳು/ಮಾರ್ಗದರ್ಶಕರಿಗೆ ಒಳನೋಟವುಳ್ಳ ಮತ್ತು ಉದ್ದೇಶಪೂರ್ವಕ ಮಾರ್ಗದರ್ಶನದ ಅನುಭವಗಳನ್ನು ಸುಲಭಗೊಳಿಸುವ ಗುರಿಯನ್ನು ಹೊಂದಿದೆ. ಇದನ್ನು ಆನ್ ಬೋರ್ಡ್ ಗೆ ಬರುವ ಮಾರ್ಗದರ್ಶಕರ ಕಾರ್ಯತತ್ಪರತೆ ಹಾಗೂ

ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಮೂಲಕ ಪ್ಲಾಟ್‌ಫಾರ್ಮ್‌ನಲ್ಲಿರುವ ದೃಢೀಕರಿಸಿ ಮಾನ್ಯಮಾಡಲಾದ ಮಾರ್ಗದರ್ಶಕರ ಮೂಲಕ ಮಾಡಲಾಗುವುದು.

ಜಿ. **ವಿಕೇಂದ್ರೀಕೃತ ಮತ್ತು ವಿತರಿಸಲಾಗಿದೆ:** ಜಾಲದ ಭಾಗವಾಗಿರುವ ವಿತರಿಸಿದ ವಿಶ್ವಾಸಾರ್ಹ ಘಟಕಗಳು/ರೆಪೊಸಿಟರಿಗಳಿಂದ ಡೇಟಾವನ್ನು ಪಡೆದುಕೊಳ್ಳಲು ಮತ್ತು ವಿನಿಮಯ ಮಾಡಿಕೊಳ್ಳಲು ಅಪ್ಲಿಕೇಶನ್‌ಗಳು ಮತ್ತು ಪರಿಹಾರಗಳನ್ನು ಸಕ್ರಿಯಗೊಳಿಸಲು ಮೂಲಸೌಕರ್ಯವನ್ನು ವಿನ್ಯಾಸಗೊಳಿಸಲಾಗಿದೆ.

ಎಚ್. **ಪ್ಲಾಟ್ ಫಾರ್ಮ್ ಚಿಂತನೆ (ಥಿಂಕಿಂಗ್):** ಮೂಲಸೌಕರ್ಯವು ಪಾಲುದಾರರ (ಪರಿಹಾರ ಒದಗಿಸುವವರು) ಪರಿಸರ ವ್ಯವಸ್ಥೆಗೆ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯನಿರ್ವಹಿಸಲು ತಮ್ಮ ಪರಿಹಾರಗಳು/ಸೇವೆಗಳನ್ನು ರಚಿಸಲು ಮತ್ತು ವಿಸ್ತರಿಸಲು ಅನುಮತಿಸುತ್ತದೆ.

ಐ. **ಏಕೀಕೃತ ಮತ್ತು ಏಕರೂಪವಲ್ಲ:** ಮೂಲಸೌಕರ್ಯವು ಮುಕ್ತ ಮಾನದಂಡಗಳನ್ನು ಆಧರಿಸಿದೆ, ಇದು ಏಕೀಕೃತ ಕೆಲಸವನ್ನು ಸುಲಭಗೊಳಿಸುತ್ತದೆ ಮತ್ತು ಒಗ್ಗೂಡಿ ಕಾರ್ಯನಿರ್ವಹಿಸಲು ವೈವಿಧ್ಯಮಯ ಪರಿಹಾರಗಳನ್ನು ಸಶಕ್ತಗೊಳಿಸುತ್ತದೆ.

ಜೆ. **ಪರಿಸರ ವ್ಯವಸ್ಥೆಯನ್ನು ಸಕ್ರಿಯಗೊಳಿಸುವುದು:** ರೆಪೊಸಿಟರಿಗಳಾದ್ಯಂತ ಡೇಟಾವನ್ನು ನಿಯಂತ್ರಿಸಲು ಮತ್ತು ಬಳಕೆದಾರರಿಗೆ ಪ್ರವೇಶಾತಿ ನೀಡುವ ಏಕ ಗವಾಕ್ಷಿ ವ್ಯವಸ್ಥೆಯನ್ನು ಒದಗಿಸುವ ಮೂಲಕ ಒಟ್ಟಾಗಿ ಕಾರ್ಯನಿರ್ವಹಿಸಲು ಯು.ಎಮ್.ಐ ಸಲಹೆ ನೀಡುವ ಪರಿಹಾರಗಳು/ಅಪ್ಲಿಕೇಶನ್ ಗಳ ಪರಿಸರ ವ್ಯವಸ್ಥೆಯನ್ನು ಸಕ್ರಿಯಗೊಳಿಸುತ್ತದೆ.

ಕೆ. **ವಿಸ್ತರಣಾಶೀಲತೆ:** ಜಾಲದಲ್ಲಿ ಸುಲಭವಾಗಿ ಭಾಗವಹಿಸಲು ಹೊಸ ಸಾಮರ್ಥ್ಯಗಳು/ಸಂಸ್ಥೆಗಳನ್ನು ಸೇರಿಸಬಹುದಾದ ರೀತಿಯಲ್ಲಿ ಮೂಲಸೌಕರ್ಯವನ್ನು ನಿರ್ಮಿಸಲಾಗಿದೆ. ನಿರ್ದಿಷ್ಟತೆಯ ಅನುಸರಣೆಯು ಹೊಸ ಘಟಕಗಳಿಗೆ ಅಸ್ತಿತ್ವದಲ್ಲಿರುವ ಸಾಮರ್ಥ್ಯಗಳು ಮತ್ತು ಜಾಲದ ಪ್ರಯೋಜನಗಳನ್ನು ಹತೋಟಿಗೆ ತರಲು ಅನುಮತಿಸುತ್ತದೆ.

ಎಲ್. **ವಿನ್ಯಾಸದ ಮೂಲಕ ಒಳಗೊಂಡಿದೆ:**

**i. ಬಳಕೆದಾರ ನೆಲೆ**


ಮೂಲಸೌಕರ್ಯವು ಬಳಕೆದಾರರ ಸಾಂದರ್ಭಿಕ ಮತ್ತು ವೈವಿಧ್ಯಮಯ ಅಗತ್ಯಗಳನ್ನು ಪೂರೈಸಿ ವಿನ್ಯಾಸಗೊಳಿಸಲು ಪರಿಹಾರಗಳನ್ನು ಸಕ್ರಿಯಗೊಳಿಸುತ್ತದೆ ಉದಾ., ಫೋನ್‌ಗಳು, ವೆಬ್, ವಿವಿಧ ಭಾಷೆಗಳು ಇತ್ಯಾದಿ ವಿವಿಧ ಪ್ಲಾಟ್‌ಫಾರ್ಮ್‌ಗಳಲ್ಲಿ.

**ii. ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು**

ಇಂದು ಅಸ್ತಿತ್ವದಲ್ಲಿರುವ ಅಪ್ಲಿಕೇಶನ್‌ಗಳು, ಪರಿಹಾರಗಳು ಮತ್ತು ವಿಷಯ ಸೇರಿದಂತೆ ವಿವಿಧ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ಸಂಪರ್ಕಿಸಲು ಮತ್ತು ಹತೋಟಿಗೆ ತರಲು ಮೂಲಸೌಕರ್ಯವನ್ನು ವಿನ್ಯಾಸಗೊಳಿಸಲಾಗಿದೆ.

## 6.3 ಮಾರ್ಗದರ್ಶಕ-ಕಲಿಕಾರ್ಥಿ ಸಂವಾದಗಳನ್ನು ಸಕ್ರಿಯಗೊಳಿಸುವುದು


ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳ ನಡುವೆ ತಡೆರಹಿತ ಸಮಕಾಲಿಕ ಮತ್ತು ಅಸಮಕಾಲಿಕ ಮಾರ್ಗದರ್ಶಕ ಸಂವಾದಗಳನ್ನು ಸಕ್ರಿಯಗೊಳಿಸುವುದು ಎನ್.ಎಮ್.ಐ ಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಸಾರ್ವತ್ರಿಕ ಅನ್ವೇಷಣೆ ಮತ್ತು ನಂಬಿಕೆಯಿಂದ ಸಂವಾದಗಳನ್ನು ಸಕ್ರಿಯಗೊಳಿಸಲಾಗಿದೆ ಮತ್ತು ಪ್ರತಿಕ್ರಿಯೆ-ಚಾಲಿತವಾಗಿದೆ. ತಂತ್ರಜ್ಞಾನದ ಮೂಲಸೌಕರ್ಯಗಳಲ್ಲಿ ಕೆಳಗಿನ 6 ಪ್ರಮುಖ ಪದಗಳನ್ನು ಸಕ್ರಿಯಗೊಳಿಸಲಾಗುತ್ತದೆ-




ಚಿತ್ರ 6.2: ತಂತ್ರಜ್ಞಾನದ ಮೂಲಸೌಕರ್ಯದಲ್ಲಿ ಸಕ್ರಿಯಗೊಳಿಸಲಾದ ಪ್ರಮುಖ ಪದಗಳು

## 6.4 ತಂತ್ರಜ್ಞಾನದ ಘಟಕಗಳು

ವಿನ್ಯಾಸ ತತ್ವಗಳಿಗೆ ಅನುಗುಣವಾಗಿ, ಎನ್.ಎಮ್.ಐ ತನ್ನ ಬಳಕೆದಾರರಿಗೆ ಬಹು ಮಾರ್ಗದರ್ಶನ ಪರಿಹಾರಗಳನ್ನು ಸಕ್ರಿಯಗೊಳಿಸುವ ವಿಭಿನ್ನ ತಂತ್ರಜ್ಞಾನದ ಘಟಕಗಳನ್ನು ಒದಗಿಸುತ್ತದೆ.




ಚಿತ್ರ 6.3: ಏಕೀಕೃತ ಮಾರ್ಗದರ್ಶನ ಜಾಲ (ಯು.ಎಮ್.ಡಬ್ಲ್ಯೂ)- ಘಟಕ ಮಟ್ಟದ ನೋಟ

ಎ. **ಕಲಿಕಾರ್ಥಿ ಇಂಟರ್ ಫೇಸ್ (ಅಪ್ಲಿಕೇಶನ್/ಜಾಲತಾಣ/ಇತರ ಪರಿಹಾರಗಳು):** ಕಲಿಕಾರ್ಥಿಗಳು ತಮ್ಮ ಆಸಕ್ತಿಗಳು ಮತ್ತು ಅಗತ್ಯಗಳ ಆಧಾರದ ಮೇಲೆ ಮಾರ್ಗದರ್ಶಕರು ಮತ್ತು ಸೆಷನ್ ಗಳನ್ನು ತಿಳಿದುಕೊಳ್ಳಲು ಈ ಇಂಟರ್ಫೇಸ್ ಅನ್ನು ಬಳಸಬಹುದು. ಅವರು ತಮ್ಮ ಆಸಕ್ತಿದಾಯಕ ಮಾರ್ಗದರ್ಶನ ಕಾರ್ಯಕ್ರಮಗಳಲ್ಲಿ ದಾಖಲಾಗಬಹುದು.

ಬಿ. **ಮಾರ್ಗದರ್ಶಕ ಇಂಟರ್ ಫೇಸ್ (ಅಪ್ಲಿಕೇಶನ್/ಜಾಲತಾಣ/ಇತರ ಪರಿಹಾರಗಳು):** ಮಾರ್ಗದರ್ಶಕರು ತಮ್ಮ ಸಂವಾದ/ಸೆಷನ್ ಗಳನ್ನು ಕಲಿಕಾರ್ಥಿಗಳೊಂದಿಗೆ ಯೋಜಿಸಲು ಈ ಇಂಟರ್ಫೇಸ್ ಅನ್ನು ಬಳಸುತ್ತಾರೆ. ಅವರು ಹಿಂದೆ ನಡೆಸಿದ ವಿವಿಧ ಸಂವಾದಗಳ ಒಳನೋಟಗಳು ಮತ್ತು ವಿಶ್ಲೇಷಣೆಗಳನ್ನು ಸಹ ಪಡೆದುಕೊಬಹುದು.

ಸಿ. **ಮಾರ್ಗದರ್ಶನ ಟ್ಯಾಕ್ಸಾನಮಿ:** ರಾಷ್ಟ್ರೀಯ ಮೂಲಸೌಕರ್ಯದ ಭಾಗವಾಗಿ ರಾಷ್ಟ್ರೀಯ ಮಾರ್ಗದರ್ಶನ ಟ್ಯಾಕ್ಸಾನಮಿಯನ್ನು ಅಭಿವೃದ್ಧಿಪಡಿಸಿ ಸೇರ್ಪಡೆ ಮಾಡಲಾಗುತ್ತದೆ. ಈ ವರ್ಗೀಕರಣವು ಮಾರ್ಗದರ್ಶಕರ ಗುಣಲಕ್ಷಣಗಳು, ಮಾರ್ಗದರ್ಶನದ ಕ್ಷೇತ್ರಗಳು ಮತ್ತು ಸಂವಾದ ಮಾಧ್ಯಮಗಳಂತಹ ಪ್ರಮುಖ ಅಂಶಗಳನ್ನು ಒಳಗೊಂಡಿದೆ.

ಡಿ. **ಏಕೀಕೃತ ಮಾರ್ಗದರ್ಶನ ಇಂಟರ್ ಫೇಸ್ (ಯು.ಎಮ್.ಐ) ಗೇಟ್‌ವೇ:** ಯು.ಎಮ್.ಐ ವೈವಿಧ್ಯಮಯ ಮಾರ್ಗದರ್ಶನದ ಸೇವೆಗಳು/ಪರಿಹಾರಗಳ ಪರಸ್ಪರ ಕಾರ್ಯಸಾಧ್ಯತೆಯನ್ನು ಸಕ್ರಿಯಗೊಳಿಸುತ್ತದೆ. ಆ ಮೂಲಕ ವೈವಿಧ್ಯಮಯ ಸೇವೆಗಳಾದ್ಯಂತ ಮಾರ್ಗದರ್ಶಕರು/ಕಾರ್ಯಕ್ರಮಗಳ ಅನ್ವೇಷಣೆಯನ್ನು ತೆರೆದಿಡುತ್ತದೆ. ಯು.ಎಮ್.ಐ ಮುಕ್ತ ಶಿಷ್ಟಾಚಾರಗಳಲ್ಲಿ ನಿರ್ಮಿಸಲಾದ ಮುಕ್ತ ಜಾಲವನ್ನು ರಚಿಸುವ ಮೂಲಕ ಕಲಿಕೆ/ಮಾರ್ಗದರ್ಶನ ಸೇವೆಗಳನ್ನು ಸುವ್ಯವಸ್ಥಿತಗೊಳಿಸುವ ಗುರಿಯನ್ನು ಹೊಂದಿದೆ.

ಇ. **ಅಪ್ಲಿಕೇಶನ್ ನೋಂದಣಿ:** ಇದು ಎಲ್ಲಾ ಮೊಬೈಲ್ ಅಪ್ಲಿಕೇಶನ್‌ಗಳು, ವೆಬ್ ಪೋರ್ಟಲ್‌ಗಳು ಮತ್ತು ಇಂಟರ್ಫೇಸ್ ಅನ್ನು ಬಳಸುವ ಇತರ ಪರಿಹಾರಗಳ ನೋಂದಾವಣೆ ಒಳಗೊಂಡಿದೆ.

ಎಫ್. **ಸೇವಾ ನೋಂದಣಿ:** ಇದು ಗೇಟ್‌ವೇಗೆ ಚಂದಾದಾರರಾಗಿರುವ ಮಾರ್ಗದರ್ಶನ ವ್ಯವಸ್ಥೆಗಳ (ಅಪ್ಲಿಕೇಶನ್‌ಗಳು) ನೋಂದಾವಣೆಯನ್ನು ಒಳಗೊಂಡಿದೆ.

ಜಿ. **ಬಾಹ್ಯ ನೋಂದಣಿ:** ಇದು ಪರಿಸರ ವ್ಯವಸ್ಥೆಯಲ್ಲಿ ಪರಿಶೀಲಿಸಿದ ಮಾರ್ಗದರ್ಶಕರ ವಿವಿಧ ವಿಕೇಂದ್ರೀಕೃತ ವಿಶ್ವಾಸಾರ್ಹ ನೋಂದಣಿಗಳನ್ನು (ಶೈಕ್ಷಣಿಕ ಸಂಸ್ಥೆಗಳು, ರಾಜ್ಯ ಇಲಾಖೆಗಳು ಮತ್ತು ಸಿ.ಎಸ್.ಒ ಗಳಿಂದ) ಒಳಗೊಂಡಿದೆ.

ಎಚ್. **ಮಾರ್ಗದರ್ಶನ ಸೇವೆ:** ಮೂಲಸೌಕರ್ಯದಲ್ಲಿನ ಮೈಕ್ರೊ ಸೇವೆಯು ಮಾರ್ಗದರ್ಶಕರಿಗೆ ತಮ್ಮ ಸೆಷನ್ ಅವಧಿಗಳನ್ನು ಯೋಜಿಸಲು ಮತ್ತು ಮಾರ್ಗದರ್ಶಕ ಮತ್ತು ಕಲಿಕಾರ್ಥಿ ನಡುವಿನ ಪ್ರಮುಖ ಸಂವಾದಗಳನ್ನು ಸಕ್ರಿಯಗೊಳಿಸಲು ಅನುವು ಮಾಡಿಕೊಡುತ್ತದೆ.

## 6.5 ಏಕೀಕೃತ ಮಾರ್ಗದರ್ಶನದ ಇಂಟರ್ಫೇಸ್

ಯು.ಎಮ್.ಐ ಎನ್ನುವುದು Beckn DSEP ನಿರ್ದಿಷ್ಟತೆಗಳ ಮೇಲೆ ನಿರ್ಮಿಸಲಾದ ಜಾಲದ ಇಂಟರ್‌ಫೇಸ್ ಆಗಿದೆ. ಈ ಜಾಲವು ವಿವಿಧ ಪೂರೈಕೆದಾರರು ಮತ್ತು ಗ್ರಾಹಕರು ಮನಬಂದಂತೆ ಸಂವಾದ ನಡೆಸಲು ಅನುಮತಿಸುತ್ತದೆ.

### 6.5.1 ಅನ್ವೇಷಣಾಶೀಲತೆ

ಎಲ್ಲಾ ಮಾರ್ಗದರ್ಶಕರು (ಅನುಭವಿ ಸಂಪನ್ಮೂಲ ವ್ಯಕ್ತಿಗಳು/ ನಿವೃತ್ತ ಪ್ರಾಧ್ಯಾಪಕರು/ಶಿಕ್ಷಕರು ಇತ್ಯಾದಿ) ತಮ್ಮ ಸಾಧನಗಳಲ್ಲಿ ಯಾವುದೇ ಮಾರ್ಗದರ್ಶನದ ಅಪ್ಲಿಕೇಶನ್ ಅನ್ನು ಸ್ಥಾಪಿಸಿಕೊಂಡಿದ್ದರೂ ಒಂದೇ ಇಂಟರ್ ಫೇಸ್‌ನಲ್ಲಿ ಗೋಚರಿಸುತ್ತಾರೆ ಮತ್ತು ಪ್ರವೇಶಪಡೆಯಬಹುದಾಗಿದೆ. ಸಂಪನ್ಮೂಲಗಳೊಂದಿಗೆ ಸಂಪರ್ಕ ಸಾಧಿಸಲು ಹಲವಾರು ಅಪ್ಲಿಕೇಶನ್‌ಗಳನ್ನು ಸ್ಥಾಪಿಸುವ ಬದಲು ಒಂದೇ ವೇದಿಕೆಯಲ್ಲಿ ಮಾರ್ಗದರ್ಶಕರ ದೊಡ್ಡ ವಲಯಕ್ಕೆ ಪ್ರವೇಶಿಸಲು ಇದು ಬಳಕೆದಾರರಿಗೆ ಅನುಮತಿಸುತ್ತದೆ.

### 6.5.2 ವಿಶ್ವಾಸಾರ್ಹತೆ

ಪ್ಲಾಟ್‌ಫಾರ್ಮ್‌ನಲ್ಲಿ ತೊಡಗಿರುವ ಎಲ್ಲಾ ಕಾರ್ಯಕರ್ತರ ನಡುವೆ ವಿಶ್ವಾಸಾರ್ಹತೆಯನ್ನು ಸ್ಥಾಪಿಸಿದಾಗ ಮಾತ್ರ ಪರಿಣಾಮಕಾರಿ

ಮಾರ್ಗದರ್ಶನ ಸಂವಾದಗಳು ನಡೆಯುತ್ತವೆ. ವಿವಿಧ ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯ ಇಲಾಖೆಗಳಿಂದ ವಿಶ್ವಾಸಾರ್ಹ ಮಾರ್ಗದರ್ಶಕರ ನೋಂದಣಿಗಳ ಮೂಲಕ ಟ್ರಸ್ಟ್ ಅನ್ನು ಸಕ್ರಿಯಗೊಳಿಸಲಾಗುತ್ತದೆ. ಪ್ಲಾಟ್‌ಫಾರ್ಮ್‌ನಲ್ಲಿರುವ ಎಲ್ಲಾ ವಿಶ್ವಾಸಾರ್ಹ ಮಾರ್ಗದರ್ಶಕ ಪ್ರೊಫೈಲ್‌ಗಳಿಗೆ ಪರಿಶೀಲಿಸಬಹುದಾದ ಋಜುವಾತುಗಳನ್ನು ಸಕ್ರಿಯಗೊಳಿಸಲಾಗುತ್ತದೆ.

## 6.6 ಏಕೀಕೃತ ಮಾರ್ಗದರ್ಶನ ಜಾಲ (ಯೂನಿಫೈಡ್ ಮೆಂಟರಿಂಗ್ ನೆಟ್ವರ್ಕ್-ಯು.ಎಮ್.ಎನ್)

ಎನ್.ಎಮ್.ಐ ಯ ನಿರಂತರ ಅಭಿವೃದ್ಧಿ, ಬಳಕೆ ಮತ್ತು ಸುಧಾರಣೆಯ ಕಡೆಗೆ ಪರಿಸರ ವ್ಯವಸ್ಥೆಯ ವಿಧಾನವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ನಾವೀನ್ಯತೆ, ವೈವಿಧ್ಯತೆ ಮತ್ತು ಸಂದರ್ಭೋಚಿತತೆಯನ್ನು ತರಲು ಪರಿಸರ ವ್ಯವಸ್ಥೆಯನ್ನು ಶಕ್ತಿಯುತಗೊಳಿಸುವುದು ಅವಶ್ಯಕ. ಯು.ಎಮ್.ಎನ್ ವಿವಿಧ ಪರಿಸರ ವ್ಯವಸ್ಥೆಯ ನಡೆಸುವವರನ್ನು ಹತೋಟಿಗೆ ತರಲು ಮತ್ತು ಎನ್.ಎಮ್.ಐ ಗೆ ಕೊಡುಗೆ ನೀಡಲು ಇದೊಂದು ವೇಗವರ್ಧಕ ಪ್ರಯತ್ನವಾಗಿದೆ. ಅಂತಹ ಮೂಲಸೌಕರ್ಯವು ಪಾಲುದಾರರ ಪರಿಸರ ವ್ಯವಸ್ಥೆಯನ್ನು ಬಳಸಲು, ಮೇಲ್ಭಾಗದಲ್ಲಿ ಪರಿಹಾರಗಳನ್ನು ರಚಿಸಲು ಮತ್ತು ಬಳಕೆಯ ಪ್ರಕರಣಗಳಿಗೆ ಮಾರ್ಗದರ್ಶನ ನೀಡಲು ಅವರ ಪರಿಹಾರಗಳು/ಸೇವೆಗಳನ್ನು ವಿಸ್ತರಿಸಲು ಅನುಮತಿಸುತ್ತದೆ. ಪ್ಲಾಟ್‌ಫಾರ್ಮ್ ಎಲ್ಲವನ್ನೂ ಒಳಗೊಳ್ಳುವ, ಏಕರೂಪದ, ಏಕರೂಪ ಪರಿಹಾರವಾಗಿ ನಿರ್ಮಿಸಲಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲು ಇದು ಪ್ರಮುಖ ಮನಸ್ಥಿತಿಯ ಬದಲಾವಣೆಗಳಿಂದ ಬಂದಿದೆ.

ಈ ಜಾಲವನ್ನು ರಚಿಸಿ ಉಳಿಸಿಕೊಳ್ಳುವಲ್ಲಿ ಎಲ್ಲಾ ಸಂಬಂಧಿತ ಪಾಲುದಾರರೊಂದಿಗೆ ನಿಯಮಿತವಾಗಿ ಪ್ರಯತ್ನಗಳನ್ನು ಮಾಡಲಾಗುತ್ತದೆ. ಬಿಲ್ಡಿಂಗ್ ಬ್ಲಾಕ್ಸ್ (ಪ್ರಮುಖ ಅಂಶಗಳು) ಮತ್ತು ಮುಕ್ತ ಶಿಷ್ಟಾಚಾರಗಳನ್ನು ಒಳಗೊಂಡಿರುವ ಮೂಲಸೌಕರ್ಯದ ತಾಂತ್ರಿಕ ವಿನ್ಯಾಸ ಜಾಲವು ಬೆಳೆಯುತ್ತಲೇ ಇರುವುದನ್ನು ಖಚಿತಪಡಿಸುತ್ತದೆ.

## 6.7 ಪ್ಲಾಟ್‌ಫಾರ್ಮ್ ಆಡಳಿತ

ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸುವುದನ್ನು ಖಚಿತಪಡಿಸಿಕೊಳ್ಳಲು ಎನ್.ಎಮ್.ಐ ಅನ್ನು ನಿಯಂತ್ರಿಸುವ ಮಾರ್ಗದರ್ಶನ ಕಾರ್ಯಕ್ರಮಕ್ಕೆ ಪರಿಣಾಮಕಾರಿ ಆಡಳಿತದ ಅಗತ್ಯವಿದೆ. ಉತ್ತಮ ಆಡಳಿತಕ್ಕಾಗಿ, ಈ ಕೆಳಗಿನ ಮಾನದಂಡಗಳು ಮತ್ತು ಪ್ರಶ್ನೆಗಳನ್ನು ತಿಳಿಸುವ ಅಗತ್ಯವಿದೆ.

ಕೋಷ್ಟಕ 6.1: ಮಾನದಂಡಗಳು ಮತ್ತು ಪ್ರಶ್ನೆಗಳು

| ಮಾನದಂಡ | ಪ್ರಶ್ನೆಗಳು |
|---|---|
| ಸೂಕ್ತತೆ | • ತಾಂತ್ರಿಕ ಮೂಲಸೌಕರ್ಯವು ಬಳಕೆದಾರರ ಸ್ಥಳೀಯ ಮತ್ತು ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಿಗೆ ಸೂಕ್ತವಾಗಿದೆ ಮತ್ತು ಹೊಂದಾಣಿಕೆಯಾಗಿದೆ ಎಂದು ನೀವು ಹೇಗೆ ಖಚಿತಪಡಿಸಿಕೊಳ್ಳುತ್ತೀರಿ?<br>• ಪ್ಲಾಟ್ ಫಾರ್ಮ್ ಸಂವಾದಗಳು ರಚನಾತ್ಮಕ ಸಂವಾದಗಳ ಮೇಲೆ ನಿರ್ಮಿಸಲಾಗುತ್ತದೆ ಎಂದು ನೀವು ಹೇಗೆ ಖಚಿತಪಡಿಸಿಕೊಳ್ಳುತ್ತೀರಿ?<br>• ಮೂಲಸೌಕರ್ಯವನ್ನು ನಿಯಂತ್ರಿಸುವ ಕಾರ್ಯಕ್ರಮ ಮಾಲೀಕರಿಂದ ಸೂಕ್ತವಾದ ಪ್ರತಿಕ್ರಿಯೆ ಕಾರ್ಯವಿಧಾನಗಳನ್ನು ಸ್ಥಾಪಿಸಲಾಗಿದೆ ಎಂದು ನೀವು ಹೇಗೆ ಖಚಿತಪಡಿಸಿಕೊಳ್ಳುತ್ತೀರಿ? |
| ಸಮರ್ಥನೀಯತೆ | • ಪ್ಲಾಟ್‌ಫಾರ್ಮ್, ಡೇಟಾ ಇತ್ಯಾದಿಗಳನ್ನು ಯಾರು ಹೊಂದಿದ್ದಾರೆ?<br>• ಪ್ಲಾಟ್ ಫಾರ್ಮ್ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ ಮತ್ತು ಸೂಕ್ತ ಪ್ರತಿಕ್ರಿಯೆಯನ್ನು ಪರಿಗಣಿಸಲಾಗಿದೆ ಎಂದು ನೀವು ಹೇಗೆ ಖಚಿತಪಡಿಸಿಕೊಳ್ಳುತ್ತೀರಿ? ಇದು ತರಬೇತಿ ಕಾರ್ಯಕ್ರಮಗಳು ಮತ್ತು ಪ್ರತಿಕ್ರಿಯೆ ಕಾರ್ಯವಿಧಾನಗಳನ್ನು ಒಳಗೊಂಡಿರುತ್ತದೆ. |

| | |
|---|---|
| **ವಿಕಾಸಶೀಲತೆ** | • ಸ್ವತ್ತುಗಳನ್ನು ಕೊಡುಗೆ ನೀಡಲು ನೀವು ಬಹು-ಕಾರ್ಯಕರ್ತರನ್ನು ಹೇಗೆ ಸಕ್ರಿಯಗೊಳಿಸುತ್ತೀರಿ (ಉದಾ., ಡೇಟಾ, ಸಾಫ್ಟ್ ವೇರ್, ವಿಷಯ ಇತ್ಯಾದಿ)?<br>• ಸೇವೆಗಳ ಅನ್ವೇಷಣೆ ಮತ್ತು ಬಳಕೆಯನ್ನು ನೀವು ಹೇಗೆ ಸಕ್ರಿಯಗೊಳಿಸುತ್ತೀರಿ?<br>• ಪ್ಲಾಟ್ ಫಾರ್ಮ್‌ನ ವಿಸ್ತರಣೆಯನ್ನು ನೀವು ಹೇಗೆ ಸಕ್ರಿಯಗೊಳಿಸುತ್ತೀರಿ? |

ಅಧ್ಯಾಯ 7

# ಪಯಣ ಮತ್ತು ಮುಂದಿನ ಹಾದಿ



# ಅಧ್ಯಾಯ VII: ಪಯಣ ಮತ್ತು ಮುಂದಿನ ಹಾದಿ

## 7.1 ಎನ್.ಎಮ್.ಎಮ್ ಪಯಣ

ಎನ್.ಎಮ್.ಎಮ್ ಅನ್ನು 2021-22 ನೇ ಸಾಲಿನ ಭಾರತ ಸರ್ಕಾರದ ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣ ಸಚಿವಾಲಯದ ಆದೇಶದಂತೆ ಘೋಷಿಸಲಾಗಿದೆ. ಈ ಕಾರ್ಯವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಶಿಕ್ಷಣ ಸಚಿವಾಲಯವು ಎನ್.ಸಿ.ಟಿ.ಇ ಗೆ ವಹಿಸಿದೆ. ಎನ್.ಎಮ್.ಎಮ್ ನ ವಿಧಾನಗಳನ್ನು ಅಭಿವೃದ್ಧಿಪಡಿಸಲು ಸರಣಿ ಸಂಶೋಧನೆಗಳನ್ನು ನಡೆಸಲಾಯಿತು. ವಿವಿಧ ಪಾಲುದಾರರಿಂದ ಸಲಹೆಗಳು/ಪ್ರತಿಕ್ರಿಯೆಯನ್ನು ಆಹ್ವಾನಿಸಲು ನವೆಂಬರ್ 2021 ರಲ್ಲಿ ಎನ್.ಸಿ.ಟಿ.ಇ ಜಾಲತಾಣ  ಮತ್ತು MyGov ಪೋರ್ಟಲ್‌ನಲ್ಲಿ ನೀಲಿ ಪುಸ್ತಕದ ಮಾರ್ಗದರ್ಶನದ ಮೇಲಿನ ಪ್ರಾಥಮಿಕ ಕರಡು ಪ್ರತಿಯನ್ನು ಪ್ರಕಟಿಸಲಾಗಿದೆ. ಅದರ ನಂತರ, ನೀಲಿ ಪುಸ್ತಕ ರಚನೆಗಾಗಿ ತಳಸ್ತರದಿಂದ ಮೇಲಿನವರೆಗೆ ಅನುಸಂಧಾನಪೂರಕವಾಗಿ ಒಳನೋಟಗಳನ್ನು/ಆಲೋಚನೆಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಶಿಕ್ಷಣ ತಜ್ಞರು, ಶೈಕ್ಷಣಿಕ ಆಡಳಿತಾಧಿಕಾರಿಗಳು, ಶಾಲೆಗಳು, ವಿಶ್ವವಿದ್ಯಾನಿಲಯಗಳು, ಶಿಕ್ಷಕರ ಶಿಕ್ಷಕರು, ಎಸ್.ಸಿ.ಇ.ಆರ್.ಟಿ ಗಳು, ಡಿ.ಐ.ಇ.ಟಿ (ಡಯಟ್)ಗಳು, ಪ್ರಾಂಶುಪಾಲರು, ಶಿಕ್ಷಕರು, ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಒ ಗಳು) ಮತ್ತು ಇತರ ಪಾಲುದಾರರೊಂದಿಗೆ 15 ಮುಕ್ತ ಚರ್ಚೆಗಳನ್ನು ದೇಶಾದ್ಯಂತ ನಡೆಸಲಾಯಿತು. (ಅನುಬಂಧ-IV ನೋಡಿ).

ಎನ್.ಸಿ.ಟಿ.ಇಯು 29ನೇ ಜುಲೈ 2022 ರಂದು ದೇಶದಾದ್ಯಂತ 30 ಕೇಂದ್ರೀಯ ಸ್ವಾಮ್ಯದ ಶಾಲೆಗಳಲ್ಲಿ (15 ಕೇಂದ್ರೀಯ ವಿದ್ಯಾಲಯಗಳು, 10 ಜವಹಾರ್ ಲಾಲ್ ನವೋದಯ ವಿದ್ಯಾಲಯಗಳು ಮತ್ತು 5 ಸಿ.ಬಿ.ಎಸ್.ಇ) ಎನ್.ಎಮ್.ಎಮ್ ಅನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿತು. 30 ಶಾಲಾ ಮುಖ್ಯಸ್ಥರು ಮತ್ತು ನೋಡಲ್ ಅಧಿಕಾರಿಗಳೊಂದಿಗೆ ಎನ್.ಎಮ್.ಎಮ್ ಕುರಿತು 2-ದಿನದ ದೃಷ್ಟಿಕೋನ ಕಾರ್ಯಕ್ರಮವನ್ನು ನಡೆಸಲಾಯಿತು. ಎನ್.ಸಿ.ಟಿ.ಇ ವಿವಿಧ ವಿಭಾಗಗಳಿಂದ 60 ಮಾರ್ಗದರ್ಶಕರುಗಳನ್ನು ಸೇರಿಸಿಕೊಳ್ಳಲಾಯಿತು. ಆಯ್ದ 60 ಮಾರ್ಗದರ್ಶಕರಿಗೆ 2-ದಿನಗಳ ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರವನ್ನು ನಡೆಸಲಾಯಿತು. ಎನ್.ಎಮ್.ಎಮ್ ವೆಬ್ ಪೋರ್ಟಲ್ (ಉಲ್ಲೇಖ. ಅನುಬಂಧ-V) ಅನ್ನು ಪ್ರಾರಂಭಿಸಲಾಗಿದೆ, ಇದು ಆವಿಷ್ಕಾರ, ನಂಬಿಕೆ ಮತ್ತು ರಚನಾತ್ಮಕ ಪ್ರತಿಕ್ರಿಯೆಯ ಆಧಾರದ ಮೇಲೆ ಪರಿಣಾಮಕಾರಿ ಮಾರ್ಗದರ್ಶಕ ಸೆಷನ್'ಗಳನ್ನು ನಡೆಸಲು ಇಂಟರ್ಫೇಸ್ ಆಗಿ ಕಾರ್ಯನಿರ್ವಹಿಸುತ್ತದೆ. ಮಾರ್ಗದರ್ಶಿ ಸಂವಾದಗಳನ್ನು ಪರಿಣಾಮಕಾರಿಯಾಗಿ ಸುಗಮಗೊಳಿಸುವಲ್ಲಿ ಮಾರ್ಗದರ್ಶಕರಿಗೆ ಸಹಾಯ ಮಾಡಲು ವಿವಿಧ ಮಾಡ್ಯೂಲ್'ಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಮೇಲೆ ತಿಳಿಸಿದ ಆಂತರಿಕ ಸಮಾಲೋಚನೆಗಳು, 15 ಮುಕ್ತ ಚರ್ಚೆಗಳು, ಪೈಲಟ್‌ನಿಂದ ಪಡೆದ ಒಳಹರಿವು, ಇತರ ಪಾಲುದಾರರ ಚರ್ಚೆಗಳು ಮತ್ತು ಔಟ್‌ರೀಚ್ ಕಾರ್ಯಕ್ರಮಗಳ ಪರಿಣಾಮವಾಗಿ ಸ್ವೀಕರಿಸಿದ ಪ್ರತಿಕ್ರಿಯೆ/ಸಲಹೆಗಳನ್ನು ಸಂಯೋಜಿಸಿದ ನಂತರ ಎನ್.ಎಮ್.ಎಮ್ ಮೇಲಿನ ನೀಲಿ ಪುಸ್ತಕವನ್ನು ಅಂತಿಮಗೊಳಿಸಲಾಗಿದೆ. ಎನ್.ಎಮ್.ಎಮ್ ನ ಅನುಷ್ಠಾನ, ಮೇಲ್ವಿಚಾರಣೆ ಮತ್ತು ವಿಶ್ಲೇಷಣೆಯನ್ನು ಸುಲಭಗೊಳಿಸಲು ಎನ್.ಸಿ.ಟಿ.ಇ ನಲ್ಲಿ ಡಿಜಿಟಲ್ ವೇದಿಕೆಯಾದ ಶಿಕ್ಷಕರ ಗುಣಮಟ್ಟಕ್ಕಾಗಿ ರಾಷ್ಟ್ರೀಯ ಕೇಂದ್ರವನ್ನು (ಎನ್.ಸಿ.ಟಿ.ಕ್ಯೂ) ಸ್ಥಾಪಿಸಲಾಗಿದೆ. ಎನ್.ಸಿ.ಟಿ.ಕ್ಯೂ ನಿಂದ ಯು.ಎಮ್.ಐ ಕಾರ್ಯನಿರ್ವಹಿಸುತ್ತದೆ.

## 7.2 ಮುಂದಿನ ಹಾದಿ

ಶಿಕ್ಷಕರ ವೃತ್ತಿಪರ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಎನ್.ಎಮ್.ಎಮ್ ಒಂದು ಅಮೂಲ್ಯ ಉಪಕ್ರಮವಾಗಿದೆ. ಮಾರ್ಗದರ್ಶಕರ ಪಾತ್ರವು ಅವರ ಕಲಿಕಾರ್ಥಿಗಳಿಗೆ ಮಾರ್ಗದರ್ಶನ, ಬೆಂಬಲ ಮತ್ತು ಪರಿಣತಿಯನ್ನು ಒದಗಿಸುವುದಾಗಿದೆ. ಇದು ಜ್ಞಾನ ಹಂಚಿಕೆ, ಸಹಯೋಗ ಮತ್ತು ಪ್ರತಿಬಿಂಬಕ್ಕೆ ವೇದಿಕೆಯಾಗಿದೆ. ಎನ್.ಎಮ್.ಎಮ್ ಗಾಗಿ ಅನುಷ್ಠಾನ ಯೋಜನೆಯನ್ನು ಈ ಕೆಳಗಿನಂತೆ ಪರಿಕಲ್ಪಿಸಲಾಗಿದೆ:

**ಕಲಿಕಾರ್ಥಿಗಳಿಗೆ ಮಾರ್ಗದರ್ಶನ ಪರಿಹಾರ ರಚನೆ/ಏಕೀಕರಣಕ್ಕೆ ಮಾರ್ಗದರ್ಶನ:**

- ಇತ್ಯಾದಿಗಳು ಮಾರ್ಗದರ್ಶನ ಕಾರ್ಯಕ್ರಮಗಳಿಗೆ ಸಹಾಯ ಮಾಡುತ್ತವೆ.

**ಎನ್.ಎಮ್.ಎಮ್ ಕಾರ್ಯಕ್ರಮ ರೋಲ್-ಔಟ್**

- 1000 ಮಾರ್ಗದರ್ಶಕರ ತಂಡ ರಚನೆ
- ಮಾರ್ಗದರ್ಶಕರಿಗೆ ಮಾರ್ಗದರ್ಶನ ಸಂಪನ್ಮೂಲಗಳ ರಚನೆ/ ಅನುವಾದ
- ಕೆ.ಪಿ.ಆರ್ ಗಳು/ ಮಾರ್ಗದರ್ಶಕರ ಸಾಮರ್ಥ್ಯ ನಿರ್ಮಾಣ
- ಮಾರ್ಗದರ್ಶಿಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳು/ಪ್ರಮಾಣಪತ್ರಗಳು/ ಅದನ್ನು ಎನ್.ಪಿ.ಎಸ್.ಟಿ ಗೆ ಜೋಡಣೆ ಮಾಡುವ ಮೂಲಕ ವಿತ್ತೀಯವಲ್ಲದ ಪ್ರೋತ್ಸಾಹವನ್ನು ನೀಡಲಾಗುತ್ತದೆ.

**ಎನ್.ಸಿ.ಟಿ.ಇ ಯಿಂದ ಸಂಶೋಧನೆ ಮತ್ತು ಪರಾಮರ್ಶೆ**

- ಕಾರ್ಯಕ್ರಮದ ನಿರಂತರ ಮೌಲ್ಯಮಾಪನ
- ಮಾರ್ಗದರ್ಶಿಗಳು ಮತ್ತು ಕಲಿಕಾರ್ಥಿಗಳಿಂದ ಪ್ರತಿಕ್ರಿಯೆ

ಚಿತ್ರ 7.1: ಮುಂದಿನ ಹಾದಿ

# ಗ್ರಂಥ ಸೂಚಿ


Hansman, C. A. (Ed.). (2002). Critical perspectives on mentoring: Trends and issues. ERIC Clearinghouse on Adult, Career, and Vocational Education, Center on Education and Training for Employment, College of Education, the Ohio State University.

Knowles, M. S. (1980). The modern practice of adult education: From pedagogy to andragogy. Englewood Cliffs, NJ: Cambridge Adult Education.

Kukreja, S., Arora, R., Mahajan, R., & Singh, T. (2020). Mentorship Program: Modern Outlook of Traditional Knowledge. International Journal of Applied and Basic Medical Research, 10(2), 65–67. https://doi.org/10.4103/ijabmr.IJABMR_109_20

Ministry of Human Resource Development. (2020, July 29). National Education Policy 2020. www.Education.Gov.In; Government of India.

https://www.education.gov.in/sites/upload_files/mhrd/files/NEP_Final_English_0.pdf#page=29&zoom=100,97,630

National Institute of Technical Teachers Training and Research. (2020, September). Making Mentoring Relevant: NEP 2020 PERSPECTIVE. NITTTR (nitttrc.ac.in); National Institute of Technical Teachers Training and Research. Retrieved from ReportonMakingMentoring.pdf (nitttrchd.ac.in)

National University of Educational Planning and Administration (NUEPA) New Delhi, Teachers in the Education System, How We Manage the Teacher Workforce in India. (2016).http://www.niepa.ac.in/download/Research/Teachers_in_the_Indian_Education_System.pdf

National University Of Educational Planning And Administration (NUEPA) (2014) School Leadership Development National Program Design and Curriculum Framework. National University of Educational Planning and Administration (NUEPA). https://www.education.gov.in/en/sites/upload_files/mhrd/files/upload_document/SLDP_Framework_NCSL_NUEPA.pdf

Parsloe, E., & Leedham, M. (2009). Coaching and mentoring: Practical conversations to improve learning. Kogan Page Publishers. Retrieved from https://rb.gy/9e732

Soka Gakkai. (2020). The Oneness of Mentor and Disciple. Soka Gakkai (Global).

https://www.sokaglobal.org/resources/study-materials/buddhist-concepts/the-oneness-of-mentor-and-disciple.html#:~:text=In%20Buddhism%2C%20which%20is%20concerned,to%20free%20them%20from%20suffering

Together Platform. "Mentor Handbook." Together Platform, https://www.togetherplatform.com/handbook/mentor. Accessed 16 Aug. 2021.

# ಅನುಬಂಧಗಳು

**I. ಮಾರ್ಗದರ್ಶಕರ ಆಯ್ಕೆಗಾಗಿ ರಚನಾತ್ಮಕ ವಿನ್ಯಾಸ:**

ಮಾರ್ಗದರ್ಶಕರ ಆಯ್ಕೆ ಪ್ರಕ್ರಿಯೆಗೆ ಶಿಫಾರಸು ಮಾಡಲಾದ ವಿನ್ಯಾಸ.

**II. ಮಾರ್ಗದರ್ಶಕರ ಪಾತ್ರಗಳು ಮತ್ತು ಜವಾಬ್ದಾರಿಗಳು:**

ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ ಮಾರ್ಗದರ್ಶಕರ ಪಾತ್ರಗಳು ಮತ್ತು ಜವಾಬ್ದಾರಿಗಳ ಪಟ್ಟಿಯನ್ನು ಸಿದ್ಧಪಡಿಸುವಾಗ ಸಮಾಲೋಚಿಸಲು ಮಾದರಿ ಸಾಧನ.

**III. ಎನ್.ಎಮ್.ಎಮ್ ಗಾಗಿ 15 ಮುಕ್ತ ಚರ್ಚೆಗಳು**

**IV. ಎನ್.ಎಮ್.ಎಮ್ ವೆಬ್ ಪೋರ್ಟಲ್**

# *ಅನುಬಂಧ – I*


## *ನಾನು ಮಾರ್ಗದರ್ಶಕರ ಆಯ್ಕೆಗಾಗಿ ರಚನಾತ್ಮಕ ವಿನ್ಯಾಸ*

ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ
**ಮಾರ್ಗದರ್ಶಕರ ಆಯ್ಕೆ**

**ಉದ್ದೇಶ:** ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ ಮಾರ್ಗದರ್ಶಕರನ್ನು ಆಯ್ಕೆ ಮಾಡಲು ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಲು ಮತ್ತು ಕಾರ್ಯಗತಗೊಳಿಸಲು.

**ಇವರಿಗಾಗಿ ವಿನ್ಯಾಸಗೊಳಿಸಲಾಗಿದೆ:**


**ಕಾರ್ಯಕ್ರಮ ವಿನ್ಯಾಸಕ**


**ಕಾರ್ಯಕ್ರಮ ವಿನ್ಯಾಸಕ**

ಆದರ್ಶ ಮಾರ್ಗದರ್ಶಕರು ಹೊಂದಿರುವ ಕೆಲವು ಗುಣಲಕ್ಷಣಗಳಿವೆ, ಇದರಿಂದಾಗಿ ಮಾರ್ಗದರ್ಶಕರು ಮತ್ತು ಕಲಿಕಾರ್ಥಿಗಳು ಇಬ್ಬರೂ ಸಂಬಂಧದಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಬಹುದು.

### ಮಾರ್ಗದರ್ಶಕರ ಗುಣಲಕ್ಷಣಗಳು


**ವೈವಿಧ್ಯತೆಯ ಅರಿವು**


**ಪರಿಣಾಮಕಾರಿ ಸಂವಾದ**


**ಪರಾನುಭೂತಿ**


**ಅನುಭವ**


**ಹೊಂದಿಕೊಳ್ಳುವಿಕೆ**


**ಸ್ಫೂರ್ತಿದಾಯಕ**


**ನಾಯಕತ್ವ ಕೌಶಲ್ಯಗಳು**


**ಪರಿಣಿತಿ**


**ಪ್ರತಿಫಲನ**


**ತೀಕ್ಷ್ಣ ಆಲೋಚನೆ**


**ಸೃಜನಶೀಲತೆ**

ಸಂಭಾವ್ಯ ಮಾರ್ಗದರ್ಶಕರನ್ನು ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ಬಳಸಿಕೊಂಡು ಗುಣಲಕ್ಷಣಗಳನ್ನು ಪರೀಕ್ಷಿಸಬೇಕು. ಕಾರ್ಯಕ್ರಮವನ್ನು ಕಾರ್ಯಗತಗೊಳಿಸಬೇಕಾದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಬೇಕು. ಲಭ್ಯವಿರುವ ಸಂಪನ್ಮೂಲಗಳು ಮತ್ತು ಅರ್ಜಿದಾರರ ತಂಡಗಳ ಗಾತ್ರವನ್ನು ಅವಲಂಬಿಸಿ, ಆಯ್ಕೆ ಪ್ರಕ್ರಿಯೆಯು ತಂತ್ರಜ್ಞಾನದ ನೆರವಿನ ಡೇಟಾ-ಸಂಗ್ರಹಣೆ ವಿಧಾನಗಳು ಮತ್ತು ವೈಯಕ್ತಿಕ ಚಟುವಟಿಕೆಗಳು ಮತ್ತು ಸಂದರ್ಶನಗಳ ಮೂಲಕ ಸಂಯೋಜನೆಯಾಗಿರಬೇಕು.

*ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ*

# ಮಾರ್ಗದರ್ಶಕರ ಆಯ್ಕೆ

## ಅರ್ಜಿ



ಜನಸಂಖ್ಯಾಶಾಸ್ತ್ರ, ಹಿಂದಿನ ಅನುಭವಗಳು, ಪರಿಣತಿಯ ಪುರಾವೆಗಳು ಇತ್ಯಾದಿಗಳ ಮಾಹಿತಿಯನ್ನು ಸಂಗ್ರಹಿಸಲು ಆರಂಭಿಕ ಅರ್ಜಿ ನಮೂನೆಯನ್ನು ಬಳಸಬೇಕು. ಆನ್‌ಲೈನ್ ಕಲಿಕೆಯ ಸೆಟ್ಟಿಂಗ್‌ನಲ್ಲಿನ ಸವಾಲುಗಳನ್ನು ಪರಿಹರಿಸುವ ಮಾರ್ಗದರ್ಶಕರ ವಿಧಾನ/ಸಾಮರ್ಥ್ಯವನ್ನು ನಿರ್ಣಯಿಸಲು ಅರ್ಜಿ ನಮೂನೆಯು ಪ್ರಕರಣ ಅಧ್ಯಯನ ಸಹ ಒಳಗೊಂಡಿರುತ್ತದೆ. ಈ ನಮೂನೆಯು ಅರ್ಜಿದಾರರನ್ನು ನಿರ್ಣಯಿಸಲು ಬಳಸುವ ಏಕೈಕ ಸಾಧನವಾಗಿರಬಹುದು (ದೊಡ್ಡ-ಪ್ರಮಾಣದ ಕಾರ್ಯಕ್ರಮಗಳು; ಕಡಿಮೆ ಸಂಪನ್ಮೂಲಗಳ ಲಭ್ಯತೆ) ಅಥವಾ ಸಂದರ್ಶನದೊಂದಿಗೆ ಸಂಯೋಜನೆಯಲ್ಲಿ ಬಳಸಬಹುದು (ಸಣ್ಣ-ಪ್ರಮಾಣದ ಕಾರ್ಯಕ್ರಮಗಳು; ಹೆಚ್ಚಿನ ಸಂಪನ್ಮೂಲ ಲಭ್ಯತೆ).

## ಸಂವಾದ/ಸಂದರ್ಶನ



ಸಂದರ್ಶನವು ಅರ್ಜಿದಾರರನ್ನು ಹೆಚ್ಚು ವ್ಯಕ್ತಿನಿಷ್ಠವಾಗಿ ಅರ್ಥಮಾಡಿಕೊಳ್ಳಲು ಮತ್ತು ಅರ್ಜಿ ನಮೂನೆಯಲ್ಲಿ ಪರೀಕ್ಷಿಸಲು ಕಷ್ಟಕರವಾದ ಕೆಲವು ಕೌಶಲ್ಯಗಳನ್ನು ವಿಶ್ಲೇಷಿಸಲು ಸಹಾಯ ಮಾಡುತ್ತದೆ. ಇದು ಅರ್ಜಿದಾರರ ಸಂವಾದಾತ್ಮಕ ಗುಣಲಕ್ಷಣಗಳನ್ನು ಪರೀಕ್ಷಿಸುವ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ, ಉದಾಹರಣೆಗೆ ಗಮನಿಸುವಿಕೆ, ಪೂರ್ವಭಾವಿತೆ, ವಿಶ್ಲೇಷಣಾತ್ಮಕ ತಾರ್ಕಿಕತೆ ಇತ್ಯಾದಿ.

ಆನ್‌ಲೈನ್ ಅರ್ಜಿಗಳು, ಸಂಬಂಧಿತ ಡೇಟಾಬೇಸ್ ನಿರ್ವಹಣಾ ವ್ಯವಸ್ಥೆಗಳು, ವೀಡಿಯೊ ಕಾನ್ಫರೆನ್ಸಿಂಗ್ ಪರಿಕರಗಳು ಇತ್ಯಾದಿಗಳಂತಹ ಪರಿಕರಗಳನ್ನು ಅಪ್ಲಿಕೇಶನ್‌ಗಳನ್ನು ಹೋಸ್ಟ್ ಮಾಡಲು, ನಿರ್ಣಯಿಸಲು ಮತ್ತು ವಿಶ್ಲೇಷಿಸಲು ಬಳಸಬಹುದು.

*ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ*

# ಮಾರ್ಗದರ್ಶಕರ ಆಯ್ಕೆ

**ಜನಸಂಖ್ಯಾಶಾಸ್ತ್ರ**

- ಹೆಸರು
- ಸಂಪರ್ಕ ಮಾಹಿತಿ (ಫೋನ್/ವಿಳಾಸ/ಇಮೇಲ್)
- ಭಾಷಾ ನೈಪುಣ್ಯತೆ
- ಸಂಯೋಜಿತ ಸಂಸ್ಥೆ (ಹೆಸರು, ನಗರ, ರಾಜ್ಯ, ದೇಶ)

**ಅನುಭವ**

- ಪ್ರಸ್ತುತ ಪಾತ್ರ/ಹುದ್ದೆ
- ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವ
- ಪ್ರಸ್ತುತ ಪಾತ್ರದಲ್ಲಿ ಕೆಲಸ ಮಾಡಿದ ಅನುಭವ

**ಜ್ಞಾನ ಮತ್ತು ಪರಿಣತಿ**

- ಪ್ರಾವೀಣ್ಯತೆಗಾಗಿ ಪರೀಕ್ಷಿಸಲು ಮಾರ್ಗದರ್ಶನ ಕಾರ್ಯಕ್ರಮದ ನಿಗದಿತ ವಿಷಯದ ಆಧಾರದ ಮೇಲೆ ಪ್ರಶ್ನಾವಳಿ
- ಮಾರ್ಗದರ್ಶನ ಕಾರ್ಯಕ್ರಮದ ವಿಷಯದೊಂದಿಗೆ ತೊಡಗಿಸಿಕೊಳ್ಳುವಲ್ಲಿ ಹಿಂದಿನ ಅನುಭವದ ಪುರಾವೆ-ಬೋಧನೆ ಅಥವಾ ಕಲಿಕೆಯ ಮೂಲಕ
- ಸಂಬಂಧಿತ ಪ್ರಶಸ್ತಿಗಳು, ಗೌರವಗಳು, ಕ್ಷೇತ್ರದಲ್ಲಿನ ಸಾಧನೆಗಳು

**ಕ್ರಿಯಾಶೀಲತೆ**

ಅವರು ಏಕೆ ಮಾರ್ಗದರ್ಶಕರಾಗಲು ಬಯಸುತ್ತಾರೆ ಎಂಬುದರ ಕುರಿತು ಸ್ಪಷ್ಟೀಕರಣವನ್ನು ಕೇಳುವ ಪ್ರಬಂಧ/ಸಂದರ್ಶನ ಪ್ರಶ್ನೆಗಳು:

- ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸುವ ಅವರ ಉದ್ದೇಶವೇನು?
- ಅವರು ಕಾರ್ಯಕ್ರಮಕ್ಕೆ ಏನು ಕೊಡುಗೆ ನೀಡುತ್ತಾರೆ?
- ಕಾರ್ಯಕ್ರಮದಿಂದ ಅವರು ಹೇಗೆ ಪ್ರಯೋಜನ ಪಡೆಯುತ್ತಾರೆ?
- ಕಾರ್ಯಕ್ರಮದಿಂದ ಶಿಕ್ಷಣ ವ್ಯವಸ್ಥೆಯು ಹೇಗೆ ಪ್ರಯೋಜನ ಪಡೆಯುತ್ತದೆ ಎಂದು ಅವರು ಭಾವಿಸುತ್ತಾರೆ?

**ಗಮನಾರ್ಹತೆ ಮತ್ತು ಚಿಂತನಶೀಲತೆ**

ಮಾರ್ಗದರ್ಶನ ಕಾರ್ಯಕ್ರಮದ ಮೂಲಕ ಪರಿಹರಿಸಲು ಉದ್ದೇಶಿಸಿರುವ ಸಂಬಂಧಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಕರಣ ಅಧ್ಯಯನ.

ಅನುಸರಣಾ ಪ್ರಶ್ನೆಗಳು ಬಹು-ಆಯ್ಕೆ ಅಥವಾ ವ್ಯಕ್ತಿನಿಷ್ಠವಾಗಿರಬಹುದು, ಅವರ ಸಾಮರ್ಥ್ಯವನ್ನು ಪರೀಕ್ಷಿಸಲು ಅರ್ಜಿ ನಮೂನೆಯಲ್ಲಿ ಅಥವಾ ವೈಯಕ್ತಿಕವಾಗಿ ಕೇಳಲಾಗುತ್ತದೆ:

- ಸವಾಲುಗಳನ್ನು ಗುರುತಿಸುವುದು,
- ಸೂಕ್ತ ಬೆಂಬಲವನ್ನು ವಿನ್ಯಾಸಗೊಳಿಸುವುದು,
- ಸಲಹೆಗಳು ಮತ್ತು ಪ್ರತಿಕ್ರಿಯೆಗಳನ್ನು ರೂಪಿಸಿ
- ಸಮಸ್ಯೆಯನ್ನು ಬಗೆಹರಿಸಿ,
- ವಿಭಿನ್ನ ನಾಯಕತ್ವದ ಶೈಲಿಗಳನ್ನು ಅರ್ಥಮಾಡಿಕೊಳ್ಳಿ,
- ಭಿನ್ನಾಭಿಪ್ರಾಯ ಮತ್ತು ನಿಷ್ಕ್ರಿಯತೆಯನ್ನು ನಿಭಾಯಿಸಿ, ಮತ್ತು
- ತಿಳಿಯದ ಉತ್ತರಗಳನ್ನು ನಿಭಾಯಿಸಿ.

**ಸ್ಫೂರ್ತಿದಾಯಕ ಮತ್ತು ವೇಗವರ್ಧಕ**

ವೀಡಿಯೊ ಪ್ರಾಂಪ್ಟ್/ಸಂದರ್ಶನ ಪ್ರಶ್ನೆಗಳು ತಮ್ಮ ತಂಡವನ್ನು ನಿರಂತರ ಕಲಿಕೆ ಮತ್ತು ಸುಧಾರಣೆಗೆ ಹೇಗೆ ಪ್ರೇರೇಪಿಸುತ್ತವೆ ಎಂಬುದರ ಕುರಿತು ಸ್ಪಷ್ಟೀಕರಣವನ್ನು ಕೇಳುತ್ತದೆ. ಅರ್ಜಿದಾರರ ಸಾಮರ್ಥ್ಯಗಳಿಗಾಗಿ ಪ್ರತಿಕ್ರಿಯೆಯನ್ನು ಪರೀಕ್ಷಿಸಬೇಕು:

- ಸ್ಪಷ್ಟ ಮಾತು
- ಆಂಗಿಕ ಭಾಷೆಯ ಸೂಕ್ತ ಬಳಕೆ
- ಪ್ರಶ್ನೆಗೆ ಉತ್ತರಿಸಲು ಸಾಕಷ್ಟು ವಿವರಣೆ
- ಪ್ರತಿಫಲಿತ ಚಿಂತನೆಯನ್ನು ಪ್ರದರ್ಶಿಸಿದರು
- ಶಕ್ತಿಯುತ ಭಾಷಣ
- ಸ್ಫೂರ್ತಿದಾಯಕ ಕಥೆ ಹೇಳುವಿಕೆ/ಕಥೆ ನಿರೂಪಣೆ

*ಅನುಬಂಧ -II*

# ಮಾರ್ಗದರ್ಶಕರ ಪಾತ್ರಗಳು ಮತ್ತು ಜವಾಬ್ದಾರಿಗಳು

ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ

## ಮಾರ್ಗದರ್ಶಕರ ಪಾತ್ರಗಳು ಮತ್ತು ಜವಾಬ್ದಾರಿಗಳು

**ಉದ್ದೇಶ:** ಯಶಸ್ವಿ ಮಾರ್ಗದರ್ಶನ ಸಂಬಂಧದ ಕಡೆಗೆ ಮಾರ್ಗದರ್ಶಕರ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಗುರುತಿಸುವುದು

**ಪಾತ್ರ**

ಮಾರ್ಗದರ್ಶಕರೊಂದಿಗೆ ಮಾತುಕತೆ ನಡೆಸಿದ ನಿರ್ದಿಷ್ಟ ಗುರಿಗಳು ಮತ್ತು ಉದ್ದೇಶಗಳನ್ನು ಅವಲಂಬಿಸಿ, ಮಾರ್ಗದರ್ಶಕರು ಕಲಿಕಾರ್ಥಿಗಳಿಗೆ, ಸಲಹೆ, ಪ್ರತಿಕ್ರಿಯೆ ಮತ್ತು ಬೆಂಬಲವನ್ನು ಒದಗಿಸುತ್ತಾರೆ.


**ಜವಾಬ್ದಾರಿಗಳು**



**ಸಿದ್ಧತೆ**



**ಬೆಂಬಲ**



**ಬೆಳವಣಿಗೆ**


- ಕಲಿಕಾರ್ಥಿಗಳೊಂದಿಗೆ ನಿಯಮಿತವಾಗಿ ಭೇಟಿಯಾಗಲು ಬದ್ಧತೆ ಮತ್ತು ಮಾರ್ಗದರ್ಶನದ ಕೊನೆಯವರೆಗೂ ಒಪ್ಪಿದ ಸಮಯದವರೆಗೆ ಸಂಬಂಧವನ್ನು ಬೆಳೆಸುವುದು
- ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಮತ್ತು ಮಾರ್ಗದರ್ಶಕರ ಮತ್ತು ಕಲಿಕಾರ್ಥಿಗಳ ನಡುವಿನ ಗಡಿಗಳನ್ನು ಗೌರವಿಸುವ ಸುರಕ್ಷಿತ ಮತ್ತು ಬೆಂಬಲ ಸ್ಥಳವನ್ನು ಕಲ್ಪಿಸುವ ಮೂಲಕ ಕಲಿಕಾರ್ಥಿಗಳೊಂದಿಗೆ ವಿಶ್ವಾಸಾರ್ಹ ಸಂಬಂಧವನ್ನು ನಿರ್ಮಿಸುವುದು
- ಕಲಿಕಾರ್ಥಿ-ಚಾಲಿತ ಸಂಬಂಧಕ್ಕಾಗಿ ಸ್ಥಳವನ್ನು ಕಲ್ಪಿಸುವುದು, ಅಲ್ಲಿ ಕಲಿಕಾರ್ಥಿಗಳು ಅವರ ಬೆಳವಣಿಗೆ, ಅಭಿವೃದ್ಧಿ ಮತ್ತು ವೃತ್ತಿ ಯೋಜನೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ
- ಕಲಿಕಾರ್ಥಿಗಳು ಮತ್ತು ಮಾರ್ಗದರ್ಶನ ಚಟುವಟಿಕೆಗಳ ಮೇಲ್ವಿಚಾರಕ (ರು) ಜೊತೆ ಸ್ಪಷ್ಟ ಸಂವಾದ ನಡೆಸುವುದು.



**ಸಿದ್ಧತೆ**



**ಬೆಂಬಲ**



**ಬೆಳವಣಿಗೆ**

- ಕಲಿಕಾರ್ಥಿಗಳೊಂದಿಗಿನ ಸಂಬಂಧಕ್ಕಾಗಿ ಕಲಿಕಾರ್ಥಿಗಳ ಸ್ಪಷ್ಟ ಗುರಿಗಳು ಮತ್ತು ಉದ್ದೇಶಗಳನ್ನು ಸ್ಥಾಪಿಸುವುದು ಮತ್ತು ಉದ್ದೇಶಗಳ ಆಧಾರದ ಮೇಲೆ ಕ್ರಿಯಾ ಯೋಜನೆಗೆ ಮಾರ್ಗದರ್ಶನ ನೀಡುವುದು
- ಅವರ ಸ್ವಪಯಣವನ್ನು ಪ್ರತಿಬಿಂಬಿಸುವುದು ಮತ್ತು ಪರಿಣತಿಯನ್ನು ಹಂಚಿಕೊಳ್ಳಲು ಅವರ ಕಲಿಕಾರ್ಥಿಗಳಿಗೆ ಸಂಬಂಧಿತ ಉದಾಹರಣೆಗಳನ್ನು ನೀಡುವುದು

ಮಾರ್ಗದರ್ಶನ ಕಾರ್ಯಕ್ರಮಕ್ಕಾಗಿ

## ಮಾರ್ಗದರ್ಶಕರ ಪಾತ್ರಗಳು ಮತ್ತು ಜವಾಬ್ದಾರಿಗಳು


- ಸಮಸ್ಯೆಯ ಬಗ್ಗೆ ಚಿಂತನಶೀಲ ಸಂಭಾಷಣೆಗಳನ್ನು ಪ್ರೋತ್ಸಾಹಿಸುವ ಮೂಲಕ ಕಲಿಕಾರ್ಥಿಗಳ ಗುಂಪುಗಳಿಗೆ ಮಾರ್ಗದರ್ಶನದ ಅವಧಿಗಳನ್ನು ಪರಿಣಾಮಕಾರಿಯಾಗಿ ಮುಡಿಪಾಗಿಡುವುದು.
- ಅವರ ವಿಭಿನ್ನ ಕಲಿಕಾರ್ಥಿಗಳ ದೃಷ್ಟಿಕೋನಗಳಲ್ಲಿ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಶ್ಲಾಘಿಸುವುದು
- ಕಾಳಜಿಯಿಂದ ಸಂಘರ್ಷಗಳನ್ನು ಗುರುತಿಸುವುದು ಮತ್ತು ಅದನ್ನು ಶಮನ ಮಾಡುವುದು, ಕಲಿಕಾರ್ಥಿ ಜೊತೆಗಿನ ಭಿನ್ನಾಭಿಪ್ರಾಯಗಳ ಕುರಿತು ಚರ್ಚೆಗೆ ಆಹ್ವಾನಿಸುವುದು
- ಸಮಸ್ಯೆಯ ಬಗ್ಗೆ ಅವರ ತಿಳುವಳಿಕೆಯನ್ನು ಸ್ಪಷ್ಟಪಡಿಸಲು ವಿಚಾರಣಾ ಪ್ರಶ್ನೆಗಳನ್ನು ಕೇಳುವುದು ("ಹೇಗೆ" ಮತ್ತು "ಏನು" ಎಂಬತಹ ಮುಕ್ತ ಪ್ರಶ್ನೆಗಳು)
- ಕಲಿಕಾರ್ಥಿಗಳ ಮಾತನ್ನು ಸಕ್ರಿಯವಾಗಿ ಆಲಿಸುವುದು ಮತ್ತು ಅದನ್ನು ಅವರಿಗೆ ತಿಳಿಯುವಂತೆ ಮಾಡುವುದು.
- ಕಲಿಕಾರ್ಥಿಗಳಿಗೆ ಸೌಖ್ಯದಾಯಕ ಸವಾಲುಗಳನ್ನು ನೀಡುವ ಮೂಲಕ ಸುಧಾರಣೆ ತರುವ ಹಾಗೆ  ಮಾಡುವುದು ಮತ್ತು ಪ್ರಸ್ತುತ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಭವಿಷ್ಯಕ್ಕಾಗಿ ನಿಭಾಯಿಸುವ ತಂತ್ರಗಳನ್ನು ಅಭಿವೃದ್ಧಿಪಡಿಸಲು ಅವರನ್ನು ಸಬಲೀಕರಣಗೊಳಿಸುವುದು.
- ಕಲಿಕಾರ್ಥಿಗಳ ಅಗತ್ಯಗಳ ಆಧಾರದ ಮೇಲೆ ಅವರಿಗೆ ಅಗತ್ಯವಿರುವ ಬೆಂಬಲವನ್ನು ಪ್ರತ್ಯೇಕಿಸುವುದು
- ಪ್ರಾಮಾಣಿಕ, ಮುಕ್ತ, ಧನಾತ್ಮಕ ಮತ್ತು ರಚನಾತ್ಮಕ ಪ್ರತಿಕ್ರಿಯೆಯನ್ನು ಒದಗಿಸುವುದು
- ವೃತ್ತಿಪರ ಅಭಿವೃದ್ಧಿ ಚಟುವಟಿಕೆಗಳನ್ನು ಗುರುತಿಸುವಲ್ಲಿ, ಸೂಕ್ತ ಸಂಪನ್ಮೂಲಗಳು ಮತ್ತು ಇತರ ಕಲಿಕಾರ್ಥಿಗಳೊಂದಿಗೆ ಸಂಪರ್ಕ ಸಾಧಿಸಲು ಮತ್ತು ಸಮಂಜಸ ಸಂಪನ್ಮೂಲಗಳನ್ನು ಜೋಡಿಸುವುದು ಹಾಗೂ ಇತರೆ ಮಾರ್ಗದರ್ಶಕರಿಗೆ ಅಗತ್ಯ ಸಹಾಯ ಮಾಡುವುದು.
- ಅವರ ಸಹ-ರಚಿಸಿದ ಕ್ರಿಯಾ ಯೋಜನೆಗೆ ಕಲಿಕಾರ್ಥಿಗಳನ್ನು ಹೊಣೆಗಾರರನ್ನಾಗಿ ಮಾಡುವುದು ಮತ್ತು ನಿಯಮಿತ ಮಧ್ಯಂತರದಲ್ಲಿ ಕ್ರಿಯಾ ಯೋಜನೆಯನ್ನು ಪರಿಶೀಲಿಸುವುದು



ಸಿದ್ಧತೆ



ಬೆಂಬಲ



ಬೆಳವಣಿಗೆ

- ಅವರ ಕೆಲಸ ಮತ್ತು ಮಾರ್ಗದರ್ಶನದ ಜವಾಬ್ದಾರಿಗಳ ನಡುವೆ ಪರಿಣಾಮಕಾರಿಯಾಗಿ ಸಮಯವನ್ನು ನಿರ್ವಹಿಸುವುದು.
- ತರಬೇತಿಗಳು, ಪ್ರತಿಕ್ರಿಯೆ ಚಕ್ರಗಳು ಇತ್ಯಾದಿಗಳ ಮೂಲಕ ಮಾರ್ಗದರ್ಶನ ಕೌಶಲ್ಯಗಳನ್ನು ಬೆಳೆಸುವುದು ಮತ್ತು ಸುಧಾರಿಸಲು ವೃತ್ತಿಪರ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು.

*ಅನುಬಂಧ* - ***III***

# ಎನ್.ಎಮ್.ಎಮ್ ಗಾಗಿ 15 ಮುಕ್ತ ಚರ್ಚೆಗಳು

## ಎನ್.ಎಮ್.ಎಮ್ ಬಗ್ಗೆ ನಡೆದ ಮುಕ್ತ ಚರ್ಚೆಗಳ ಪಟ್ಟಿ

| ಕ್ರ.ಸಂ. | ಸಂಸ್ಥೆ/ವಿಶ್ವವಿದ್ಯಾಲಯದ ಹೆಸರು | ಚರ್ಚೆಯ ವಿಧಾನ | ದಿನಾಂಕ | ಒಳಗೊಂಡಿರುವ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು |
|---|---|---|---|---|
| 1. | ಕಾಟನ್ ವಿಶ್ವವಿದ್ಯಾಲಯ ಗುವಾಹಟಿ, ಅಸ್ಸಾಂ | ಭೌತಿಕ | 16.11.2021 | ಅಸ್ಸಾಂ, ಪಶ್ಚಿಮ ಬಂಗಾಳ, ಅರುಣಾಚಲ ಪ್ರದೇಶ |
| 2. | ಎಸ್.ಇ.ಆರ್.ಟಿ ಗ್ಯಾಂಗ್ಟಾಕ್, ಸಿಕ್ಕಿಂ | ಮಿಶ್ರಣ | 10.12.2021 | ಸಿಕ್ಕಿಂ, ಮಿಜೋರಾಂ |
| 3. | ಎಸ್.ಇ.ಆರ್.ಟಿ ಜಮ್ಮು ಮತ್ತು ಕಾಶ್ಮೀರ | ಮಿಶ್ರಣ | 13.12.2021 | ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ |
| 4. | ಎಸ್.ಇ.ಆರ್.ಟಿ ಪಾಟ್ನಾ, ಬಿಹಾರ | ಮಿಶ್ರಣ | 15.12.2021 | ಬಿಹಾರ, ಜಾರ್ಖಂಡ್ |
| 5. | ದೆಹಲಿ ವಿಶ್ವವಿದ್ಯಾಲಯ | ಭೌತಿಕ | 16.12.2021 | ದೆಹಲಿ, ಹರಿಯಾಣ |
| 6. | ಬನಸ್ಥಲಿ ವಿದ್ಯಾಪೀಠ, ರಾಜಸ್ಥಾನ | ಮಿಶ್ರಣ | 17.12.2021 | ರಾಜಸ್ಥಾನ |
| 7. | ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್ | ಮಿಶ್ರಣ | 18.12.2021 | ತೆಲಂಗಾಣ, ಆಂಧ್ರಪ್ರದೇಶ |
| 8. | ಎಸ್.ಇ.ಆರ್.ಟಿ ಪುಣೆ, ಮಹಾರಾಷ್ಟ್ರ | ಮಿಶ್ರಣ | 28.12.2021 | ಮಹಾರಾಷ್ಟ್ರ, ಗೋವಾ |
| 9. | ಭಾರತೀಯ ಶಿಕ್ಷಕರ ಶಿಕ್ಷಣ ಸಂಸ್ಥೆ, ಗಾಂಧಿನಗರ, ಗುಜರಾತ್ | ಭೌತಿಕ | 30.12.2021 | ಗುಜರಾತ್ |
| 10. | ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, ಉತ್ತರ ಪ್ರದೇಶ | ಮಿಶ್ರಣ | 12.01.2022 | ಉತ್ತರ ಪ್ರದೇಶ |
| 11. | ಎಸ್.ಇ.ಆರ್.ಟಿ ಭೋಪಾಲ್, ಮಧ್ಯಪ್ರದೇಶ | ಮಿಶ್ರಣ | 17.01.2022 | ಮಧ್ಯಪ್ರದೇಶ |
| 12. | ಎಸ್.ಇ.ಆರ್.ಟಿ ಹಿಮಾಚಲ ಪ್ರದೇಶ | ಮಿಶ್ರಣ | 20.01.2022 | ಹಿಮಾಚಲ ಪ್ರದೇಶ |
| 13. | ಎಸ್.ಇ.ಆರ್.ಟಿ ಪಂಜಾಬ್ | ಮಿಶ್ರಣ | 24.01.2022 | ಪಂಜಾಬ್ |
| 14. | ಹರಿಯಾಣ ಕೇಂದ್ರೀಯ ವಿಶ್ವವಿದ್ಯಾಲಯ | ಮಿಶ್ರಣ | 04.03.2022 | ಹರಿಯಾಣ ಮತ್ತು ಚಂಡೀಗಢ |
| 15. | ಶಾಲಾ ಶಿಕ್ಷಣ ನಿರ್ದೇಶನಾಲಯ, ಪುದುಚೇರಿ | ಭೌತಿಕ | 07.03.2022 | ಪುದುಚೇರಿ |

*ಅನುಬಂಧ* - *IV*

**ಎನ್.ಎಮ್.ಎಮ್ ವೆಬ್ ಪೋರ್ಟಲ್**

# ಎನ್.ಎಮ್.ಎಮ್ ಗಾಗಿ ವೆಬ್ ಪೋರ್ಟಲ್

ಮಾರ್ಗದರ್ಶಕರಿಗಾಗಿ

**1. ಲಾಗಿನ್ (Login)**



## 2. ನನ್ನ ಪ್ರೊಫೈಲ್ (My Profile)



Sangita Pradhan

★★★★★

**Language(s) Known**

| Sr. No. | Language | Speak | Read | Write |
|---|---|---|---|---|
| 1. | Hindi | ☑ | ☑ | ☑ |
| 2. | Marathi | ☑ | ☑ | ☑ |
| 3. | English | ☑ | ☑ | ☑ |

| | |
|---|---|
| Registration No. | MTR000064 |
| Full Name | Sangita Pradhan |
| Email | sangita********@gmail.com |
| Contact Number | 954******* |
| Gender | Female |
| Address | Ganganagar, Rajasthan |
| **Languages** | **English** |
| **Role** | **Teacher (Primary)** |
| **Area of Mentoring** | **Instructional Leadership Skills - Social Science** |
| **Professional Experience (in years)** | **15+** |

**About Yourself**

Credited with extensive experience and professionalism having numerous key responsibilities in the field of education. Around 20 years of experience as an art educator. Always been passionate about teaching, focussed on vigorous planning & implementation at both State and National levels in various capacities. More..

**Current Work Status**

Working

**Name of the organisation/school**
(If retired, please mention the name of the school/organisation last worked at)

**Kendriya Vidyalaya, Ganganagar**

**Click Here to Update your Profile**

## ಎನ್.ಎಮ್.ಎಮ್ ಗಾಗಿ ವೆಬ್ ಪೋರ್ಟಲ್

### ಕಲಿಕಾರ್ಥಿಗಳಿಗಾಗಿ

**1. ಕಲಿಕಾರ್ಥಿಯ ನೊಂದಣಿ**
**(Mente Regitrsation)**



. ಕಲಿಕಾರ್ಥಿಯ ಪ್ರೊಫೈಲ್ (Mente Profie)

## Mentee Profile

**Basic Information** | **Language Proficiency** | **Mentoring Required For**

| | | | |
|---|---|---|---|
| **Registration No.** | 4 | | |
| **First Name*** | Somit | **Last Name** | Mishra |
| **Gender*** | Male | **Email ID*** | ncte.mentee@gmail.com |
| **Mobile Number *** | 888888888 | **State*** | ASSAM |
| **District / City*** | GUWAHATI | **Pin Code*** | 781022 |
| **Organisation Type*** | Central Board of Secondary Education ( CBSE ) | **Name of the School/Institutions*** | Kendriya Vidyalaya, Khanapar |
| **Your Experience in years*** | 6-8 | | |
| **Language*** | English x Dogri x + Add | | |
| **Stage*** | Primary x Select | | |
| **Role*** | Teacher (Primary) x Teacher (Upper Primary) x Teacher (Secondary) x + Add | | |

Update

## 3. ಮಾರ್ಗದರ್ಶಕರಿಗೆ ಪ್ರತಿಕ್ರಿಯೆ (Feedback for Mentor)

Somit Mishra

### Feedback for Mentor: Sangeeta Pradhan (Instructional Leadership Skills-Social Science)

**On a Scale of I to V, V being the highest**

| Sr. No. | Questions | V | VI | III | II | I |
|---|---|---|---|---|---|---|
| 1. | How effective was the mentor in providing guidance and support during your interactions? | 0 | 0 | 0 | 0 | 0 |
| 2. | How much did the mentor challenge you to think critically and independently? | 0 | 0 | 0 | 0 | 0 |
| 3. | How effective was the mentor in providing guidance and support during your interactions? | 0 | 0 | 0 | 0 | 0 |
| 4. | To what extent was the mentor able to create a comfortable and safe environment for open communication and learning? | 0 | 0 | 0 | 0 | 0 |
| 5. | Refrain from encouraging mentees to ask questions during the discussion | 0 | 0 | 0 | 0 | 0 |

**Other Remarks (If any)**

It was an insightful learning experience. The mentor was supportive throughout the session.

राष्ट्रीय अध्यापक शिक्षा परिषद्
(भारत सरकार का एक सांविधिक निकाय)

NCTE

National Council for Teacher Education
(A Statutory Body of the Government of India)

By e-mail / Hand / Speed Post / Fax

File No. NCTE-Acad013/3/2021-Academic Section-HQ 20th September 2021

**OFFICE ORDER**

In supersession to office order of even number dated 31st August 2021, a Committee is constituted to work out the modalities for the creation of a national document and an online platform for Mentoring in Teacher Education at National Council for Teacher Education (NCTE) under National Mission for Mentoring. The details of the committee are given below:

| S. No. | Name and Organization | Designation |
|---|---|---|
| 1. | **Prof. S.C. Roy,** North Eastern Regional Institute of Education, Shillong | Chairperson |
| 2. | **Dr. Ashok Pandey,** Director, Ahlcon International School, Mayur Vihar Phase 1 Delhi | Member |
| 3. | **Prof. Sharad Sinha,** NCERT | Member |
| 4. | **Ms. Kalpana Kapoor** Educationist, Mentor and Leadership Coach | Member |
| 5. | **Shri Sushant Tharappan** Head, Infosys Leadership Institute | Member |
| 6. | **Shri Jagdish Babu,** Chief Operating Officer, Ekstep Foundation. | Member |
| 7. | **Shri Sanjay Purohit,** Chief Curator, Societal Platform | Member |
| 8. | **Dr. Amina Charania,** Associate Professor, Tata Institute of Social Sciences, Mumbai | Member |
| 9. | **Ms. Khushboo Awasthi** Chief Operating Officer, ShikshaLokam. | Member |
| 10. | **Shri Sushil Bhardwaj** State co-ordinator, Punjab | Member |
| 11. | **Shri Abhimanyu Yadav,** Section Officer, National Council of Teacher Education, New Delhi | Convener |

Cont. 2/-

जी-7, सेक्टर-10, द्वारका, नई दिल्ली -110075
G-7, Sector-10, Dwarka, New Delhi - 110075
Phone : +91-11-20893266, Fax : +91-11-20893270 Email : ms@ncte-india.org
Website : www.ncte.gov.in

| | | |
|---|---|---|
| 12. | **Ms. Monika Mishra**<br>Academic Consultant, NCTE | Co-convener |
| 13. | **Ms. Shailla Draboo**<br>Academic Consultant, NCTE | Co-convener |

**2. The Terms of Reference (ToR):**

i. Various sub-committees may be formed from among these members by the chairperson of the committee as per need.

ii. Identification of the focus areas and structured planning for mentoring including formulation of programmatic norms for the effective implementation of the mission as per the directive of NEP 2020.

iii. Formulation of norms for cross linking of experts from school to college.

iv. Review of data and membership received through digital consultation /institutional consultation.

v. Development of the manual on National Mission on Mentoring (NMM) containing guidelines for the prospective mentors and mentees which may be adapted/ adopted by the states /UTs in their own chapters of State Mentoring Mission.

vi. Setting up of Data Strategy Center for the NMM, at the national and regional levels in the headquarters of the National Council for Teachers Education (NCTE).

vii. Preparation of the short term and long-term mentoring manual on Indian languages and subjects specifically for underrepresented population targets groups etc.

viii. Formulation of guidelines for tapping up the potential of senior experienced and retired teachers and also include experts drawn from different sections of societies including professionals from different sectors such as engineering, medical, subject expert teachers, defense personnel, craft persons, trade persons music and dance practitioners etc.

ix. Developing and designing of platform for mentoring including matching of mentor and mentees, agreement and certainty matrix.

x. Chalking out the strategies for reaching out to the target audience of NMM, monitoring and their communication process.

xi. The detailed plan of Action on pilot run of NMM and development of the framework for the national level pool of mentors and mentees.

xii. The Chairperson of the Committee may co-opt other experts to the committee as per need.

2. The committee is expected to submit the complete report along with a plan of Action within a period of 3 months from 31st August 2021.

Cont. 3/-

-3-

3. The NCTE shall provide secretarial assistance for holding of virtual and face to face meetings of the committee and arrangements for payments of TA /DA /Sitting charges as per NCTE norms.

This has the approval of the competent authority.

**(Kesang Y. Sherpa, IRS)**
**Member Secretary, NCTE**

**Copy to:**

1. PS/SO to CP/MS for information please.
2. Deputy Secretary /Under Secretary GA/Academics/Accounts, NCTE
3. Copy to all members etc.
4. Guard /Office file.

NATIONAL MISSION FOR MENTORING

ಪ್ಯಾರಾ 15.11, ಎನ್.ಇ.ಪಿ. 2020

ಶಾಲಾ ಶಿಕ್ಷಕರಿಗೆ ಅಲ್ಪಾವಧಿ ಮತ್ತು ದೀರ್ಘಾವಧಿಯ ಮಾರ್ಗದರ್ಶನ/ವೃತ್ತಿಪರ ಬೆಂಬಲವನ್ನು ನೀಡಲು ಸಿದ್ಧರಿರುವ ಅತ್ಯುತ್ತಮ ವೃತ್ತಿಪರರ ದೊಡ್ಡ ಸಮೂಹದೊಂದಿಗೆ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆಯನ್ನು ಸ್ಥಾಪಿಸಬೇಕು.

Language consultancy and translation facilitated by
**National Translation Mission**
**Central Institute of Indian Languages, Mysore**

ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ
(ಭಾರತ ಸರ್ಕಾರದ ಶಾಸನಬದ್ಧ ಸಂಸ್ಥೆ)
**National Council for Teacher Education**
**(A Statutory Body of the Government of India)**